# ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣಾ ಸಂಸ್ಥೆ (ಸಿಸ್ಲೆಪ್), ಕರ್ನಾಟಕ, ಧಾರವಾಡ

ಸ್ಕೂಲ್ ಲೀಡರ್‌ಶಿಪ್ ಅಕಾಡೆಮಿ (SLA-SISLEP), ಧಾರವಾಡ

(ನ್ಯಾಶನಲ್ ಸೆಂಟರ್ ಫಾರ್ ಸ್ಕೂಲ್ ಲೀಡರ್‌ಶಿಪ್ (NCSL-NIEPA), ನವದೆಹಲಿ ಇವರ ಸಹಯೋಗದಲ್ಲಿ)

## ತರಬೇತಿ ಸಾಹಿತ್ಯ ಕೈಪಿಡಿ

# ಭಾಷಾವನ (LANGUAGE GARDEN) ಮತ್ತು ಭಾಷಾ ಕೌಶಲ್ಯಗಳ ಅಭಿವೃದ್ಧಿ



ಸಹಕಾರ

ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್), ಮಚ್ಛೆ, ಬೆಳಗಾವಿ

# ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಹಾಗೂ ನಿರ್ವಹಣಾ ಸಂಸ್ಥೆ (ಸಿಸ್ಲೆಪ್), ಕರ್ನಾಟಕ, ಧಾರವಾಡ.

**ಸ್ಕೂಲ್ ಲೀಡರ್‌ಶಿಪ್ ಅಕಾಡೆಮಿ (SLA-SISLEP), ಧಾರವಾಡ.**

**ನ್ಯಾಶನಲ್ ಸೆಂಟರ್ ಫಾರ್ ಸ್ಕೂಲ್ ಲೀಡರ್‌ಶಿಪ್ (NCSL-NIEPA), ನವದೆಹಲಿ**

**ಇವರ ಸಹಯೋಗದಲ್ಲಿ**

## ತರಬೇತಿ ಸಾಹಿತ್ಯ ಕೈಪಿಡಿ

# "ಭಾಷಾ ವನ (Language Garden) ಮತ್ತು ಭಾಷಾ ಕೌಶಲ್ಯಗಳು "

**ಸಹಕಾರ**

**ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಮಣ್ಣೂರು, ಬೆಳಗಾವಿ.**

## 2023–24

## ಸಾಹಿತ್ಯ ರಚನಾ ತಂಡ

## ಪರಿಕಲ್ಪನೆ

**ಡಾ. ಬಿ.ಕೆ.ಎಸ್.ವರ್ಧನ್**
**ನಿರ್ದೇಶಕರು,**
ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣಾ ಸಂಸ್ಥೆ
(ಸಿಸ್ಲೆಪ್) ಕರ್ನಾಟಕ, ಧಾರವಾಡ.

## ಮಾರ್ಗದರ್ಶನ

ಶ್ರೀ ಎಸ್.ಡಿ, ಗಾಂಜಿ ಪ್ರಾಚಾರ್ಯರು, ಡಯಟ್, ಮಣ್ಣೂರ ಬೆಳಗಾವಿ

## ತರಬೇತಿ ಸಾಹಿತ್ಯ ರಚನಾ ಸಂಪನ್ಮೂಲ ತಂಡ:

1. ಶ್ರೀ ಅಂಜನೇಯ
   ಹಿರಿಯಉಪನ್ಯಾಸಕರು
   ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ
   ಡಯಟ್ ಮಣ್ಣೂರ ಬೆಳಗಾವಿ.

2. ಶ್ರೀಮತಿ ಭಾರತಿ ದಾಸೋಗ
   ಉಪನ್ಯಾಸಕರು
   ಜಿಲ್ಲಾ ಶಿಕ್ಷಣ ಮತ್ತುತರಬೇತಿ ಸಂಸ್ಥೆ
   ಡಯಟ್, ಮಣ್ಣೂರ ಬೆಳಗಾವಿ.

3. ಡಾ. ಗಜಾನನ. ಬ. ಸೊಗಲನ್ನವರ
   ಕನ್ನಡ ಭಾಷಾ ಅಧ್ಯಾಪಕರು
   ಎಸ್.ವಿ. ಕುಲಕರ್ಣಿ ಸರಕಾರಿ ಪ್ರೌಢ ಶಾಲೆ
   ಚಿಂತಾಮಣರಾವ್
   ಕಾದರವಳ್ಳಿ, ತಾ:ಕಿತ್ತೂರ.

4. ಶ್ರೀಮತಿ ಲಕ್ಷ್ಮೀ ವಿನಾಯಕ
   ಕನ್ನಡ ಭಾಷಾ ಅಧ್ಯಾಪಕರು
   ಸರಕಾರಿ ಪ್ರೌಢ ಶಾಲೆ
   ಶಹಾಪೂರ, ತಾ:ಬೆಳಗಾವಿ ನಗರ.

5. ಶ್ರೀ ಲಗಮಣ್ಣಾ ನಾವಿ
   ಕನ್ನಡ ಭಾಷಾ ಅಧ್ಯಾಪಕರು
   ಸರಕಾರಿ ಪ್ರೌಢ ಶಾಲೆ ಗುಂಜಿ
   ತಾ:ಖಾನಾಪೂರ

6. ಶ್ರೀಮತಿ ಎಸ್. ಸಿ. ಧೂಳಪ್ಪನವರ
   ಕನ್ನಡ ಭಾಷಾ ಅಧ್ಯಾಪಕರು
   ಸರಕಾರಿ ಪ್ರೌಢ ಶಾಲೆ ಸಾಂಬ್ರಾ
   ತಾ:ಬೆಳಗಾವಿ ಗ್ರಾಮೀಣ

7. ಶ್ರೀ ಅರ್ಜುನಕಾಮಣ್ಣವರ
   ಕನ್ನಡ ಭಾಷಾಅಧ್ಯಾಪಕರು
   ಸರಕಾರಿ ಪ್ರೌಢ ಶಾಲೆ ಆಮಟೆ
   ತಾ;ಖಾನಾಪೂರ

8. ಶ್ರೀಮತಿ ಎ.ವಿ.ಜೋಶಿ
   ಕನ್ನಡ ಭಾಷಾಅಧ್ಯಾಪಕರು
   ಸರಕಾರಿ ಪೌಢ ಶಾಲೆ ಖನಗಾವಿ
   ತಾ: ಬೆಳಗಾವಿ ಗ್ರಾಮೀಣ

9. ಶ್ರೀ ರಾಜಶೇಖರ. ನೇಗಿನಹಾಳ
   ಸಹ ಶಿಕ್ಷಕರು
   ಕೆ..ಎಚ್.ಪಿ.ಎಸ್. ಚಿದಂಬರನಗರ,
   ಬೆಳಗಾವಿ

10. ಶ್ರೀ ದಿಲೀಪ ಕಾಳೆ
    ಚಿತ್ರ ಕಲಾ ಉಪನ್ಯಾಸಕರು
    ಡಯಟ್ ಮಣ್ಣೂರ, ಬೆಳಗಾವಿ

11. ಶ್ರೀ ಐ.ಕೆ.ಜೇಡರ
ಸಹ ಶಿಕ್ಷಕರು
ಕೆ.ಎಚ್.ಪಿ.ಎಸ್. ಕಾಮಸೀನಕೊಪ್ಪ
ತಾ:ಖಾನಾಪೂರ

12. ಕುಮಾರಿ ಶುಭಾಕುಲಕರ್ಣಿ
ಕಛೇರಿ ಸಹಾಯಕರು
ಡಯಟ್ ಮಣ್ಣೂರ, ಬೆಳಗಾವಿ.

## ಎಸ್.ಎಲ್.ಎ – ಸಿಸ್ಲೆಪ್ ತಂಡ

- ಶ್ರೀಮತಿ ಎ.ಎನ್ ಶೀಲಾ, ಹಿರಿಯ ಸಹಾಯಕ ನಿರ್ದೇಶಕರು
- ಶ್ರೀಮತಿ ಸ್ವರೂಪಶೀಲಾ ಹೆಚ್ ವಿ, ಉಪನ್ಯಾಸಕರು
- ಶ್ರೀ ಮಹಾವೀರ ಹಂಚಿನಾಳ, ಸಹಾಯಕ ನಿರ್ದೇಶಕರು
- ಡಾ. ಪೂರ್ಣಿಮಾ ಮುಕ್ಕುಂದಿ, ಉಪನ್ಯಾಸಕರು
- ಡಾ. ಎನ್ ಹೆಚ್ ಪೂಜಾರ, ಉಪನ್ಯಾಸಕರು
- ಶ್ರೀಮತಿ ದೇವಿರಮ್ಮ ಎಸ್, ಉಪನ್ಯಾಸಕರು

## ನಿರ್ದೇಶಕರ ಆಶಯ ನುಡಿಗಳು



**ಡಾ.ಬಿ.ಕೆ.ಎಸ್.ವರ್ಧನ್**

**ನಿರ್ದೇಶಕರು**

**ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣಾ ಸಂಸ್ಥೆ (ಸಿಸ್ಲೆಪ್), ಕರ್ನಾಟಕ, ಧಾರವಾಡ.**

ಮಕ್ಕಳ ಶಿಕ್ಷಣ ಹಕ್ಕು ಕಾಯ್ದೆ-2009 ರ ಪ್ರಕಾರ ದೇಶದ ಪ್ರತಿಯೊಂದು ಅರ್ಹ ಮಗುವಿಗೂ ಉಚಿತ ಮತ್ತು  ಕಡ್ಡಾಯ ಶಿಕ್ಷಣವನ್ನು ಖಚಿತಪಡಿಸುವುದು ಸಾಂವಿಧಾನಿಕ ಹೊಣೆಗಾರಿಕೆಯಾಗಿದೆ. ಅರ್ಹ ವಯೋಮಾನದ 6 ರಿಂದ 14 ವರ್ಷದ ಎಲ್ಲ ಮಕ್ಕಳಿಗೆ ಎಂಟು ವರ್ಷಗಳ ಗುಣಾತ್ಮಕ ಶಿಕ್ಷಣವನ್ನು ನಮ್ಮ ಶಾಲೆಗಳಲ್ಲಿ ಖಾತರಿಪಡಿಸುವುದು ಶಾಲಾ ಶಿಕ್ಷಣ ವ್ಯವಸ್ಥೆಯ ಹೊಣೆಗಾರಿಕೆಯಾಗಿದೆ. ಈ ಹಿನ್ನಲೆಯಲ್ಲಿ ಕರ್ನಾಟಕ ಸರಕಾರವು ಅನೇಕ ಉಪಕ್ರಮಗಳನ್ನು ಜಾರಿಗೆ ತಂದಿದೆ. ಶಿಕ್ಷಕರಿಗೆ ಬೆಂಬಲ ವ್ಯವಸ್ಥೆಯಾಗಿ ಕಾರ್ಯ ನಿರ್ವಹಿಸುವ ಶೈಕ್ಷಣಿಕ ಆಡಳಿತಗಾರರ ಮಾರ್ಗದರ್ಶನ, ಹಿಮ್ಮಾಹಿತಿ ಹಾಗೂ ಅನುಪಾಲನೆಯು ಕಾರ್ಯಕ್ಷೇತ್ರದಲ್ಲಿ ಅಗತ್ಯವಾಗಿದೆ. ಇರುವುದನ್ನು ಸರಿಯಾಗಿ ಅನುಷ್ಠಾನವಾಗುವಂತೆ ಮಾಡಬೇಕಾದರೆ ಇಲಾಖಾ ಕಾರ್ಯಕ್ರಮಗಳ ಕುರಿತಂತೆ ನಮ್ಮ ಅರ್ಥೈಸಿಕೊಳ್ಳುವಿಕೆ  ಹೇಗಿರಬೇಕು ಎಂದು ಅರಿಯುವುದು ಮುಖ್ಯವಾಗಿದೆ. ಈ ಪ್ರಯುಕ್ತ ಶೈಕ್ಷಣಿಕ ಆಡಳಿತಗಾರರು ಇಲಾಖಾ ಕಾರ್ಯಕ್ರಮಗಳ ಮೂಲ ಆಶಯ ಹಾಗೂ ಕಾಳಜಿಯನ್ನು ಅರ್ಥೈಸಿಕೊಂಡು ಶಿಕ್ಷಣದ ಗುಣಾತ್ಮಕತೆಯ ನೆಲೆಯನ್ನು ವಿಸ್ತರಿಸುವ ನಿಟ್ಟಿನಲ್ಲಿ ಶಿಕ್ಷಣದ ಗುರಿಗಳನ್ನು ಶಾಲೆಗಳಲ್ಲಿ ಸಾಕಾರಗೊಳಿಸುವ ಮೂಲಕ ನ್ಯಾಯಯುತ, ಸಮಾನತೆಯ, ಮಾನವೀಯ ಮತ್ತು ಸುಸ್ಥಿರ ಸಮಾಜ ನಿರ್ಮಾಣ ಮಾಡಬೇಕಾಗಿದೆ.

ಶೈಕ್ಷಣಿಕ ಆಡಳಿತಗಾರರಿಗೆ ನಾಯಕತ್ವ ತರಬೇತಿ ನೀಡುವ ಜವಾಬ್ದಾರಿಯನ್ನು ಸರ್ಕಾರವು ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣಾ ಸಂಸ್ಥೆ (ಸಿಸ್ಲೆಪ್), ಕರ್ನಾಟಕ, ಧಾರವಾಡ, ಈ ಸಂಸ್ಥೆಗೆ ನೀಡಿದೆ. ಈ ಹಿನ್ನೆಲೆಯಲ್ಲಿ ಶೈಕ್ಷಣಿಕ ಆಡಳಿತಗಾರರಿಗೆ ಜ್ಞಾನ, ಕೌಶಲ, ಶೈಕ್ಷಣಿಕ ದೃಷ್ಟಿಕೋನ ಹಾಗೂ ಮನೋಭಾವದ ಅಂಶಗಳನ್ನು ಒಳಗೊಂಡಂತೆ ಹಲವಾರು ಆಯಾಮಗಳುಳ್ಳ ಆಡಳಿತಾತ್ಮಕ ಹಾಗೂ ಶೈಕ್ಷಣಿಕ ಸಾಮರ್ಥ್ಯಾಭಿವೃದ್ಧಿಯ ಒಟ್ಟು ಹನ್ನೆರೆಡು ತರಬೇತಿ ಸಾಹಿತ್ಯಗಳನ್ನು ಪ್ರಸಕ್ತ ಸಾಲಿನಲ್ಲಿ ಸಿದ್ಧಪಡಿಸಲಾಗಿದೆ. ಶೈಕ್ಷಣಿಕ ಆಡಳಿತಗಾರರು ತಮ್ಮ ಕಾರ್ಯಕ್ಷಮತೆ, ದಕ್ಷತೆಯೊಂದಿಗೆ ಎಲ್ಲರಿಗೂ ಮಾರ್ಗದರ್ಶನ ಮಾಡುವ ಸಾಮರ್ಥ್ಯ ಹೊಂದಿರಬೇಕಾದುದು ಅಗತ್ಯವಾಗಿದೆ. ಗುಣಾತ್ಮಕ ಕಲಿಕೆಯ ಮೂಲಕ ವಿದ್ಯಾರ್ಥಿಗಳ ಉಜ್ವಲ ಭವಿಷ್ಯ ರೂಪಗೊಳ್ಳುವಂತೆ ಮಾಡಲು ಶಾಲಾ ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ ಈ ತರಬೇತಿ ಸಾಹಿತ್ಯಗಳು ಸಹಾಯಕವಾಗಿವೆ.

2023-24 ನೇ ಸಾಲಿನಲ್ಲಿ ನ್ಯಾಷನಲ್ ಸೆಂಟರ್ ಫಾರ್ ಸ್ಕೂಲ್ ಲೀಡರ್‌ಶಿಪ್ (NCSL), ದೆಹಲಿ ಇವರು ಮಾಡ್ಯೂಲ್‌ಗಳ ರಚನೆಗಾಗಿ ರೂ. 65000/- ಗಳನ್ನು ಬಿಡುಗಡೆ ಮಾಡಿದ್ದು, ಈ ಅನುದಾನದಲ್ಲಿ

ಶಾಲಾ ಶಿಕ್ಷಣ ಇಲಾಖೆಯ ವಿವಿಧ ಸ್ತರದ ಅಧಿಕಾರಿಗಳಿಗೆ ನಾಯಕತ್ವ ಹಾಗೂ ಶೈಕ್ಷಣಿಕ ಕ್ಷೇತ್ರಗಳಿಗೆ ಅವಶ್ಯವಿರುವ ಹನ್ನೆರೆಡು ವಿಷಯಗಳ ಮಾಡ್ಯೂಲ್‌ಗಳನ್ನು ರಚಿಸಲು ನಿರ್ಧರಿಸಲಾಯಿತು.ಈ ಮಾಡ್ಯೂಲ್‌ಗಳ ರಚನೆಗಾಗಿ ಧಾರವಾಡ, ಬೆಳಗಾವಿ, ಹಾವೇರಿ, ಗದಗ, ಇಳಕಲ್, ವಿಜಯಪುರ, ತುಮಕೂರು, ಚಿಕ್ಕಮಗಳೂರು, ಬೆಂಗಳೂರು ಗ್ರಾಮೀಣ, ಮೈಸೂರು, ಕೋಲಾರ ಡಯಟ್‌ಗಳನ್ನು ಆಯ್ಕೆ ಮಾಡಿಕೊಂಡು ಪ್ರತಿಯೊಂದು ಡಯಟ್‌ಗೆ ತಲಾ ರೂ.5000/- ಗಳನ್ನು ಬಿಡುಗಡೆ ಮಾಡಿ, ಒಂದೊಂದು ವಿಷಯದ ತರಬೇತಿ ಸಾಹಿತ್ಯ ರಚನೆಯ ಜವಾಬ್ದಾರಿಯನ್ನು ನೀಡಲಾಯಿತು. ಅವರಿಂದ ಸಿದ್ಧಪಡಿಸಲಾದ ಮಾಡ್ಯೂಲ್‌ಗಳನ್ನು ಸಿಸ್ಲೆಪ್‌ನ ಅಧಿಕಾರಿವೃಂದ, ವಿಷಯ ಪರಿಣಿತರು ಹಾಗೂ ಸಂಬಂಧಿಸಿದ ಡಯಟ್‌ನ ಸಿಬ್ಬಂದಿಗಳೊಂದಿಗೆ ಚರ್ಚಿಸಿ ಪುನರ್ ಪರಿಶೀಲಿಸುವ ಮೂಲಕ ಇನ್ನಷ್ಟು ಉತ್ತಮೀಕರಿಸಿ ಅಂತಿಮಗೊಳಿಸಲಾಯಿತು.

ಪ್ರಸ್ತುತ ತರಬೇತಿ ಸಾಹಿತ್ಯಗಳು ಅಂತಿಮ ರೂಪವನ್ನು ಪಡೆಯಲು ಕಾರಣೀಭೂತರಾದ ಶಾಲಾ ಶಿಕ್ಷಣ ಇಲಾಖೆಯ ಎಲ್ಲಾ ಅಧಿಕಾರಿಗಳ, ಸಂಪನ್ಮೂಲ ವ್ಯಕ್ತಿಗಳ, ಶಿಕ್ಷಕರ ಹಾಗೂ ಬೋಧಕೇತರ ವೃಂದದವರ ಸಹಕಾರ ಹಾಗೂ ಪ್ರಯತ್ನವು ಅಭಿನಂದನಾರ್ಹವಾಗಿದೆ. ಎಲ್ಲ ಅರ್ಹ ಮಕ್ಕಳಿಗೂ ಗುಣಾತ್ಮಕ ಶಿಕ್ಷಣವನ್ನು ಖಾತರಿಪಡಿಸಲು, ಶಿಕ್ಷಣದ ದೂರಗಾಮಿ ಗುರಿಗಳನ್ನು ಸಾಕಾರಗೊಳಿಸಲು, ಸುಸ್ಥಿರ ಹಾಗೂ ಸಮಾನತೆಯ ಸಮಾಜ ನಿರ್ಮಾಣ ಮಾಡಲು, ಹೊಸ ಸಾಧ್ಯತೆಗಳನ್ನು ಸೃಷ್ಟಿಸಲು ನಮ್ಮ ಮೇಲ್ವಿಚಾರಕ ಅಧಿಕಾರಿಗಳಿಗೆ ಈ ತರಬೇತಿ ಸಾಹಿತ್ಯಗಳು ನೆರವಾಗುತ್ತವೆಂದು ಆಶಿಸುತ್ತೇನೆ.

**25, ಮಾರ್ಚ್, 2025** **(ಡಾ.ಬಿ.ಕೆ.ಎಸ್.ವರ್ಧನ್)**

## ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣಾ ಸಂಸ್ಥೆಯ ಪರಿಚಯ

ಕರ್ನಾಟಕ ಸರಕಾರವು ಸಂವಿಧಾನದ ಆಶಯ ಮತ್ತು ಜಾಗತಿಕ ಚಿಂತನೆಗಳಿಗೆ ಅನುಗುಣವಾಗಿ ಸ್ವಾಯತ್ತತೆ ಹಾಗೂ ಸ್ವಯಂ ಆಡಳಿತವನ್ನು ಜಾರಿಗೆ ತರಲು ಶಿಕ್ಷಣಾಧಿಕಾರಿಗಳ ಹಾಗೂ ಶಾಲಾ ಮುಖ್ಯಸ್ಥರ ಮನೋಭಾವ, ದೃಷ್ಟಿಕೋನ ಹಾಗೂ ಆಚರಣೆಗಳಲ್ಲಿ ಬದಲಾವಣೆಗಳನ್ನು ತರುವ ಉದ್ದೇಶದಿಂದ ಶಾಲಾ ಮಟ್ಟದಿಂದ ರಾಜ್ಯ ಮಟ್ಟದವರೆಗಿನ ಅಧಿಕಾರಿಗಳಿಗೆ ಅಗತ್ಯವಾದ ಸಾಮರ್ಥ್ಯಾಭಿವೃದ್ಧಿಯನ್ನು ಮಾಡುವ ಸಲುವಾಗಿ 1986 ರಾಷ್ಟ್ರೀಯ ಶಿಕ್ಷಣ ನೀತಿ ಹಾಗೂ 1992ರ ಕಾರ್ಯಾನುಸರಣ ಯೋಜನೆ (Programme of action -POA) ಗಳ ಶಿಫಾರಸ್ಸುಗಳನ್ವಯ 2010ರಲ್ಲಿ 'ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣಾ ಸಂಸ್ಥೆ' (State Institute of School Leadership Educational Planning and Management ) ಯನ್ನು ಸ್ಥಾಪಿಸಿತು. 2011 ರಲ್ಲಿ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮದಡಿಯಲ್ಲಿ ಈ ಸಂಸ್ಥೆಯನ್ನು ನೋಂದಾಯಿಸಲಾಗಿದ್ದು, 'ಕನ್ನಡದ ದೀಪ' ಎಂದು ಹೆಸರಾಗಿರುವ ಡೆಪ್ಯೂಟಿ ಚನ್ನಬಸಪ್ಪನವರು ಕಟ್ಟಿ ಬೆಳೆಸಿದ ಧಾರವಾಡದ ಜಿಲ್ಲಾ ಶಿಕ್ಷಕರ ತರಬೇತಿ ಸಂಸ್ಥೆ, ಡಯಟ್ ಆವರಣದಲ್ಲಿ ಪ್ರಸ್ತುತ ಈ ಸಂಸ್ಥೆಯು ಸ್ವಂತ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದೆ.



### ಸಂಸ್ಥೆಯ ದೂರದರ್ಶಿತ್ವ:

**" ಶಾಲಾ ನಾಯಕತ್ವದಲ್ಲಿ ಮಾರ್ಗದರ್ಶಿ ಅಧಿಕಾರಿಗಳ ಬಲವರ್ಧನೆ "**

ನಮ್ಮ ದೇಶದ ಶಾಲಾ ಶಿಕ್ಷಣ ಕ್ಷೇತ್ರವು ಇಡೀ ಜಗತ್ತಿನಲ್ಲಿಯೇ ವಿಸ್ತೃತವಾದುದಾಗಿದೆ. ಶಾಲಾ ಹಂತದಿಂದ ರಾಜ್ಯ ಮಟ್ಟದವರೆಗೆ ಶಿಕ್ಷಕರು, ವಿವಿಧ ಸ್ತರದ ಇಲಾಖಾ ಮೇಲ್ವಿಚಾರಕರು ಮತ್ತು ಅಧಿಕಾರಿಗಳು ಸಮುದಾಯದ ಸಹಭಾಗಿತ್ವದ ಮೂಲಕ ಶಾಲಾ ಶಿಕ್ಷಣದ ಗುರಿಯನ್ನು ತಲುಪುವಲ್ಲಿ ಶ್ರಮಿಸುತ್ತಿದ್ದಾರೆ. ಕರ್ನಾಟಕ ರಾಜ್ಯವೊಂದರಲ್ಲಿಯೇ 2024–25 ನೇ ಸಾಲಿನಲ್ಲಿ ಒಂದನೇ ತರಗತಿಯಿಂದ 10ನೇ ತರಗತಿಯವರೆಗೆ ಅಂದಾಜು ಒಂದು ಕೋಟಿಗೂ ಅಧಿಕ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಈ ಬೃಹತ್ತಾದ ಶಿಕ್ಷಣ ವ್ಯವಸ್ಥೆಯು ಪರಿಣಾಕಾರಿಯಾಗಿ ಕೆಲಸ ಮಾಡುವಂತಾಗಲು, ಸ್ಥಳೀಯ ಅಗತ್ಯತೆಗಳು ಮತ್ತು ಜಾಗತಿಕ ಚಿಂತನೆಗಳಿಗೆ ಸೇತುವೆಯನ್ನು ಕಟ್ಟಲು ಸ್ವಾಯತ್ತತೆಯುಳ್ಳ, ಕ್ರಿಯಾಶೀಲವಾದ ಹಾಗೂ ಸಮರ್ಥ ಸಮುದಾಯದ ಅಗತ್ಯವಿದ್ದು,

ಇಂತಹ ಒಂದು ಸಮುದಾಯವನ್ನು ಆಡಳಿತ ವಿಕೇಂದ್ರೀಕರಣದ ಮೂಲಕ ರೂಪಿಸಬೇಕು ಎನ್ನುವುದು ಸಂವಿಧಾನದ ಆಶಯವಾಗಿದೆ.

ಜಾಗತಿಕ ಹಂತದಲ್ಲಿ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣಕ್ಕೆ ಪೂರಕವಾಗಿ ಕೆಲಸ ಮಾಡುತ್ತಿರುವ ಯುನೆಸ್ಕೊ, ಶೈಕ್ಷಣಿಕ ಯೋಜನೆಗಳನ್ನು ರೂಪಿಸಲು ಮತ್ತು ನಿರ್ವಹಣೆ ಮಾಡಲು ವಿಶಿಷ್ಟವಾದ ಹಾಗೂ ವಿಭಿನ್ನವಾದ ಸಾಮರ್ಥ್ಯಗಳ ಅಗತ್ಯವಿದೆ ಎಂಬುದನ್ನು ತಿಳಿಸುವುದಲ್ಲದೇ, 'ಇಲಾಖೆ' ಮತ್ತು 'ಸಮುದಾಯದ ಸಹಭಾಗಿತ್ವ' ದಲ್ಲಿ 'ಯೋಜನೆ ಮತ್ತು ನಿರ್ವಹಣೆ 'ಯನ್ನು ನಿಭಾಯಿಸಬೇಕು ಎನ್ನುವುದು ಇದರ ನಿಲುವಾಗಿದೆ.

ಈ ಹಿನ್ನೆಲೆಯಲ್ಲಿ 1986 ಹಾಗೂ 1992 ರ ರಾಷ್ಟ್ರೀಯ ಶಿಕ್ಷಣ ನೀತಿಗಳು ಶೈಕ್ಷಣಿಕ ಕ್ಷೇತ್ರದಲ್ಲಿ ನಿರ್ವಹಣೆಗೆ ಪ್ರಾಮುಖ್ಯತೆಯನ್ನು ನೀಡಿವೆ. ಇದರನ್ವಯ ಎಲ್ಲ ರಾಜ್ಯಗಳಲ್ಲಿ ರಾಜ್ಯ ಹಂತದಲ್ಲಿ SIEMAT (State institute for Educational Management,Administration and Training)ನ್ನು ಸ್ಥಾಪನೆ ಮಾಡಲು ಶಿಫಾರಸ್ಸು ಮಾಡಲಾಯಿತು. ಕರ್ನಾಟಕ ರಾಜ್ಯದಲ್ಲಿ 'SIEMAT' ಹೆಸರಿನ ಬದಲಾಗಿ 2010–11 ರಲ್ಲಿ ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣಾ ಸಂಸ್ಥೆ (SISLEP-State Institute for School Leadership Educational Planning and Management) ಎಂಬ ಹೆಸರಿನಲ್ಲಿ ಸಂಸ್ಥೆಯು ಪ್ರಾರಂಭವಾಯಿತು. 'ಸಿಸ್ಲೆಪ್' ಕರ್ನಾಟಕ ಸೊಸೈಟಿಗಳ ಕಾಯ್ದೆಯ ಅಡಿಯಲ್ಲಿ ನೋಂದಣಿಯಾಗಿರುವ ಸ್ವಾಯತ್ತ ಸಂಸ್ಥೆಯಾಗಿದ್ದು, ಇದರ ವ್ಯವಸ್ಥಾಪನೆ ಹಾಗೂ ಕಾರ್ಯಕ್ರಮಗಳ ರೂಪುರೇಷೆಗಳನ್ನು ಆಡಳಿತ ಮಂಡಳಿ ಹಾಗೂ ಕಾರ್ಯ ನಿರ್ವಾಹಕ ಮಂಡಳಿಗಳ ಮೇಲುಸ್ತುವಾರಿಯಲ್ಲಿ ನಿರ್ವಹಿಸಲಾಗುತ್ತದೆ. ಸಂಸ್ಥೆಯಲ್ಲಿ ಪ್ರಮುಖವಾಗಿ ಐದು ವಿಭಾಗಗಳಲ್ಲಿ ಕ್ರಿಯಾಯೋಜನೆಯನ್ನು ರೂಪಿಸಿ ಶಾಲಾ ನಾಯಕತ್ವ ತರಬೇತಿ, ಸಂಶೋಧನೆ ಮತ್ತು ನಾವಿನ್ಯತಾ ಉಪಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

## ತಾತ್ವಿಕ ಹಿನ್ನೆಲೆ ಹಾಗೂ ಕಾರ್ಯವ್ಯಾಪ್ತಿ:

- ಶೈಕ್ಷಣಿಕ ಆಡಳಿತವನ್ನು ವಿಕೇಂದ್ರೀಕರಿಸುವುದು.
- ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣೆಯ ವ್ಯವಸ್ಥೆಯ ಆಮೂಲಾಗ್ರ ಬದಲಾವಣೆ.
- ದೇಶದ ಅಭಿವೃದ್ಧಿ ಹಾಗೂ ಅಗತ್ಯತೆಗಳಿಗನುಸಾರವಾಗಿ ಶೈಕ್ಷಣಿಕ ದೃಷ್ಟಿಕೋನವನ್ನು ರೂಪಿಸುವುದು ಮತ್ತು ದೀರ್ಘಕಾಲಿಕ ಶೈಕ್ಷಣಿಕ ಯೋಜನೆಗಳನ್ನು ಸಿದ್ಧಪಡಿಸುವುದು.
- ಶಿಕ್ಷಣಕ್ಕೆ ಸಂಬಂಧಿಸಿದಂತೆ ಸರ್ಕಾರಿ ಮತ್ತು ಸರ್ಕಾರೇತರ ಸಂಸ್ಥೆಗಳ ನಡುವೆ ಸಂಪರ್ಕ ಸಾಧಿಸುವುದು.
- ಶೈಕ್ಷಣಿಕ ಸಂಸ್ಥೆಗಳ ಮುಖ್ಯಸ್ಥರು ಹಾಗೂ ಆಡಳಿತಗಾರರಲ್ಲಿ ನಾಯಕತ್ವ ಕೌಶಲ್ಯ ಮತ್ತು ನಿರ್ವಹಣಾ ಸಾಮರ್ಥ್ಯಗಳನ್ನು ಬೆಳೆಸುವುದು.

ಮೇಲ್ಕಂಡ ಕಾರ್ಯಗಳನ್ನು ನಿರ್ವಹಣೆ ಮಾಡಲು ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯವು 'ಶೈಕ್ಷಣಿಕ ಆಡಳಿತಗಾರರ ಸಾಮರ್ಥ್ಯ ಅಭಿವೃದ್ಧಿ ಸಂಸ್ಥೆ' (SIEMAT)ಯನ್ನು ಸ್ಥಾಪಿಸಲು ತೊಂಭತ್ತರ ದಶಕದಲ್ಲಿ ನಿರ್ಧರಿಸಿತು. ಆರಂಭದಲ್ಲಿ 'ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮ' (ಡಿ.ಪಿ.ಇ.ಪಿ) ಇದ್ದ ರಾಜ್ಯಗಳಿಗೆ ಮಾತ್ರ ಸೀಮಿತವಾಗಿದ್ದ SIEMAT ಗಳನ್ನು 2001–02 ರಲ್ಲಿ ಸರ್ವ ಶಿಕ್ಷಣ ಅಭಿಯಾನದ ವ್ಯಾಪ್ತಿಗೆ ತಂದು ದೇಶದ ಎಲ್ಲ ರಾಜ್ಯಗಳಲ್ಲಿ ಸ್ಥಾಪನೆ ಮಾಡಲು ನಿರ್ದೇಶಿಸಲಾಯಿತು. ಕರ್ನಾಟಕ ರಾಜ್ಯವು ತನ್ನ ಅನುಭವಗಳು,

ಕಲಿಕೆಗಳು ಹಾಗು ಅಧ್ಯಯನ ವರದಿಗಳ ಮೂಲಕ ಶೈಕ್ಷಣಿಕ ನಿರ್ವಹಣೆಯ ಅಗತ್ಯವನ್ನು ಕಂಡುಕೊಂಡಿತ್ತು. 2000ರಲ್ಲಿ ಮುಖ್ಯ ಮಂತ್ರಿಗಳ ಟಾಸ್ಕ್ ಫೋರ್ಸ್ ವರದಿ, 2000ರಲ್ಲಿ ಆಡಳಿತ ಸುಧಾರಣೆ ಆಯೋಗದ ವರದಿ, 2002ರಲ್ಲಿ ಶೈಕ್ಷಣಿಕ ದೃಷ್ಟಿಕೋನ ವರದಿಗಳು ಶೈಕ್ಷಣಿಕ ವಿಕೇಂದ್ರೀಕರಣ ಮತ್ತು ಅದಕ್ಕೆ ಬೇಕಾದ ಸಾಮರ್ಥ್ಯಾಭಿವೃದ್ಧಿಯ ಅಗತ್ಯಗಳನ್ನು ಸ್ಪಷ್ಟವಾಗಿ ಗುರುತಿಸಿದವು. ಅಷ್ಟೇ ಅಲ್ಲ ಜಾಗತಿಕ ಮಟ್ಟದಲ್ಲಿ ಪ್ರಯೋಗಗಳ ಮೂಲಕ ಪರಿಣಾಮಕಾರಿ ಎಂದು ಸಾಬೀತಾಗಿದ್ದ 'ಸ್ವಯಂ ಆಡಳಿತ ಶಾಲೆ (Autonomous Schools)' ಗಳ ಪರಿಕಲ್ಪನೆಯನ್ನು ಈ ವರದಿಗಳು ಬೆಂಬಲಿಸಿದ್ದವು.

2003ರಲ್ಲಿ ಶೈಕ್ಷಣಿಕ ಉತ್ಕೃಷ್ಟತೆ ಸಾಧಿಸಲು ನೀತಿ ನಿರೂಪಣೆಗೆ ಬೆಂಬಲ ಒದಗಿಸುವುದಕ್ಕೆ ಸಂಬಂಧಿಸಿದಂತೆ ಅಜೀಂ ಪ್ರೇಮ್‌ಜಿ ಫೌಂಡೇಶನ್‌ನೊಂದಿಗೆ ಒಡಂಬಡಿಕೆ ಮಾಡಿಕೊಂಡ ರಾಜ್ಯ ಸರಕಾರ, ಶಿಕ್ಷಣ ಇಲಾಖೆಯಲ್ಲಿ ಪಾಲಿಸಿ ಪ್ಲ್ಯಾನಿಂಗ್ ಘಟಕವನ್ನು ಸ್ಥಾಪಿಸಿತು. ಶೈಕ್ಷಣಿಕ ನಾಯಕತ್ವ ಮತ್ತು ನಿರ್ವಹಣೆ, ಅಭಿವೃದ್ಧಿ ಯೋಜನೆಗಳನ್ನು, ಶಿಕ್ಷಣ ವ್ಯವಸ್ಥೆಯಲ್ಲಿ ಸಮುದಾಯದ ಭಾಗವಹಿಸುವಿಕೆಯನ್ನು ಹೆಚ್ಚಿಸುವಂತಹ ಕಾರ್ಯಕ್ರಮಗಳನ್ನು, ಇಲಾಖಾ ಯೋಜನೆಯ ಪರಿಣಾಮಗಳನ್ನು ಕುರಿತು ಅಧ್ಯಯನಗಳನ್ನು ಹಮ್ಮಿಕೊಂಡಿತು. ಶೈಕ್ಷಣಿಕ ವಿಕೇಂದ್ರೀಕರಣಕ್ಕೆ ಪೂರಕವಾದ ಶಿಫಾರಸ್ಸುಗಳನ್ನು ಮಾಡಿತು. 2008 ರಲ್ಲಿ ಕೇಂದ್ರ ಸರ್ಕಾರದ ಅನುಮೋದನೆಯೊಂದಿಗೆ 2010ರಲ್ಲಿ ' ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣಾ ಸಂಸ್ಥೆ' (**SISLEP**) ಯನ್ನು ಸ್ಥಾಪಿಸಲಾಯಿತು. 2011 ರಲ್ಲಿ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮದಡಿಯಲ್ಲಿ ಈ ಸಂಸ್ಥೆಯು ನೋಂದಾಯಿಸಲ್ಪಟ್ಟಿದ್ದು, ತದನಂತರದಲ್ಲಿ NIEPA / NCSL ನವದೆಹಲಿಯಿಂದ 2017–18 ರಲ್ಲಿ ಸಿಸ್ಲೆಪ್ ಸಂಸ್ಥೆಯಲ್ಲಿ 'ಶಾಲಾ ನಾಯಕತ್ವ ಅಕಾಡಮಿ' (SLA) ಯನ್ನು ಸ್ಥಾಪಿಸಲಾಗಿದೆ. ಈ ಅಕಾಡಮಿಯು ಉತ್ತಮ ಶೈಕ್ಷಣಿಕ ಅಭ್ಯಾಸಗಳ ವಿಡಿಯೋ ಹಾಗೂ ಯಶೋಗಾಥೆಗಳ ದಾಖಲೀಕರಣ, ಮಾಡ್ಯೂಲ್‌ಗಳ ರಚನೆ ಮತ್ತು ಭಾಷಾಂತರ, ಶೈಕ್ಷಣಿಕ ಮೇಲ್ವಿಚಾರಕರಿಗೆ ಶಾಲಾ ನಾಯಕತ್ವದ ಕುರಿತು ವೆಬಿನಾರ್/ಕಾರ್ಯಾಗಾರಗಳ ಆಯೋಜನೆ ಮುಂತಾದ ಕಾರ್ಯಕ್ರಮಗಳನ್ನು ನಿರ್ವಹಿಸುತ್ತಿದೆ.

❖ **ಸಂಸ್ಥೆಯ ಗುರಿ ಮತ್ತು ಉದ್ದೇಶಗಳು:**

ಶಿಕ್ಷಣದ ನಿರ್ವಹಣೆಯನ್ನು ಸರ್ಕಾರದ ನಿಯಂತ್ರಣದಿಂದ ನಿಧಾನವಾಗಿ ಮತ್ತು ಸ್ಥಿರವಾಗಿ ಸಮರ್ಥ ಸಮುದಾಯಕ್ಕೆ ವರ್ಗಾಯಿಸುವುದು ಸಿಸ್ಲೆಪ್ ಸಂಸ್ಥೆಯ ಪ್ರಮುಖ ಗುರಿಯಾಗಿದೆ. ಈ ಗುರಿಯ ಸಾಧನೆಗೆ ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದ ಎಲ್ಲ ಭಾಗೀದಾರರ ದೃಷ್ಟಿಕೋನ ಮತ್ತು ಮನೋಭಾವದಲ್ಲಿ ಬದಲಾವಣೆ ಅತ್ಯಗತ್ಯ. ಇದಕ್ಕಾಗಿ ಶಾಲಾ ಹಂತದಿಂದ ರಾಜ್ಯ ಹಂತದವರೆಗಿನ ಮೇಲುಸ್ತುವಾರಿ ಅಧಿಕಾರಿಗಳಿಗೆ, ಸಮುದಾಯದ ನಾಯಕರುಗಳಿಗೆ ಸಾಮರ್ಥ್ಯಾಧಾರಿತ ತರಬೇತಿ ನೀಡುವುದು, NIEPA,NCSL,NCERT,DSERT ಮುಂತಾದ ರಾಷ್ಟ್ರೀಯ ಹಾಗೂ ರಾಜ್ಯ ಮಟ್ಟದ ಸಂಸ್ಥೆಗಳೊಂದಿಗೆ ಸಮನ್ವಯ ಸಾಧಿಸುವುದು, ಶೈಕ್ಷಣಿಕ ವಿಷಯಗಳಿಗೆ ಸಂಬಂಧಿಸಿದಂತೆ ಉತ್ತಮ ಅಭ್ಯಾಸಗಳನ್ನು ದಾಖಲೀಕರಿಸುವುದು ಸಂಸ್ಥೆಯ ಜವಾಬ್ದಾರಿಗಳಾಗಿವೆ.

- **ಶಿಕ್ಷಣ ನೀತಿ:** ಸಂಶೋಧನೆಗಳ ಫಲಿತಾಂಶವನ್ನು ಆಧರಿಸಿ ಶಿಕ್ಷಣ ನೀತಿ ರೂಪಿಸಲು ಹಾಗೂ ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣೆ ಮಾಡಲು ರಾಜ್ಯ ಸರ್ಕಾರಕ್ಕೆ ಪರಿಣಿತರ ನೆರವು ನೀಡುವುದು.

- **ಸಾಂಸ್ಥಿಕ ವಿನ್ಯಾಸ ಮತ್ತು ಶೈಕ್ಷಣಿಕ ಪ್ರಕ್ರಿಯೆ** : ಈಗಿರುವ ಶೈಕ್ಷಣಿಕ ವ್ಯವಸ್ಥೆ ಮತ್ತು ಪ್ರಕ್ರಿಯೆಗಳನ್ನು ಅಧ್ಯಯನ ಮಾಡಿ, ಶಿಕ್ಷಣದ ಉದ್ದೇಶದ ಈಡೇರಿಕೆಗೆ ಇವುಗಳಲ್ಲಿ ಅಗತ್ಯ ಬದಲಾವಣೆಗಳನ್ನು ಸೂಚಿಸುವುದು.

**ಮಾನವ ಸಂಪನ್ಮೂಲ ಅಭಿವೃದ್ಧಿ ಮತ್ತು ಪ್ರಕ್ರಿಯೆಗಳು :** ಶಾಲೆಯಿಂದ ರಾಜ್ಯ ಮಟ್ಟದವರೆಗೆ ಶಿಕ್ಷಣ ವ್ಯವಸ್ಥೆಯಲ್ಲಿರುವ ಎಲ್ಲಾ ಭಾಗೀದಾರರಿಗೂ ನಾಯಕತ್ವ, ನಿರ್ವಹಣೆ ಮತ್ತು ಆಡಳಿತಾತ್ಮಕ ವಿಷಯಗಳಲ್ಲಿ ಸಾಮರ್ಥ್ಯಾಭಿವೃದ್ಧಿ ಮಾಡುವುದು; ಎಸ್.ಡಿ.ಎಂ.ಸಿ. ಸದಸ್ಯರು, ಗ್ರಾಮ ಪಂಚಾಯತಿ ಸದಸ್ಯರು ಮತ್ತು ಸಮುದಾಯದ ಇತರರಿಗೆ ಯೋಜನೆ, ಸಹಭಾಗಿತ್ವ ಪ್ರಕ್ರಿಯೆ, ಶಾಲಾಭಿವೃದ್ಧಿ ಯೋಜನೆ ಮೊದಲಾದ ವಿಷಯಗಳಲ್ಲಿ ಸಾಮರ್ಥ್ಯಾಭಿವೃದ್ಧಿ ಮಾಡುವುದು; ಶೈಕ್ಷಣಿಕ ನಿರ್ವಾಹಕರಲ್ಲಿ ಸೇವಾ ಮನೋಭಾವ, ಉತ್ತಮ ಆಡಳಿತ, ಪಾರದರ್ಶಕತೆ ಹಾಗೂ ಹೊಣೆಗಾರಿಕೆ ಮೂಡಿಸಲು ಸೂಕ್ತವಾದ ವಿಧಾನಗಳನ್ನು ಶಿಫಾರಸ್ಸು ಮಾಡುವುದು, ಶೈಕ್ಷಣಿಕ ಯೋಜನೆಗಳ ವೆಚ್ಚ ನಿಗದಿಪಡಿಸುವುದು, ಸಂಪನ್ಮೂಲ ಕ್ರೋಢೀಕರಣ ಮತ್ತು ಬಳಕೆಗೆ ಸಂಬಂಧಿಸಿದಂತೆ ಮಾರ್ಗದರ್ಶನ ಮಾಡುವುದು.

- **ಸಂಶೊಧನೆ ಮತ್ತು ಮೌಲ್ಯಮಾಪನ:** ಶೈಕ್ಷಣಿಕ ನಿರ್ವಹಣಾ ಕ್ಷೇತ್ರವು ನಿರಂತರ ಅಧ್ಯಯನ ಬಯಸುವುದರಿಂದ ಸಂಶೋಧನೆಯು ಸಿಸ್ಲೆಪ್‌ನ ಪ್ರಾಥಮಿಕ ಕಾರ್ಯಗಳಲ್ಲಿ ಒಂದು. ಇಲಾಖೆಯು ಅನುಷ್ಠಾನಗೊಳಿಸುತ್ತಿರುವ ವಿಭಿನ್ನ ಕಾರ್ಯಕ್ರಮಗಳೂ ಸೇರಿದಂತೆ ಇಲಾಖೆಯ ಬೇರೆ ಬೇರೆ ಕ್ಷೇತ್ರಗಳನ್ನು ಕುರಿತು ಸಂಶೋಧನೆ ಕೈಗೊಳ್ಳುವುದು ಮತ್ತು ಮೌಲ್ಯಮಾಪನ ಮಾಡುವುದು ಸಿಸ್ಲೆಪ್‌ನ ಪ್ರಮುಖ ಉದ್ದೇಶವಾಗಿದೆ.

- **ಶಿಕ್ಷಣದ ಗುಣಮಟ್ಟ:** ಶಿಕ್ಷಣ ಇಲಾಖೆಯು ತನ್ನ ಎಲ್ಲ ಕಾರ್ಯಕ್ರಮಗಳ ಮೂಲಕ ಗುಣಾತ್ಮಕ ಶಿಕ್ಷಣ ಮತ್ತು ಗುಣಾತ್ಮಕ ಆಡಳಿತ ನೀಡಲು ಗಮನಹರಿಸಬೇಕು. ಗುಣಮಟ್ಟ ಸುಧಾರಣೆಗೆ ಅಗತ್ಯವಾದ ಸಂಶೋಧನೆಗಳು ಮತ್ತು ತರಬೇತಿಗಳನ್ನು ಸಿಸ್ಲೆಪ್ ಹಮ್ಮಿಕೊಳ್ಳುತ್ತದೆ. ಶೈಕ್ಷಣಿಕ ವರದಿಗಳನ್ನು ಆಧರಿಸಿ ಪ್ರಚಲಿತ ಶೈಕ್ಷಣಿಕ ಸೂಚ್ಯಾಂಕಗಳನ್ನು ವಿಶ್ಲೇಷಿಸುವ ಕೌಶಲ್ಯ ಹಾಗೂ ಸಾಮರ್ಥ್ಯವನ್ನು ಮೇಲ್ವಿಚಾರಕ ಅಧಿಕಾರಿಗಳಲ್ಲಿ ಅಭಿವೃದ್ಧಿಪಡಿಸುವುದು. ಗುಣಾತ್ಮಕ ಶಿಕ್ಷಣದ ಸಾಧನೆಗೆ ಕ್ಷೇತ್ರ ಮಟ್ಟದಲ್ಲಿ ಸೂಕ್ತ ಹೊಳಹುಗಳನ್ನು ಸೃಷ್ಟಿಸುವುದು ಈ ಸಂಸ್ಥೆಯ ಪ್ರಮುಖ ಕಾರ್ಯವಾಗಿದೆ.

❖ **ಧಾರವಾಡದಲ್ಲಿ ಸಂಸ್ಥೆಯ ಸ್ಥಾಪನೆಯ ಹಿನ್ನೆಲೆ:**

ಶೈಕ್ಷಣಿಕ ವಿಕೇಂದ್ರೀಕರಣದ ಆಶಯಕ್ಕೆ ಪೂರಕವಾಗಿ ಹಾಗೂ ರಾಜ್ಯ ಮಟ್ಟದ ಸಂಸ್ಥೆಯೊಂದು ರಾಜಧಾನಿ ಕೇಂದ್ರದಿಂದ ಹೊರಗಡೆ ಬೆಳೆದು ಬರುವುದರಿಂದ ರಾಜ್ಯದ ಎಲ್ಲ ಭಾಗಗಳ ಶೈಕ್ಷಣಿಕ ಭಾಗೀದಾರರ ಪಾಲ್ಗೊಳ್ಳುವಿಕೆ ಸಾಧ್ಯವಾಗುತ್ತದೆಯೆಂಬ ಆಶಯದಿಂದ **'ಸಿಸ್ಲೆಪ್'** ಸಂಸ್ಥೆಯನ್ನು ಶೈಕ್ಷಣಿಕ ಕೇಂದ್ರವಾಗಿರುವ ಧಾರವಾಡದಲ್ಲಿ ಸ್ಥಾಪಿಸಲಾಗಿದೆ. ಇದಕ್ಕಾಗಿ ಧಾರವಾಡದ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ ಆವರಣದಲ್ಲಿ ನಿರ್ಮಾಣವಾದ ಸಂಸ್ಥೆಯ ಸ್ವಂತ ಕಟ್ಟಡದಲ್ಲಿ ಸಂಸ್ಥೆಯು ಕಾರ್ಯ ನಿರ್ವಹಿಸುತ್ತಿದೆ

**ಸಿಸ್ಲೆಪ್ ಸಂಸ್ಥೆಯ ಪ್ರಮುಖ ತರಬೇತಿ ಕಾರ್ಯಕ್ರಮಗಳು :**

ಶಾಲಾ ಮುಖ್ಯಸ್ಥರಲ್ಲಿ ನಾಯಕತ್ವದ ಗುಣಗಳನ್ನು ಅಭಿವೃದ್ಧಿ ಪಡಿಸಲು ಸಿಸ್ಲೆಪ್ ಸಂಸ್ಥೆಯಲ್ಲಿ ವಿವಿಧ ಸ್ತರದ ಮೇಲ್ವಿಚಾರಣಾ ಅಧಿಕಾರಿಗಳ ಬಲವರ್ಧನೆಗೆ ಪೂರಕವಾದ ತರಬೇತಿಗಳನ್ನು ಹಮ್ಮಿಕೊಳ್ಳಲು 2010–11 ರಿಂದ 2022–23 ರ ವರೆಗೆ ರಾಜ್ಯದ ಉಪನಿರ್ದೇಶಕರ ಕಛೇರಿಯ ವಿಷಯ ಪರಿವೀಕ್ಷಕರಿಗೆ, ಡಯಟ್ ಉಪನ್ಯಾಸಕರಿಗೆ ಹಾಗೂ ಬಿ.ಆರ್.ಪಿ, ಶಿಕ್ಷಣ ಸಂಯೋಜಕರು, ಸಿ.ಆರ್.ಪಿ. ಗಳಿಗಾಗಿ ಶೈಕ್ಷಣಿಕ ಹಾಗೂ ಸಾಮರ್ಥ್ಯಾಭಿವೃದ್ಧಿ ತರಬೇತಿಯನ್ನು ಆಯೋಜಿಸಲಾಗುತ್ತಿದೆ. ಸರಕಾರಿ ಪ್ರೌಢಶಾಲಾ ಮುಖ್ಯಶಿಕ್ಷಕರಿಗೆ, ಬಿ.ಆರ್.ಸಿ.

ಸಮನ್ವಯಾಧಿಕಾರಿಗಳು ಹಾಗೂ ಇತರ 'ಬಿ' ವೃಂದದ ಅಧಿಕಾರಿಗಳಿಗೆ ಶೈಕ್ಷಣಿಕ ನಾಯಕತ್ವ ಅಭಿವೃದ್ಧಿ ತರಬೇತಿ, ಪ್ರಾಥಮಿಕ ಶಾಲಾ ಮುಖ್ಯಶಿಕ್ಷಕರಿಗೆ ಶಾಲಾ ನಾಯಕತ್ವ ಅಭಿವೃದ್ಧಿ ತರಬೇತಿ (ಎಸ್.ಎಲ್.ಡಿ.ಪಿ), ಸಹನಿರ್ದೇಶಕರು ಮತ್ತು ತತ್ಸಮಾನ ವೃಂದ ಹಾಗೂ ಉಪನಿರ್ದೇಶಕರು (ಆಡಳಿತ ಮತ್ತು ಅಭಿವೃದ್ಧಿ) ಹಾಗೂ ತತ್ಸಮಾನ ವೃಂದದ ಅಧಿಕಾರಿಗಳಿಗೆ ತರಬೇತಿ, 'ಅಧಿಕಾರದಿಂದ ಉತ್ತರದಾಯಿತ್ವದೆಡೆಗೆ ತರಬೇತಿ, ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ತತ್ಸಮಾನ ವೃಂದದ ಅಧಿಕಾರಿಗಳಿಗೆ ಹಾಗೂ ಉಪನಿರ್ದೇಶಕರ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಯ ಬೋಧಕೇತರ ವೃಂದದ ವ್ಯವಸ್ಥಾಪಕರಿಗೆ ಆಡಳಿತಾತ್ಮಕ ಹಾಗೂ ಸಾಮರ್ಥ್ಯಾಭಿವೃದ್ಧಿ ತರಬೇತಿ' ಎಲ್ಲ ಮೇಲ್ವಿಚಾರಕ ಅಧಿಕಾರಿಗಳಿಗೆ ಮಕ್ಕಳ ಶಿಕ್ಷಣ ಹಕ್ಕು ಕಾಯಿದೆ– 2009ರ ಅಡಿಯಲ್ಲಿ ಗುಣಾತ್ಮಕ ಶಿಕ್ಷಣದ ಸೂಚ್ಯಾಂಕಗಳ ಬಗ್ಗೆ ಒತ್ತು ನೀಡಿ ಪರಿಣಾಮಕಾರಿ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ. ಈ ತರಬೇತಿ ಕಾರ್ಯಕ್ರಮಗಳಿಗೆ ಅವಶ್ಯಕವಿರುವ ವಿಷಯಗಳಲ್ಲಿ ನುರಿತ ತಜ್ಞರಿಂದ ಹಾಗೂ ಕ್ಷೇತ್ರ ಮಟ್ಟದ ಪ್ರಯೋಗಶೀಲ ಪರಿಣಿತರಿಂದ ತರಬೇತಿ ವಿನ್ಯಾಸ (Training Modules) ಗಳನ್ನು ರಚಿಸಲಾಗಿದೆ.

ಪ್ರಸ್ತುತ ಸಾಲಿನಲ್ಲಿ 'ವಿದ್ಯಾರ್ಥಿಗಳೊಂದಿಗೆ ಆಪ್ತಸಮಾಲೋಚನೆ ಹಾಗೂ ಮಾನಸಿಕ ಆರೋಗ್ಯದ ಉಪಕ್ರಮಗಳು', 'ಕಲಿಕಾ ಬೋಧನಾ ಪ್ರಕ್ರಿಯೆಯಲ್ಲಿ ನಾವೀನ್ಯತಾ ಉಪಕ್ರಮಗಳು ಗುಣಾತ್ಮಕ ಶಿಕ್ಷಣದಲ್ಲಿ ಭಾಗೀದಾರರ ಪಾತ್ರ, ಮನೋವೈಜ್ಞಾನಿಕ, ವೈಚಾರಿಕ ದೃಷ್ಟಿಕೋನದ ಅಭಿವೃದ್ಧಿ' ವಿದ್ಯಾರ್ಥಿಗಳು ಮತ್ತು ಶಿಕ್ಷಕರಿಗಾಗಿ, 'ಬಹುತ್ವದ ಭಾರತ ಮತ್ತು ವ್ಯಕ್ತಿಘನತೆ', 'ಗ್ರಂಥಾಲಯ ಬಳಕೆ ಮತ್ತು ನಿರ್ವಹಣೆ', 'ಮಕ್ಕಳ ಹಕ್ಕುಗಳ ಸಂರಕ್ಷಣೆ ಮತ್ತು ಪ್ರಚಲಿತ ಕಾನೂನುಗಳು', 'ಮಕ್ಕಳ ಸುರಕ್ಷತೆಯ ವಿನೂತನ ಮಾರ್ಗೋಪಾಯಗಳು', 'ಭಾಷಾವನ' (Language Garden) ಮತ್ತು ಭಾಷಾ ಕೌಶಲ್ಯಗಳ ಅಭಿವೃದ್ಧಿ, ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಸಾಧಿಸುವಲ್ಲಿ ಶೈಕ್ಷಣಿಕ ನಾಯಕರ ಪಾತ್ರ, ವಿಶೇಷ ಅಗತ್ಯವುಳ್ಳ ಮಕ್ಕಳ ಶಿಕ್ಷಣ ಮತ್ತು ಸೌಲಭ್ಯಗಳ ನಿರ್ವಹಣೆ', ಶೈಕ್ಷಣಿಕ ಸಮೀಕ್ಷೆಗಳು ಮತ್ತು ದತ್ತಾಂಶಗಳ ವಿಶ್ಲೇಷಣೆ' 'ಶಾಲೆಯಿಂದ ಹೊರಗುಳಿದ ಹಾಗೂ ಶಾಲೆ ಬಿಟ್ಟ ಮಕ್ಕಳನ್ನು ಪುನಃ ಶಾಲೆಗೆ ಕರೆತರಲು ಅನುಸರಿಸಬಹುದಾದ ಮಾರ್ಗೋಪಾಯಗಳು', 'ಶಿಕ್ಷಣದಲ್ಲಿ ರಂಗಕಲೆ'ಈ ಕುರಿತಾದ ತರಬೇತಿ ವಿನ್ಯಾಸಗಳನ್ನು ಅವಶ್ಯಕತೆಗಳಿಗನುಸಾರವಾಗಿ ಹೊಸದಾಗಿ ರೂಪಿಸಲಾಗಿದೆ.

ಗುಣಾತ್ಮಕ ಶಿಕ್ಷಣದ ಸಾಧನೆಯ ಹಿನ್ನೆಲೆಯಲ್ಲಿ ಸಿಸ್ಲೆಪ್ ಸಂಸ್ಥೆಯಲ್ಲಿ ಶಿಕ್ಷಣ ಇಲಾಖೆಯ ವಿವಿಧ ಸ್ತರದ ಮೇಲ್ವಿಚಾರಣಾ ಅಧಿಕಾರಿಗಳಿಗೆ ಐದು ದಿನಗಳ **ಆಡಳಿತಾತ್ಮಕ ತರಬೇತಿ** ಹಾಗೂ ಮೂರು ದಿನಗಳ **ಶೈಕ್ಷಣಿಕ ಸಾಮರ್ಥ್ಯಾಭಿವೃದ್ಧಿ** ತರಬೇತಿಗಳನ್ನು ನಡೆಸಲಾಗುತ್ತಿದ್ದು, ಈ ತರಬೇತಿಗಳಲ್ಲಿ 'ಶಾಲಾ ನಾಯಕತ್ವದ ಹೊಸ ಸವಾಲುಗಳು ಮತ್ತು ವಿನೂತನ ಆಚರಣೆಗಳು', ಕಛೇರಿ ಕಾರ್ಯವಿಧಾನ, ಸಂವಹನ ಕೌಶಲ್ಯಗಳು, ಕರ್ನಾಟಕ ನಾಗರಿಕ ಸೇವಾ (ನಡತೆ) ನಿಯಮಗಳು–2021, ಕರ್ನಾಟಕ ನಾಗರೀಕ ಸೇವಾ ನಿಯಮಗಳು.–1957, ಮಾಹಿತಿ ಹಕ್ಕು ಅಧಿನಿಯಮ–2005, ಕೆ ಸಿ ಎಸ್ ಆರ್ ನಿಯಮಗಳು, ರಜಾ ನಿಯಮಗಳು / ಸೇವಾ ಪುಸ್ತಕ ನಿರ್ವಹಣೆ , ಮಾನವ ಸಂಪನ್ಮೂಲ ನಿರ್ವಹಣಾ ವ್ಯವಸ್ಥೆ, ಖಜಾನೆ–2, ಹಣಕಾಸು ನಿರ್ವಹಣೆ. ವಿವಿಧ ಬಿಲ್ಲುಗಳ ತಯಾರಿ,
ಕೆ.ಟಿ.ಪಿ.ಪಿ ಕಾಯ್ದೆ 1999/2000, ವಿಶೇಷ ಅವಶ್ಯಕತೆಯುಳ್ಳ ಮಕ್ಕಳ ಶಿಕ್ಷಣ ಸೌಲಭ್ಯಗಳು ಹಾಗೂ ಪ್ರಚಲಿತ ಕಾನೂನುಗಳು, ಎಸ್.ಎ.ಟಿ.ಎಸ್. (Student Achievement Tracking System) ಮುಂತಾದ ವಿಷಯಾಂಶಗಳ ಕುರಿತಾಗಿ ತರಬೇತಿಯನ್ನು ನೀಡಲಾಗುತ್ತಿದೆ.

ಪ್ರಸ್ತುತ ಸಿಸ್ಲೆಪ್ ಸಂಸ್ಥೆಯಲ್ಲಿ 8206 ಹಾಗೂ ಕ್ಯಾಸ್ಕೇಡ್ ವಿಧಾನದಲ್ಲಿ ಡಯಟ್ ಹಂತದಲ್ಲಿ 9500 ವಿವಿಧ ಸ್ತರದ ಅಧಿಕಾರಿಗಳಿಗೆ ತರಬೇತಿಯನ್ನು ನೀಡಲಾಗಿದೆ. ಅವಶ್ಯಕತೆಗಳಿಗನುಗುಣವಾಗಿ ಇನ್ನಷ್ಟು ತರಬೆತಿ ವಿನ್ಯಾಸಗಳನ್ನು ರಚಿಸಲು ಹಾಗೂ ತರಬೇತಿಗಳನ್ನು ಆಯೋಜಿಸುವಲ್ಲಿ ಸಂಸ್ಥೆಯು ನಿರಂತರ ಕ್ರಿಯಾಶೀಲವಾಗಿದೆ.

ಆ ಮೂಲಕ ಕರ್ನಾಟಕ ರಾಜ್ಯದ ಶಾಲೆಗಳಲ್ಲಿ ದಾಖಲಾಗುವ ಅರ್ಹ ವಯೋಮಾನದ ಎಲ್ಲ ಮಕ್ಕಳಿಗೆ ಗುಣಾತ್ಮಕ ಶಿಕ್ಷಣವನ್ನು ಖಾತರಿಪಡಿಸಲು ಆಶಿಸಲಾಗಿದೆ. ಶಾಲಾ ಶಿಕ್ಷಣ ಇಲಾಖೆಯಲ್ಲಿ ಐವತ್ತು ಸಾವಿರ ಪ್ರಾಥಮಿಕ ಶಾಲೆಗಳು ಹಾಗೂ ಇಪ್ಪತ್ತೈದು ಸಾವಿರಕ್ಕಿಂದ ಹೆಚ್ಚು ಪ್ರೌಢಶಾಲೆಗಳು ಕಾರ್ಯನಿರ್ವಹಿಸುತ್ತಿದ್ದು, ಈ ಸಂಸ್ಥೆಗಳ ಮುಖ್ಯಸ್ಥರುಗಳು ಅತ್ಯುತ್ತಮ ಮೇಲ್ವಿಚಾರಕ ಕೌಶಲಗಳನ್ನು ಹಾಗೂ ಉತ್ತಮ ನಾಯಕತ್ವ ಗುಣಗಳನ್ನು ಹೊಂದಿರಬೇಕಾಗುತ್ತದೆ. ಇಷ್ಟು ಬೃಹತ್ ಸಂಖ್ಯೆಯ ಮೇಲ್ವಿಚಾರಕ ಅಧಿಕಾರಿಗಳ ಸಾಮರ್ಥ್ಯಾಭಿವೃದ್ಧಿಯ ಸಂಕಲ್ಪದೊಂದಿಗೆ ಈ ಸಂಸ್ಥೆಯು ಕಾರ್ಯ ನಿರ್ವಹಿಸುತ್ತಿದೆ. ಈ ಭಾಗದಲ್ಲಿ ಒಂದು ಅತ್ಯುತ್ತಮ ಶಾಲಾ ನಾಯಕತ್ವ ಹಾಗೂ ನಿರ್ವಹಣಾ ಸಂಸ್ಥೆಯು ಅಭಿವೃದ್ಧಿ ಹೊಂದುತ್ತಿರುವುದು ಒಂದು ಆಶಾದಾಯಕ ವಿಷಯವಾಗಿದೆ. ಆ ಮೂಲಕ ಗುಣಾತ್ಮಕ ಶಿಕ್ಷಣದ ಗುರಿ ಸಾಧನೆಗೈದು ಸಾಂವಿಧಾನಿಕ ಆಶಯಗಳನ್ನು ಇಡೇರಿಸುವ ಪ್ರಯತ್ನಕ್ಕೆ ಇಂಬು ದೊರೆತಿದೆ. ಪ್ರಸ್ತುತ ಈ ಸಂಸ್ಥೆಯಲ್ಲಿ ಯೋಜನೆ ಮತ್ತು ನೀತಿ ನಿರೂಪಣೆ ವಿಭಾಗ, ಶಾಲಾ ನಿರ್ವಹಣಾ ವಿಭಾಗ, ಶೈಕ್ಷಣಿಕ ಹಣಕಾಸು ವಿಭಾಗ, ಸಂಶೋಧನೆ, ಮೌಲ್ಯಾಂಕನ ಮತ್ತು ಶೈಕ್ಷಣಿಕ ನಾವೀನ್ಯತಾ ವಿಭಾಗ, ಶೈಕ್ಷಣಿಕ ದತ್ತಾಂಶ ವಿಶ್ಲೇಷಣೆ ಮತ್ತು ಮಾಹಿತಿ ನಿರ್ವಹಣಾ ವಿಭಾಗಗಳಿವೆ. ಶಾಲೆಗಳ ತರಗತಿ ಕೋಣೆಗಳಲ್ಲಿ ದೇಶದ ಭವಿಷ್ಯವು ನಿರ್ಮಾಣವಾಗುತ್ತದೆ ಎಂಬ ಆಶಯಕ್ಕೆ ಪೂರಕವಾಗಿ ಹಾಗೂ ದೇಶಕ್ಕೆ ಬೇಕಾದ ಅತ್ಯುತ್ತಮ ನಾಗರಿಕರನ್ನು ನಿರ್ಮಾಣ ಮಾಡುವ ಮಹತ್ಕಾರ್ಯದಲ್ಲಿ ರಾಜ್ಯದ ಎಲ್ಲ ಹಂತದ ಜನಪ್ರತಿನಿಧಿಗಳು, ಶಿಕ್ಷಣ ತಜ್ಞರು, ಸಾಹಿತಿಗಳು, ಶಿಕ್ಷಣ ಪ್ರೇಮಿಗಳು, ಮತ್ತು ಉದ್ಯಮಗಳ ನೇತಾರರು ಈ ಸಂಸ್ಥೆಯ ಪ್ರಯತ್ನಗಳಲ್ಲಿ ಪಾಲುದಾರಿಕೆ ವಹಿಸಿ ಸಹಕಾರ ನೀಡುತ್ತಾರೆಂದು ಆಶಿಸಲಾಗಿದೆ.

**"ಬಿಂಕಕ್ಕೆ ಡೊಳ್ಳಿವುದು ವಿದ್ಯೆಯೇ?,**

**ಅವಿದ್ಯೆ ತವಿಪುದಾವುದೋ ಅಹಂಕಾರಮಂ ಅದು ವಿದ್ಯೆ.**

**ಮಿಕ್ಕುದೆಲ್ಲಂ ಅವಿದ್ಯೆ"**

**-- ರಾಷ್ಟ್ರಕವಿ ಕುವೆಂಪು.**

# ಪರಿವಿಡಿ


| ಕ್ರ.ಸಂ. | ಅಧ್ಯಾಯಗಳು | ಪುಟ ಸಂಖ್ಯೆ |
|---|---|---|
| *1* | **ಅಧ್ಯಾಯ 1 – ಭಾಷಾ ಶಿಕ್ಷಣ** | |
| | 1.1 ಭಾಷಾ ಶಿಕ್ಷಣ | 1–14 |
| | 1.2 ಭಾಷಾ ಶಿಕ್ಷಣದ ಮಹತ್ವ | |
| | 1.3 ಶೈಕ್ಷಣಿಕ ಮಾರ್ಗದರ್ಶಕರ ಜವಾಬ್ದಾರಿಗಳು | |
| | 1.4 ಭಾಷಾ ಕಲಿಕೆ ಮತ್ತು ಶೈಕ್ಷಣಿಕ ಮಾರ್ಗದರ್ಶಕರು | |
| | 1.5 ಶೈಕ್ಷಣಿಕ ಮಾರ್ಗದರ್ಶಕರು ಮತ್ತು ಭಾಷಾ ಕೌಶಲ ಅಭಿವೃದ್ಧಿ | |
| | 1.6 ಭಾಷಾ ಕೌಶಲ ಅಭಿವೃದ್ಧಿಯ ಉಪಕ್ರಮಗಳು | |
| | ಅ) ವರ್ಗ ಕೋಣೆ | |
| | ಆ) ಭಾಷಾ ಆಟಗಳು | |
| | ಇ) ಭಾಷಾ ಒಲಿಂಪಿಕ್ಸ್ | |
| | ಈ) ಭಾಷಾ ಪ್ರಯೋಗಾಲಯ | |
| | ಉ) ಭಾಷಾ ವನ | |
| | ಊ) ಭಾಷಾವನ ಒಂದು ಮಾದರಿ | |
| | | |
| *2* | **ಅಧ್ಯಾಯ 2 – ಶಾಲಾ ಭಾಷಾವನ** | |
| | 2.1 ಪೀಠಿಕೆ | 15–26 |
| | 2.2 ಶಾಲಾ ಭಾಷಾ ವನದ ಮಹತ್ವ | |
| | 2.3 ಶಾಲಾ ಭಾಷಾವನದ ಮೂಲಕ ಭಾಷಾ ಕೌಶಲಗಳ ಅಭಿವೃದಿ | |
| | 2.4 ಶಾಲಾ ಭಾಷಾವನದ ಮೂಲಕ ಆಲಿಸುವಿಕೆ ಕೌಶಲ್ಯ ಅಭಿವೃದ್ಧಿ ಚಟುವಟಿಕೆಗಳು | |
| | 2.5 ಶಾಲಾ ಭಾಷಾವನದ ಮೂಲಕ ಮಾತನಾಡುವಿಕೆ ಚಟುವಟಿಕೆಗಳು | |
| | 2.6 ಓದುಗಾರಿಕೆ ಕೌಶಲ ಬೆಳಸುವ ಚಟುವಟಿಕೆಗಳು | |
| | 2.7 ಭಾಷಾ ವನದಲ್ಲಿ ಓದು ಕೌಶಲದ ಚಟುವಟಿಕೆಗಳು | |
| | 2.8 ಬರೆಯುವಿಕೆ ಕೌಶಲ ಬೆಳೆಸುವ ಚಟುವಟಿಕೆಗಳು. | |
| | 2.9. ಗ್ರಂಥಾವಲೋಕನ ಕೌಶಲ ಬೆಳೆಸುವ ಚಟುವಟಿಕೆಗಳು | |
| | 2.10 ಚಿಂತನ ಕೌಶಲ ಬೆಳೆಸುವ ಚಟುವಟಿಕೆಗಳು | |
| | | |
| *3* | **ಅಧ್ಯಾಯ 3 ಭಾಷಾವನ ಮತ್ತು ಮಾಹಿತಿ ತಂತ್ರಜ್ಞಾನ** | |
| | 3.1 ಪೀಠಿಕೆ | 27–37 |
| | 3.2 ಮಾಹಿತಿ ತಂತ್ರಜ್ಞಾನ | |

| | | |
|---|---|---|
| | 3.3 ಭಾಷಾ ಕೌಶಲ್ಯಾಭಿವೃದ್ಧಿ ಮತ್ತು ಮಾಹಿತಿ ತಂತ್ರಜ್ಞಾನ | |
| | 3.4 ತಂತ್ರಜ್ಞಾನ ಆಧಾರಿತ ಭಾಷಾವನ ನಿರ್ವಹಣೆ ಚಟುವಟಿಕೆಗಳು | |
| | | |
| *4* | **ಅಧ್ಯಾಯ 4– ಶಾಲಾ ಭಾಷಾವನ ನಿರ್ಮಾಣ ಮತ್ತು ನಿರ್ವಹಣೆ** | |
| | 4.1 ಪೀಠಿಕೆ | 38–45 |
| | 4.2 ಶಾಲಾ ಭಾಷಾವನ ನಿರ್ಮಾಣದ ಉದ್ದೇಶಗಳು | |
| | 4.3 ಶಾಲಾ ಭಾಷಾವನ ನಿರ್ಮಾಣದ ಪರಿಕರಗಳು | |
| | 4.4 ಶಾಲಾ ಭಾಷಾವನ ನಿರ್ಮಾಣದ ಒಂದು ಮಾದರಿ | |
| | 4.5 ಶಾಲಾ ಭಾಷಾವನ ನಿರ್ವಹಣೆ ಜವಾಬ್ದಾರಿಗಳು | |
| | 4.6 ಶಾಲಾ ಭಾಷಾವನ ನಿರ್ಮಾಣದ ಸವಾಲುಗಳು | |

| | | |
|---|---|---|
| *5* | **ಅನುಬಂಧಗಳು** | *46-54* |
| | • ತರಬೇತಿ ಪ್ರಕ್ರಿಯೆ | |
| | • ತರಬೇತಿ ವೇಳಾಪಟ್ಟಿ | |
| | • ಪ್ರಶ್ನೆ ಪತ್ರಿಕೆಗಳು | |
| | • ಆಕರ ಗ್ರಂಥಗಳು | |
| | • ಛಾಯಾಚಿತ್ರಗಳು | |

## ಅಧ್ಯಾಯ 1 – ಭಾಷಾ ಶಿಕ್ಷಣ

ಬೋಧನಾ ಕಲಿಕಾ ಪ್ರಕ್ರಿಯೆಯಲ್ಲಿ ಮಾರ್ಗದರ್ಶನ ಎಂಬುದು ನಿರ್ದಿಷ್ಟ ಮಾರ್ಗದಲ್ಲಿ ಸಾಗುಲು ಬೆಂಬಲವನ್ನು ಒದಗಿಸುವುದಾಗಿದೆ. ಮಕ್ಕಳು ಕಲಿಕೆ ಮೂಲಕ ಸಾಮರ್ಥ್ಯ ಅಭಿವೃದ್ಧಿ ಮಾಡಿಕೊಳ್ಳಬೇಕೆಂದರೆ ಮಾರ್ಗದರ್ಶನವು ಮುಖ್ಯವಾಗಿ ಬೇಕು. ಶೈಕ್ಷಣಿಕ ಮಾರ್ಗದರ್ಶನ ಎಂಬುದು ಬೋಧನಾ ಕಲಿಕಾ ಪ್ರಕ್ರಿಯೆ ಹಿನ್ನೆಲೆಯಲ್ಲಿ ನಡೆಯುವ ಬಹುಮುಖಿ ವ್ಯವಸ್ಥೆಯಾಗಿದೆ. ಶಿಕ್ಷಣ ಶಿಕ್ಷಕ ಕಲಿಕಾರ್ಥಿ ನಡುವೆ ಸಾಮರಸ್ಯವನ್ನು ಸೃಜಿಸಿ ಸಾಮರ್ಥ್ಯ ರೂಢಿಯ ಜವಾಬ್ದಾರಿಯನ್ನು ವ್ಯವಸ್ಥಿತವಾಗಿ ನಿಭಾಯಿಸುವ, ನಿರ್ವಹಣೆ ಮಾಡುವ ಪ್ರಕ್ರಿಯೆಯಲ್ಲಿ ಮಾರ್ಗದರ್ಶಕರ ಮಾರ್ಗದರ್ಶನದ ಮಾರ್ಗದರ್ಶನದ ಅವಶ್ಯಕತೆಯಿದೆ.

ಮೇಲುಸ್ತುವಾರಿ, ಸೌಲಭ್ಯ ಪೂರೈಕೆ, ಸಂಪನ್ಮೂಲಗಳ ಕ್ರೋಡೀಕರಣ, ಸಮುದಾಯದ ಸಹಭಾಗಿತ್ವ ಸಹಕಾರ ಪಡೆಯುವುದು,ಗುರಿಯ ನೇರದಲ್ಲಿ ವ್ಯವಸ್ತೆ ನಿರ್ದೇಶಸುವುದು,ಸಮರ್ಪಕ ಕಾರ್ಯನಿರ್ವಹಣಾ ತಂತ್ರಗಾರಿಕೆ, ಜವಾಬ್ದಾರಿ ಪೂರೈಸಿಕೊಂಡು ಹೋಗುವ ಮನೋಭಾವ ಮುಂತಾದ ಎಲ್ಲಾ ಗುರಿ ಸಾಧನೆ ಬಗೆಯನ್ನು ಮಾರ್ಗದರ್ಶಕರು ನಿರ್ವಹಿಸುತ್ತಾರೆ

ಕಲಿಕೆಯ ಮಾಧ್ಯಮವಾಗಿರುವ ಮತ್ತು ಕಲಿಯುವ ವಿಷಯವಾಗಿರುವ ಭಾಷೆಯನ್ನು ಮತ್ತು ಆ ಭಾಷೆಯ ಕೌಶಲಗಳನ್ನು ಮಕ್ಕಳಿಗೆ ರೂಢಿಸುವ ಗುರುತರ ಜವಾಬ್ದಾರಿ ಶೈಕ್ಷಣಿಕ ವ್ಯವಸ್ಥೆಯದಾಗಿದೆ. ಮಕ್ಕಳಲ್ಲಿ ಭಾಷಾ ಕೌಶಲ್ಯಗಳನ್ನು ಬೆಳೆಸುವಲ್ಲಿ ಭಾಷಾ ಶಿಕ್ಷಕರು ತೊಡಗಿಸಿಕೊಳ್ಳುವ ಪ್ರೇರಣೆಗಳನ್ನು ಪ್ರೋತ್ಸಾಹಗಳನ್ನು ನೀಡುವ ಶೈಕ್ಷಣಿಕ ಮಾರ್ಗದರ್ಶಕರುಗಳು ಮಾರ್ಗದರ್ಶಕರಾಗಿ ತಾವು ನಿರ್ವಹಿಸುತ್ತಿರುವ ಶೈಕ್ಷಣಿಕ ಮಾರ್ಗದರ್ಶಕರುಗಳು ಮಕ್ಕಳ ಭಾಷಾ ಕೌಶಲ್ಯ ಅಭಿವೃದ್ಧಿಯ ಉಪಕ್ರಮಗಳ ಕುರಿತು ಅರಿಯುವ ಅವಶ್ಯಕತೆ ಇದೆ.

**ಚಟುವಟಿಕೆ 1 ನೀವು ಮಾತನಾಡುವ ಭಾಷೆಗಳು ಯಾವುವು? ನೀವು ಓದಬಲ್ಲ ಬರೆಯುಬಲ್ಲ ಭಾಷೆಗಳು ಯಾವುವು ಪಟ್ಟಿ ಮಾಡಿರಿ.**

ಭಾಷಾ ಕೌಶಲಗಳ ಅಭಿವೃದ್ಧಿಗೆ ವಿನೂತನ ಉಪಕ್ರಮಗಳಾದ ಭಾಷಾ ಆಟ ,ಭಾಷಾ ಓಲಂಪಿಕ್, ಭಾಷಾ ಪ್ರಯೋಗಾಲಯ ಇವುಗಳ ಜೊತೆಗೆ ಭಾಷಾವನ ಎಂಬ ಪರಿಸರದ ಮೂಲಕ ಭಾಷಾ ಕೌಶಲ್ಯ ಅಭಿವೃದ್ಧಿಗೆ ಶ್ರಮಿಸುವ ಉಪಕ್ರಮದ ಕುರಿತು ಅರಿಯಲೇ ಬೇಕಾದ ಅವಶ್ಯಕತೆಯಿದೆ. ಮಕ್ಕಳ ಭಾಷಾ ಕೌಶಲ್ಯ ಅಭಿವೃದ್ಧಿಯ ಉಪಕ್ರಮವಾದ ಭಾಷಾವನ ನಿರ್ಮಾಣ ನಿರ್ವಹಣೆ ಮತ್ತು ವ್ಯವಸ್ಥಿತ ರೀತಿಯಲ್ಲಿ ಭಾಷಾವನವನ್ನು ಕ್ರಿಯಾಶೀಲಗೊಳಿಸುವ ಪ್ರಯತ್ನವನ್ನು ಮಾಡಬೇಕಿದೆ. ಶೈಕ್ಷಣಿಕ ಮಾರ್ಗದರ್ಶಕರುಗಳು ಭಾಷಾವನ ಪರಿಕಲ್ಪನೆಯನ್ನು ಅರ್ಥೈಸಿಕೊಂಡು ಅನುಷ್ಠಾನಕ್ಕೆ ತರುವಲ್ಲಿ ನಿಗದಿತ ಮಾರ್ಗದರ್ಶನ ಮಾಡುವಲ್ಲಿ ಯಶಸ್ವಿಯಾಗಬಹುದಾಗಿದೆ

ಓದಿರಿ..

ಭರ್ಜರಿ ಮನರಂಜನೆ ಬರೀ ರಿಯಾಲಿಟಿ ಶೋಗಳಿಂದ ತುಂಬಿ ಹೋಗಿರುವ ದೂರದರ್ಶನ ಕಾರ್ಯಕ್ರಮ ವೀಕ್ಷಿಸುತ್ತ ಚಾನೆಲ್ ಬದಲಿಸುವಾಗ ಬರೀ ಆಂಗಿಕ ಸಂಜ್ಞೆ, ತುಟಿಚಲನೆ ಮೂಲಕ ಒಬ್ಬರು ಹೇಳಿದ ಹಾಗೆ ಪುನರಾವರ್ತಿಸುತ್ತಿರುವ ದೃಶ್ಯ ನೋಡಿದ ಸಹಜಾ ಇದೇನಿರಬಹುದೆಂದು ಕುತೂಹಲಿಸುತ್ತ ನೋಡುವಿಕೆ ಮುಂದುವರಿಸಿದ್ದಳು. ಇದನೇನ ಹಚ್ಚಿದಿ ಮೂಕರ ವಾರ್ತಾ ಬದಲ ಮಾಡ ಅದನ್ನ ಅಂತ ಅಜ್ಜಿ ಹೇಳಿದಾಗ ಬದಲಿಸಿದಳು.

ಬೆಳಗ್ಗೆ ದಿನಪತ್ರಿಕೆ ಓದುತ್ತಿದ್ದಾಗ ದೇಶದ ಮೊದಲ ಅಂಧ ಐ ಎ ಎಸ್ ಅಧಿಕಾರಿ ಪ್ರಾಂಜಲ್ ಪಾಟೀಲಳ ಕುರಿತು ಪ್ರಕಟವಾಗಿದ್ದ ಸ್ಫೂರ್ತಿ ತುಂಬಬಲ್ಲ ಲೇಖನ ಓದಿ ಅಂಧರು ಕಣ್ಣು ಕಾಣದವರು ಹೇಗೆ ಓದಬಲ್ಲರು ಎಂದು ತನ್ನನ್ನು ತಾನೇ ಪ್ರಶ್ನಿಸಿಕೊಂಡಿದ್ದಳು.

ಪ್ರತಿ ಸಾರಿ ತರಗತಿಯಲ್ಲಿ ಗೆಳೆಯನೊಬ್ಬ ನಾನೂ ಭಾಷಣ ಮಾಡುತ್ತೇನೆಂದು ಬಡಾಯಿಕೊಚ್ಚಿಕೊಂಡು ಹೆಸರು ಬರೆಸಿ ಸಂಜೆ ಶಿಕ್ಷಕರಿಗೆ ಒಪ್ಪಿಸುವಾಗ ತಡವರಿಸುತ್ತ ತಡವರಿಸುತ್ತ ಕೊನೆಗೆ ನನ್ನ ಹೆಸರ ಕಾಟ ಹಾಕರಿ ನಾ ಭಾಷಣ ಮಾಡುದುಲ್ಲ ಅಂತ ಗೋಳಾಡಿದ್ದು ನೆನಪಿಸಿಕೊಂಡು ಮುಸಿಮುಸಿ ನಕ್ಕಳು. ತಂಗಿ ಭೂಮಿಕಾ ಮನೆಗೆಲಸ ಮಾಡುತ್ತ ಬರೆವಣಿಗೆಯಲ್ಲಿ ತೊಡಗಿದ್ದಾಗ ಆರೇಳು ತಪ್ಪುಗಳನ್ನು ಬರೆದು ವಾಕ್ಯದ ಅರ್ಥವನ್ನೇ ಕೆಡಿಸಿದ್ದನ್ನು ಓದಿ ಅದನ್ನು ಸರಿಪಡಿಸಿ ಬರೆಯಲು ತಿಳಿಸಿ ತಿದ್ದಿದ್ದು ಅಪ್ಪನಿಗೆ ಹೇಳಿ ಶಹಬ್ಬಾಸ್ ಎನಿಸಿಕೊಳ್ಳಬೇಕೆಂದಳು. ತಂಗಿ ಸಾಕ್ಷಿಗೆ ಪುಸ್ತಕ ಓದಿಸುವಾಗ ತಾಯಿ ಕಷ್ಟಪಡುತ್ತಿದ್ದುದು ಕಂಡು ತಾನೇ ಖುದ್ದಾಗಿ ಅವಳಿಗೆ ಒಂದೊಂದೆ ಅಕ್ಷರ ಪದ ಗುರುತಿಸಿ ಓದಲು ಸಹಾಯ ಮಾಡಿದಳು.

ಸಂಜೆ ಅಪ್ಪ ಬಂದು ಈ ದಿನದ ವಿಶೇಷತೆ ಏನು ಮರಿ ಅಂತ ಕೇಳಿದಾಗ ವರದಿ ಒಪ್ಪಿಸುತ್ತ ಮೂಕೀವಾರ್ತೆ, ಅಂಧರ ಓದುಗಾರಿಕೆ, ಗೆಳೆಯ ಭಾಷಣ ಮಾಡುವಾಗ ತಡವರಿಸಿದ್ದು, ಸಾಕ್ಷಿ ತಪ್ಪು ಓದುತ್ತಿದ್ದುದನ್ನು ಸರಿಪಡಿಸಿದ್ದು, ಭೂಮಿಕಾ ಬರೆದುದ್ದನ್ನು ತಿದ್ದಿದ್ದು ಎಲ್ಲವನ್ನೂ ಕುತೂಹಲಭರಿತವಾಗಿ ಹೇಳುತ್ತಿರುವದನ್ನು ಕೇಳಿದರು.

ಮಗಳ ಇಂದಿನ ಚಟುವಟಿಕೆಗಳೆಲ್ಲವನ್ನೂ ವಿಶ್ಲೇಷಿಸಿಕೊಂಡು, ಮೂಕೀ ವಾರ್ತೆಯು ಕಿವುಡ ಮತ್ತು ಮೂಕರಿಗೆ ಉಪಯುಕ್ತವಾದ ಬಗೆ, ಪ್ರಾಂಜಲ್ ಪಾಟೀಲ ಅಂಧಳಾದರೂ ಬ್ರೈಲ್ ಲಿಪಿ ಓದಿ, ನಿತ್ಯ ಧ್ವನಿ ಮುದ್ರಿತ ಆಡಿಯೋ ಪಾಠಗಳನ್ನು ಕೇಳಿ ಐ ಎ ಎಸ್ ಮಾಡಿದ ಸಾಧನೆ, ಗೆಳೆಯನ ಮಾತನಾಡುವಿಕೆಯ ತೊಂದರೆ, ತಂಗಿಯರ ಓದು ಬರೆಹದ ಅಡತಡೆಗಳ ಕುರಿತು ಮಗಳು ಸಹಜಾಳಿಗೆ ಭಾಷೆ, ಭಾಷಾ ಕಲಿಕೆ, ಭಾಷಾ ಕೌಶಲಗಳ ಮಹತ್ವ ಹಾಗೂ ಭಾಷಾ ಶಿಕ್ಷಕರು ಮಕ್ಕಳಿಗೆ ಭಾಷಾ ಕೌಶಲಗಳನ್ನು ರೂಢಿಸಲು ಸೃಜನಾತ್ಮಕವಾಗಿ ತೊಡಗಿಸಿಕೊಳ್ಳುವ ಪರಿಯ ಕುರಿತು ಹತ್ತು ನಿಮಿಷ ವಿವರಣೆ ನೀಡಿದರು. ತಮ್ಮ ಶಾಲೆಯಲ್ಲಿ ತಾವು ಭಾಷಾವನ ಒಂದನ್ನು ನಿರ್ಮಿಸಲು ತಯಾರಿ ನಡೆಸಿದ್ದು ಯೋಜನೆ ರೂಪಿಸಿದ್ದರ ಬಗ್ಗೆ ವಿವರಣೆ ನೀಡಿದರು.

ಇದೆಲ್ಲವನ್ನು ಕೇಳಿದ ಸಹಜಾ ತನಗೆ ಭಾಷೆಗಳನ್ನು ಕಲಿಸುವ ಭಾಷಾ ಶಿಕ್ಷಕರು ವಿವಧ ಚಟುವಟಿಕೆಗಳ ಮೂಲಕ ಭಾಷಾ ಕೌಶಲಗಳಾದ ಆಲಿಸುವಿಕೆ, ಮಾತನಾಡುವಿಕೆ, ಓದುವಿಕೆ, ಬರೆಯುವಿಕೆ ಇವುಗಳನ್ನು ರೂಢಿಸಲು ಪ್ರಯತ್ನಿಸುತ್ತಿರುವದು ಸರಿ ಅಂದಕೊಂಡಳು. ತನಗೆ ಮಾರ್ಗದರ್ಶನ ಮಾಡುತ್ತಿರುವ ಭಾಷಾ ಶಿಕ್ಷಕರು ಹಾಗೂ ಮುಖ್ಯೋಪಾಧ್ಯಾಯರಾಗಿ ಮಕ್ಕಳ ಶ್ರೇಯೋಭಿವೃದ್ಧಿಗೆ ಶ್ರಮಿಸುತ್ತಿರುವ ತಮ್ಮ ತಂದೆಯ ಬಗ್ಗೆ ಅಪಾರ ಗೌರವದ ಭಾವನೆ ಮೂಡಿಸಿಕೊಂಡಳು.

**ಚಟುವಟಿಕೆ – 2 ಈ ಘಟನೆ ಓದಿದ ನಂತರ ತಾವು ಅರಿತುಕೊಂಡ ಸಂಗತಿಗಳು ಯಾವುವು ಪಟ್ಟೀಕರಿಸಿರಿ.**

ಜೀವಿ ಸಂಕುಲದಲ್ಲಿ ವಿಶಿಷ್ಟವಾದ ಅಭಿವ್ಯಕ್ತಿ ಮಾಧ್ಯಮವನ್ನು ಸೃಜಿಸಿಕೊಂಡ ಜೀವಿ ಮಾನವ. ಭಾವನೆಗಳನ್ನು ಅಭಿವ್ಯಕ್ತಗೊಳಿಸಲು ಸಂವಹಿಸಲು ಸಂಪರ್ಕಿಸಲು ಕ್ರಿಯಿಸಲು ಪ್ರತಿಕ್ರಿಯಿಸಲು ಒಂದು ಯುಕ್ತ ಮಾಧ್ಯಮವಾಗಿ ಭಾಷೆಯನ್ನು ಕಂಡುಕೊಂಡಿದ್ದಾನೆ ಈ ಭಾಷೆಯ ಸಂಕೇತಗಳನ್ನು ಧ್ವನಿ ಸಂಕೇತಗಳನ್ನು ಒಳಗೊಂಡಿದ್ದು ಆ ಮೂಲಕವಾಗಿ ಯಾದೃಚ್ಛಿಕತೆಯನ್ನು ಪಡೆದಿರುವ ಧ್ವನಿ ಸಂಕೇತಗಳ ವ್ಯವಸ್ಥೆಯಾಗಿ ರೂಪುಗೊಂಡು ಹಾಯಾಧನ ಸಂಕೇತಗಳಿಗೆ ಅಕ್ಷರ ವರ್ಣಮಾಲೆ ಕಾಲಕ್ಕೆ ತಕ್ಕಂತೆ ಪ್ರತಿರೂಪ ಪಡೆದುಕೊಂಡು ಅಕ್ಷರ ಪದವಾಗಿ ಪದ ವಾಕ್ಯವಾಗಿ ರಚಿತಗೊಂಡು ಮಾತು ಮತ್ತು ಬರಹದಲ್ಲಿ ಅಭಿವ್ಯಕ್ತಗೊಂಡಿರುವುದು ಭಾಷೆಯ ವ್ಯವಸ್ಥಿತ ಸಂರಚನೆಯನ್ನು ತಿಳಿಸುತ್ತದೆ.

ಭಾಷೆ ಪರಸ್ಪರರು ಸಮೂಹಿಸಲು ನಡೆಸುವ ಮಾಧ್ಯಮವಾಗಿದ್ದು ಭಾಷೆ ಬಲ್ಲವರಿಂದ ಮಾತ್ರ ಪರಸ್ಪರ ವಿಚಾರ ವಿನಿಮಯಕ್ಕೆ ಅವಕಾಶ ಒದಗಿ ಬರುತ್ತದೆ ಅಂದರೆ ಯಾವುದೇ ಭಾಷೆಯಲ್ಲಿ ವ್ಯವಹರಿಸಬೇಕಾದರೆ ಭಾಷೆಯನ್ನು ಕಲಿತವರಾಗಿದ್ದರೆ ಮಾತ್ರ ಸಾಧ್ಯವಾಗುತ್ತದೆ ಇಲ್ಲದಿದ್ದರೆ ಅರ್ಥ ಅನರ್ಥಕ್ಕೀಡಾಗಿ ನಗೆಡಾಗುವ ಸಂದರ್ಭ ಒದಗಿ ಬರಬಹುದು ಹಾಗಾಗಿ ಒಂದು ಭಾಷೆಯನ್ನು ಕಲಿತವರಾದರೆ ಮಾತ್ರ ಅದರಲ್ಲಿ ವ್ಯವಹರಿಸಲು ಸುಲಭವಾಗುತ್ತದೆ. ಸಾಮಾನ್ಯ ಜ್ಞಾನದ ಮೂಲಕ ಸಂದರ್ಭಗಳ ನಿಬಾವನೆಯ ಮೂಲಕ ಭಾಷೆಯಲ್ಲಿ ವ್ಯವಹರಿಸಲು ಸಾಧ್ಯವಾಗಬಹುದಾದರೂ ಭಾಷೆಯನ್ನು ವ್ಯವಸ್ಥಿತವಾಗಿ ಕಲಿತರೆ ಅಂದರೆ ಭಾಷೆಯ ಕೌಶಲಗಳಾದ ಆಲಿಸುವಿಕೆ ಮಾತನಾಡುವಿಕೆ ಓದುವಿಕೆ ಬರೆಯುವಿಕೆ ಇವುಗಳನ್ನು ಕರಗತ ಮಾಡಿಕೊಂಡಾಗಲೇ ಅತ್ಯುತ್ತಮವಾಗಿ ವ್ಯವಹರಿಸಲು ಸಾಧ್ಯ ಆದ್ದರಿಂದ ಭಾಷಾ ಕೌಶಲ್ಯಗಳನ್ನು ಅಂದರೆ ಆಲಿಸುವಿಕೆ ಮಾತನಾಡುವಿಕೆ ಓದುವಿಕೆ ಬರೆಯುವಿಕೆಯ ಕೌಶಲಗಳು ಕರಗತಗೊಂಡಾಗಲೆ ಸಾಧ್ಯವಾಗುತ್ತದೆ. ಭಾಷೆ ಆ ಭಾಷೆಯನ್ನು ಬಲ್ಲವನ ಸ್ವತ್ತಾಗಿದೆ.

***ಭಾಷೆಗಳು ಬಾರದಿರೆ ಬೆಲೆಯಿಲ್ಲ ಭಾವನೆಗೆ***
***ವೇಷವದ ಧರಿಸದಿರೆ ಸೊಬಗಲ್ಲ ತನುವಿಗೆ***
***ಭಾಷೆಯಲಿ ನಡೆಯದಿರೆ ಸೊಗವಿಲ್ಲ ಜೀವನಕೆ***
***ಭಾಷೆಯದು ಭೂಷಣವು ಮುದ್ದುಬಸವ***

ಈ ಮುಕ್ತಕ ವಾಣಿಯಂತೆ ಭಾಷೆಗಳು ಭಾವನೆಗೆ ಬೆಲೆಯನ್ನು ತಂದು ಕೊಡಬಲ್ಲವು ಬಹುಭಾಷೆ ಬಲ್ಲವರು ಲೋಕದಲ್ಲಿ ಎಂತದೇ ಸವಾಲುಗಳನ್ನು ಎದುರಿಸಿ ಬದುಕಬಲ್ಲರು ಎಂಬುದು ರುಜುವಾತಾಗುತ್ತದೆ.

ಇಷ್ಟೊಂದು ಮಹತ್ವದ ಪಾತ್ರ ನಿರ್ವಹಿಸಬಲ್ಲ ಭಾಷೆಗಳನ್ನು ಗಳಿಸುವುದೇ ಕಲಿಯುವುದೇ ಎಂಬುದು ಕುತೂಹಲಕಾರಿ ಅಂಶವನ್ನು ಎದುರಿಗೆ ಬಂದು ನಿಲ್ಲುತ್ತದೆ ಭಾಷೆ ಗಳಿಕೆಯು ಹೌದು, ಕಲಿಕೆಯು ಹೌದು ಭಾಷೆಯ ಕುರಿತಾದ ಕೆಲವೊಂದು ಸಹಜ ಸಾಮರ್ಥ್ಯಗಳನ್ನು ನಾವು ಗಳಿಸುತ್ತೇವೆ. ಕೆಲವೊಂದು ಸಾಮರ್ಥ್ಯಗಳನ್ನು ನಾವು ವ್ಯವಸ್ಥಿತವಾಗಿ ಕಲಿಯುತ್ತೇವೆ. ಭಾಷಾ ಕಲಿಕೆ ಎಂದರೆ ಭಾಷೆಯೊಂದನ್ನು ಶಾಸ್ತ್ರೀಯವಾಗಿ ಅಧ್ಯಯನ ಮಾಡುವ ಕಲೆಯಾಗಿದೆ.

ಎನ್‌ಸಿಎಫ್–2005 ಹೇಳಿರುವಂತೆ ಭಾಷಾ ಕಲಿಕೆ ಉಳಿದ ವಿಷಯಗಳ ಕಲಿಕೆಗೆ ಹೆಬ್ಬಾಗಿಲು ಮಗುವು ತನ್ನ ಜ್ಞಾನವನ್ನು ಕಟ್ಟಿಕೊಳ್ಳುವ ಪ್ರಕ್ರಿಯೆಯಲ್ಲಿ ಭಾಷೆಯ ಪಾತ್ರ ಮಹತ್ವದ್ದಾಗಿದೆ. ಭಾಷೆಯ ಹಿಡಿತವಿಲ್ಲದೆ ಅಂದರೆ ಭಾಷೆಯ ಕೌಶಲಗಳನ್ನು ರೂಡಿಸಿಕೊಳ್ಳದೆ ಮಗು ಬೇರೆ ವಿಷಯಗಳನ್ನು ಅರ್ಜಿಸಿಕೊಳ್ಳುವುದು ಕಷ್ಟವಾಗುತ್ತದೆ ಹಾಗಾಗಿ ಭಾಷಾ ಕಲಿಕೆಯು ಮಹತ್ವದ್ದಾಗಿದೆ. ಶಿಕ್ಷಣದಲ್ಲಿ

ತಂತ್ರಜ್ಞಾನದ ಪಾತ್ರ ಬಹುಮುಖ್ಯವಾಗಿರುವ ಈ ಸಂದರ್ಭದಲ್ಲಿ ಶಿಕ್ಷಕ ಶಿಕ್ಷಣ ಮತ್ತು ಮಗುವಿನ ಮಧ್ಯೆ ಶೈಕ್ಷಣಿಕ ಮಾರ್ಗದರ್ಶಕರ ಮಾರ್ಗದರ್ಶನವು ಅತಿ ಅವಶ್ಯಕವಾಗಿದೆ.

## 1.2 ಭಾಷಾ ಶಿಕ್ಷಣದ ಮಹತ್ವ

ಭಾಷಾ ಶಿಕ್ಷಣವು ಕೇವಲ ವ್ಯಾಕರಣ ಮತ್ತು ಶಬ್ದಕೋಶವನ್ನು ಕಲಿಯುವುದಕ್ಕಿಂತ ಹೆಚ್ಚಾಗಿರುತ್ತದೆ; ಇದು ಅಂತರ್ಸಾಂಸ್ಕೃತಿಕ ತಿಳುವಳಿಕೆ, ವೈಯಕ್ತಿಕ ಬೆಳವಣಿಗೆ ಮತ್ತು ಬೌದ್ಧಿಕ ಬೆಳವಣಿಗೆಗೆ ರಹದಾರಿಯಾಗಿದೆ. ಶೈಕ್ಷಣಿಕ ಮಾರ್ಗದರ್ಶಕರಾಗಿ, ನಮ್ಮ ವಿದ್ಯಾರ್ಥಿಗಳಲ್ಲಿ ವಿಶ್ವ ದೃಷ್ಟಿಕೋನವನ್ನು ರೂಪಿಸುವ ಮತ್ತು ಅವರಲ್ಲಿ ಕುತೂಹಲ ಮತ್ತು ಸಹಾನುಭೂತಿಯನ್ನು ಬೆಳೆಸುವ ಶಕ್ತಿಯನ್ನು ನಾವು ಹೊಂದಿದ್ದೇವೆ ಎಂಬುದನ್ನು ಮನಸ್ಸಿನಲ್ಲಿಟ್ಟುಕೊಳ್ಳುವ ಮೂಲಕ, ಭಾಷಾ ಶಿಕ್ಷಕರು ತಮ್ಮ ಬೋಧನೆಯನ್ನು ಉತ್ತಮ ಉದ್ದೇಶ ಮತ್ತು ಉತ್ಸಾಹದೊಂದಿಗೆ ಸಂಪರ್ಕಿಸುವ ಅವಶ್ಯಕತೆಯನ್ನು ಮನದಟ್ಟು ಮಾಡಿಕೊಡಬೇಕಿದೆ.

ಜಾಗತಿಕ ಸಂವಹನ ಮತ್ತು ಸಹಯೋಗಕ್ಕೆ ಭಾಷಾ ಶಿಕ್ಷಣವ ನಿರ್ಣಾಯಕವಾಗಿದೆ. ಇಂದಿನ ಅಂತರ್ಸಂಪರ್ಕಿತ ಜಗತ್ತಿನಲ್ಲಿ, ವ್ಯಾಪಾರದಿಂದ ರಾಜತಾಂತ್ರಿಕತೆಯಿಂದ ಆರೋಗ್ಯದವರೆಗೆ ಅನೇಕ ಕ್ಷೇತ್ರಗಳಲ್ಲಿ ಬಹು ಭಾಷೆಗಳನ್ನು ಮಾತನಾಡುವ ಸಾಮರ್ಥ್ಯವು ಒಂದು ಆಸ್ತಿಯಾಗಿದೆ. ನಮ್ಮ ವಿದ್ಯಾರ್ಥಿಗಳನ್ನು ಭಾಷಾ ಕೌಶಲ್ಯದೊಂದಿಗೆ ಸಜ್ಜುಗೊಳಿಸುವ ಮೂಲಕ, ಜಾಗತೀಕರಣಗೊಂಡ ಸಮಾಜದಲ್ಲಿ ಯಶಸ್ಸಿಗೆ ನಾವು ಅವರನ್ನು ಸಿದ್ಧಪಡಿಸಬೇಕಿದೆ.

ಭಾಷಾ ಕಲಿಕೆಯು ನಿತ್ಯ ನಿರಂತರವಾಗಿ ನಡೆಯುವ ಪ್ರಕ್ರಿಯೆಯಾಗಿದೆ ಪ್ರತಿದಿನ ಹರಿಯುವ ಅನುಕರಿಸುವ ಅಭಿವ್ಯಕ್ತಿಸುವ ಸಂವಹಿಸುವ ಸಂವಹಿಸುವ ಪ್ರಸಂಗಗಳಲ್ಲಿ ಹೊಸತನ್ನು ಕಲಿಯುತ್ತಲೇ ಇರುತ್ತೇವೆ ಶಾಲೆಗಳಲ್ಲಿ ಈ ಭಾಷಾ ಕಲಿಕಾ ಪ್ರಕ್ರಿಯೆಯನ್ನು ಔಪಚಾರಿಕವಾಗಿ ನೆರವೇರಿಸಲಾಗುತ್ತಿದೆ. ಶಾಲೆಗೆ ಬರುವ ಪೂರ್ವದಲ್ಲಿಯೇ ಮಗು ಹಲವು ಭಾಷಿಕ ಸಾಮರ್ಥ್ಯ ಕೌಶಲಗಳನ್ನು ಗಳಿಸಿಕೊಂಡು ರೂಡಿಸಿಕೊಂಡು ಬಂದಿರುತ್ತದೆ ಶಾಲೆಯಲ್ಲಿ ಹಲವುಗಳೊಂದಿಗೆ ಕೆಲವು ಸಾಮರ್ಥ್ಯಗಳನ್ನು ಕೌಶಲಗಳನ್ನು ಚಳಕಗಳನ್ನು ವ್ಯವಸ್ಥಿತ ರೀತಿಯಲ್ಲಿ ರೂಢಿಸುವ ಅವಶ್ಯಕತೆ ಇದೆ. ಜಾಗತೀಕರಣದ ನೆಲೆಯಲ್ಲಿ ಇಡೀ ವಿಶ್ವವೇ ಒಂದು ಗ್ರಾಮವಾಗಿ ಪರಿವರ್ತಿತಗೊಂಡಿರುವ ಇಂದಿನ ದಿನಮಾನದಲ್ಲಿ ಭಾಷಾ ಕಲಿಕೆಯು ಅತ್ಯಂತ ಮಹತ್ವದ್ದಾಗಿ ಪರಿಣಮಿಸಿದೆ.

ಇಂಗ್ಲಿಷ್ ಇಂದಿನ ಯುವ ಜನಾಂಗವು ಅಂದುಕೊಂಡಂತೆ ಜಾಗತಿಕ ಸಂವಹನ ಭಾಷೆಯಾಗಿರುವುದರಿಂದ ಮಾತೃಭಾಷೆಯ ಜೊತೆಗೆ ವ್ಯವಹಾರಿಕ ಭಾಷೆಯಾಗಿ ಪ್ರಚಲಿತಗೊಂಡಿರುವುದರಿಂದ ಬಹು ಭಾಷೆಗಳಲ್ಲಿ ವ್ಯವಹರಿಸುವ ಸಾಮರ್ಥ್ಯವನ್ನು ರೂಢಿಸುವ ಪ್ರಯತ್ನಗಳು ವ್ಯವಸ್ಥೆಯಿಂದ ನಿರೂಪಿತವಾಗಬೇಕಿದೆ.

ಔಪಚಾರಿಕ ಶೈಕ್ಷಣಿಕ ಪ್ರಕ್ರಿಯೆಯಲ್ಲಿ ಭಾಷಾ ಕಲಿಕೆ ಮತ್ತು ಭಾಷೆಯ ಮೂಲಕ ಕಲಿಕೆ ಅಂದರೆ ಒಂದು ಭಾಷೆಯಾಗಿ ಭಾಷೆಯನ್ನು ಕಲಿಯುವುದಾದರೆ ಇನ್ನೊಂದು ಮಾಧ್ಯಮವಾಗಿ ಇತರ ವಿಷಯಗಳನ್ನು ಕಲಿಯುವುದರಲ್ಲಿ ತೊಡಗಬೇಕಿದೆ ಹಾಗೂ ಬಹು ಸಾಮರ್ಥ್ಯದ ರಹದಾರಿಯಾಗಿರುವ ಭಾಷೆಯ ಕಲಿಕೆಯಾಗುವದು ಅವಶ್ಯವಾಗಿದೆ.

ರಾಷ್ಟ್ರದ ಭವಿಷ್ಯ ವಾಗಿರುವ ಮಕ್ಕಳಿಗೆ ಬಹು ಭಾಷೆಗಳ ವ್ಯವಹಾರ ಅಧ್ಯಯನ ಸಂಮೋಹನ ಕೌಶಲಗಳನ್ನು ನೀಡಿದ್ದಾದರೆ, ಅವರುಗಳು ದೇಶದ ಅಭಿವೃದ್ಧಿಯಲ್ಲಿ ಸಮರ್ಥ ಪಾಲುದಾರರಾಗಬಲ್ಲರು. ಮಕ್ಕಳನ್ನು ಸಾಮರ್ಥ್ಯ ಭರಿತರನ್ನಾಗಿಸುವ ವಿಶಿಷ್ಟವಾದ ಜವಾಬ್ದಾರಿಯನ್ನು ನಿರ್ವಹಿಸಬೇಕಿದೆ. ಶಿಕ್ಷಣ ಮಗುವನ್ನು ಉತ್ತಮ ಮಾನವನನ್ನಾಗಿ ರೂಪಿಸುತ್ತದೆ. ಮೌಲ್ಯಗಳು ಜ್ಞಾನವನ್ನು ನೀಡುವುದರ ಮೂಲಕ ಸರ್ವತೋಮುಖ ವ್ಯಕ್ತಿತ್ವ ಹೊಂದಿದ ವ್ಯಕ್ತಿಗಳನ್ನಾಗಿಸುವಲ್ಲಿ ಉತ್ತಮ ಪಾತ್ರವನ್ನು ನಿರ್ವಹಿಸುತ್ತಿದೆ.

ವರ್ತಮಾನದ ಹಾಗೂ ಭವಿಷ್ಯತ್ತಿನ ಬದುಕಿನ ಸವಾಲುಗಳು ಮತ್ತು ಅವುಗಳನ್ನು ಪರಿಹರಿಸಿಕೊಳ್ಳುವ ವ್ಯವಹಾರಿಕ ಜ್ಞಾನವನ್ನು ರೂಪಿಸಬಲ್ಲದು ಸಾಂಸ್ಕೃತಿಕ ಮೌಲ್ಯಗಳ ಜ್ಞಾನವನ್ನು ಪರಂಪರೆ ಇತಿಹಾಸ ಸಂಪ್ರದಾಯ ಪದ್ಧತಿ ಸಂಸ್ಕಾರಗಳ ಅರಿವನ್ನು ಮೂಡಿಸುತ್ತಿದೆ. ಬದುಕನ್ನು ಬದಲಿಸುವ ಬದುಕನ್ನು ಹೊಂದಾಣಿಕೆ ಮಾಡಿಕೊಳ್ಳುವ ಸಾಮರ್ಥ್ಯವನ್ನು ರೂಪಿಸಲು ಶೈಕ್ಷಣಿಕ ಮಾರ್ಗದರ್ಶಕರು, ಶಿಕ್ಷಕರು ದಾರಿದಾತರು ಆಗಿರಬೇಕಿದೆ.

ಉತ್ತಮ ಸಂವಹನ ಕೌಶಲಗಳನ್ನು ಪಡೆಯಲು ಅಥವಾ ಸಂವಹನ ಕೌಶಲ್ಯಗಳಲ್ಲಿ ಉತ್ತಮ ಸಾಧನೆ ಮಾಡಲು, ಭಾಷಾ ಕೌಶಲ್ಯಗಳಲ್ಲಿ ಪರಿಣತಿಯನ್ನು ಪಡೆದುಕೊಳ್ಳಬೇಕು. ಅವುಗಳೆಂದರೆ ಆಲಿಸುವಿಕೆ, ಮೌಖಿಕ ಸಂವಹನ ಆಲಿಸುವಿಕೆ, ಮಾತನಾಡುವಿಕೆ, ಓದುವಿಕೆ, ಬರೆಯುವಿಕೆ, ಗ್ರಂಥಾವಲೋಕನ ಮತ್ತು ಚಿಂತನಾ ಕೌಶಲ್ಯಗಳು. ವಿದ್ಯಾರ್ಥಿಯು ಈ ಎಲ್ಲಾ ಕೌಶಲ್ಯಗಳನ್ನು ಪಡೆಯುವ ಮೊದಲು, ಅವನು / ಅವಳು ವಿಷಯ ಅಥವಾ ಭಾಷೆಯ ಕಡೆಗೆ ಆಸಕ್ತಿಯನ್ನು ಬೆಳೆಸಿಕೊಳ್ಳಬೇಕು. ಈ ನಿಟ್ಟಿನಲ್ಲಿ, ವಿದ್ಯಾರ್ಥಿಗಳಲ್ಲಿ ಆಸಕ್ತಿಯನ್ನು ಮೂಡಿಸುವ ಅವಕಾಶವನ್ನು ಒದಗಿಸಿಕೊಡುವಲ್ಲಿ ಶೈಕ್ಷಣಿಕ ಮಾರ್ಗದರ್ಶಕರು, ಶಿಕ್ಷಕರು ಪ್ರಮುಖ ಪಾತ್ರ ವಹಿಸುತ್ತಾರೆ.

## 1.3 ಶೈಕ್ಷಣಿಕ ಮಾರ್ಗದರ್ಶಕರ ಪ್ರಮುಖ ಜವಾಬ್ದಾರಿಗಳು

- ಪರಿಣಾಮಕಾರಿ ಭಾಷಾ ಶಿಕ್ಷಕರಾಗಲು, ಭಾಷಾ ಶಿಕ್ಷಕರಿಗೆ ನಿಗದಿತ ಮಾರ್ಗದರ್ಶನ
- ಸುರಕ್ಷಿತ ಮತ್ತು ಅಂತರ್ಗತ ಕಲಿಕೆಯ ವಾತಾವರಣವನ್ನು ರಚಿಸುವುದು.
- ವಿದ್ಯಾರ್ಥಿಗಳು ಪ್ರಶ್ನೆಗಳನ್ನು ಕೇಳಲು, ತಪ್ಪುಗಳನ್ನು ಮಾಡಲು ಮತ್ತು ಆತಂಕವನ್ನು ಅನುಭವಿಸದೆ ತಮ್ಮನ್ನು ತಾವು ವ್ಯಕ್ತಪಡಿಸಲು ಮುಕ್ತವಾಗಿರುವ ವಾತಾವರಣವನ್ನು ರಚಿಸುವುದು.
- ತೊಡಗಿಸಿಕೊಳ್ಳುವ ಮತ್ತು ಸಂಬಂಧಿತ ಪಾಠ ಯೋಜನೆಗಳನ್ನು ಅಭಿವೃದ್ಧಿಪಡಿಸುವುದು:
- ನವೀಕೃತ ಮತ್ತು ಸಾಧಿತವಾದಂತಹ ಪ್ರಯೋಗಗಳಿಂದ ನಿರೂಪಿತವಾದ ಬೋಧನಾ ವಿಧಾನಗಳನ್ನು ಬಳಸುವಂತೆ ಪ್ರೇರೆಪಿಸುವದು.
- ಭಾಷಾ ಕಲಿಕೆಯು ವಿನೋದ ಮತ್ತು ಆಕರ್ಷಕವಾಗಿರುವಂತೆ ಸಂಯೋಜಿಸುವುದು.
- ವಿದ್ಯಾರ್ಥಿಗಳ ಆಸಕ್ತಿಗಳು ಮತ್ತು ಗುರಿಗಳಿಗೆ ಸಂಬಂಧಿಸಿದ ಪಾಠಗಳನ್ನು ರಚಿಸುವ ಮೂಲಕ ಕಲಿಕೆಯಲ್ಲಿ ತೊಡಗುವಂತೆ ಮಾಡುವುದು.
- ಭಾಷಾ ಶಿಕ್ಷಕರಿಗೆ ಭಾಷಾ ಬೋಧನೆಯಲ್ಲಿ ಉತ್ತಮ ಅಭ್ಯಾಸಗಳನ್ನು ಬಳಸುವಂತೆ ಪ್ರೇರೆಪಿಸುವುದು.

- ಭಾಷಾ ಬೋಧನೆಯ  ವಿಭಿನ್ನ ವಿಧಾನಗಳು ಇತ್ತೀಚಿನ ಸಂಶೋಧನೆ ಮತ್ತು ಉತ್ತಮ ಅಭ್ಯಾಸಗಳನ್ನು ಅಳವಡಿಸಿಕೊಳ್ಳಲು ಮಾರ್ಗದರ್ಶನ ಮಾಡುವುದು.
- ವಿಶಿಷ್ಠ ಬೋಧನಾ ವಿಧಾನಗಳನ್ನು ಸೇರಿಸುವ ಮೂಲಕ, ವಿದ್ಯಾರ್ಥಿಗಳ ಕಲಿಕೆಯ ಫಲಿತಾಂಶಗಳನ್ನು ಗರಿಷ್ಠಗೊಳಿಸಲು ಯೋಜಿಸುವುದು.

| |
|---|
| **ಚಟುವಟಿಕೆ 3**<br>**ನೀವು ನಿಭಾಯಿಸುತ್ತಿರುವ ಜವಾಬ್ದಾರಿಗಳ ಕುರಿತು ಮನನ ಮಾಡಿಕೊಂಡು ದಾಖಲಿಸಿರಿ.** |

ಭಾಷಾ ಬೋಧನೆಯು ನಿರಂತರವಾಗಿ ವಿಕಸನಗೊಳ್ಳುತ್ತಿರುವ ಕ್ಷೇತ್ರವಾಗಿದೆ. ಹೊಸ ಬೆಳವಣಿಗೆಗಳು ಮತ್ತು ಪ್ರವೃತ್ತಿಗಳೊಂದಿಗೆ ಪ್ರಸ್ತುತವಾಗಿರುವುದು ಮುಖ್ಯವಾಗಿದೆ. ಸಮ್ಮೇಳನಗಳು, ಕಾರ್ಯಾಗಾರಗಳು ಮತ್ತು ಇತರ ವೃತ್ತಿಪರ ಅಭಿವೃದ್ಧಿ ತರಗತಿಗಳಿಗೆ ಹಾಜರಾಗುವ ಮೂಲಕ, ಉತ್ತಮ ಶೈಕ್ಷಣಿಕ ಮಾರ್ಗದರ್ಶಕರಾಗಿ ರೂಪಗೊಳ್ಳಬೇಕಿದೆ. ಮಕ್ಕಳಲ್ಲಿ ಭಾಷಾ ಕೌಶಲ್ಯ ಅಭಿವೃದ್ಧಿ ಚಟುವಟಿಕೆಗಳನ್ನು ಸಂರಚಿಸುವ ಜವಾಬ್ದಾರಿಗಳಿಗೆ ಆದ್ಯತೆ ನೀಡುವ ಮೂಲಕ, ನಾವು ನಮ್ಮ ವಿದ್ಯಾರ್ಥಿಗಳಿಗೆ ಧನಾತ್ಮಕ ಮತ್ತು ಪರಿಣಾಮಕಾರಿ ಭಾಷಾ ಕಲಿಕೆಯ ಅನುಭವವನ್ನು ರಚಿಸಬಹುದು. ನಮ್ಮ ವಿದ್ಯಾರ್ಥಿಗಳ ಭವಿಷ್ಯವನ್ನು ರೂಪಿಸುವ ಮತ್ತು ಅವರ ಜೀವನದ ಮೇಲೆ ಶಾಶ್ವತವಾದ ಪ್ರಭಾವ ಬೀರುವ ಶಕ್ತಿಯನ್ನು ನಾವು ಹೊಂದಿದ್ದೇವೆ ಎಂಬುವದನ್ನು ಪರಿಭಾವಿಸಿಕೊಂಡು ಭಾಷಾ ಕಲಿಕೆಯಲ್ಲಿ,ಭಾಷಾ ಬೋಧನೆಯಲ್ಲಿ, ಭಾಷಾ ಕೌಶಲಗಳನ್ನು ರೂಢಿಸುವಲ್ಲಿ ನಾವು ತೊಡಗಬೇಕು.

- ಬೋಧನಾ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಿಕೊಳ್ಳುವದು.
- ಪರಿಣಾಮಕಾರಿ ಪಾಠ ಯೋಜನೆ ಸಿದ್ಧಪಡಿಸಿಕೊಳ್ಳುವದು.
- ವೈವಿಧ್ಯಮಯ ಬೋಧನಾ ವಿಧಾನಗಳನ್ನು ಬಳಸುವುದು.
- ಭಾಷಾ ಬೋಧನೆಯಲ್ಲಿ ಶೈಕ್ಷಣಿಕ ತಂತ್ರಜ್ಞಾನವನ್ನು ಅಳವಡಿಸುವುದು.
- ಬಲವಾದ ವಿದ್ಯಾರ್ಥಿ–ಶಿಕ್ಷಕರ ಸಂಬಂಧಗಳನ್ನು ನಿರ್ಮಿಸುವುದು
- ಧನಾತ್ಮಕ ತರಗತಿಯ ವಾತಾವರಣವನ್ನು ಸ್ಥಾಪಿಸುವುದು
- ಮುಕ್ತ ಸಂವಹನವನ್ನು ಉತ್ತೇಜಿಸುವುದು
- ರಚನಾತ್ಮಕ ಪ್ರತಿಕ್ರಿಯೆಯನ್ನು ಒದಗಿಸುವುದು
- ವಿಭಿನ್ನ ಕಲಿಕಾ ಶೈಲಿಗಳನ್ನು ಪೂರೈಸುವುದು
- ವೈಯಕ್ತಿಕ ವಿದ್ಯಾರ್ಥಿ ಅಗತ್ಯಗಳನ್ನು ಗುರುತಿಸುವುದು
- ವಿವಿಧ ಕಲಿಕೆಯ ಶೈಲಿಗಳಿಗೆ ಬೋಧನಾ ವಿಧಾನಗಳನ್ನು ಅಳವಡಿಸಿಕೊಳ್ಳುವುದು
- ವಿಶೇಷ ಅಗತ್ಯತೆಗಳನ್ನು ಹೊಂದಿರುವ ವಿದ್ಯಾರ್ಥಿಗಳನ್ನು ಬೆಂಬಲಿಸುವುದು.

ಶೈಕ್ಷಣಿಕ ಮಾರ್ಗದರ್ಶಕರಾಗಿ ಭಾಷಾ ಕೌಶಲ್ಯಗಳನ್ನು ಸುಧಾರಿಸಲು ಮತ್ತು ವಿದ್ಯಾರ್ಥಿಗಳ ಅಗತ್ಯಗಳನ್ನು ಉತ್ತಮವಾಗಿ ಪೂರೈಸಲು ನಿರಂತರವಾಗಿ ಪ್ರಯತ್ನಿಸುವಂತೆ ಭಾಷಾ ಶಿಕ್ಷಕರಿಗೆ ಪ್ರೋತ್ಸಾಹದಾಯಕ ಮಾರ್ಗದರ್ಶನ ನೀಡುವುದು. ಶೈಕ್ಷಣಿಕ ಮಾರ್ಗದರ್ಶಕರಾಗಿ ನಮ್ಮ ಕೆಲಸವು ಭಾಷಾ ಕಲಿಕೆಯನ್ನು ಸುಲಭಗೊಳಿಸುವುದು ಮತ್ತು ವಿದ್ಯಾರ್ಥಿಗಳು ಆಯ್ಕೆಮಾಡಿದ ಭಾಷೆಯಲ್ಲಿ ಪ್ರವೀಣ ಸಂವಹನಕಾರರಾಗಲು ಸಹಾಯ ಮಾಡುವುದಾಗಿದೆ. ಅದರಾಚೆಗೂ ವಿದ್ಯಾರ್ಥಿಗಳಿಗೆ ಮಾರ್ಗದರ್ಶಕ, ಬೆಂಬಲಿಗ ಮತ್ತು ಪ್ರೇರಕರಾಗಿ ಕಾರ್ಯನಿರ್ವಹಿಸುವುದು ನಮ್ಮ ಆಧ್ಯತೆ ಆಗಬೇಕಿದೆ. ಶೈಕ್ಷಣಿಕ ಮಾರ್ಗದರ್ಶನದ ವಿಶಾಲ ವ್ಯಾಪ್ತಿಯನ್ನು ಅರ್ಥಮಾಡಿಕೊಳ್ಳುವ ಮೂಲಕ, ವಿದ್ಯಾರ್ಥಿಗಳಿಗೆ ಭಾಷಾ ಕೌಶಲಗಳನ್ನು ರೂಢಿಸಿಕೊಳ್ಳುವ ಉತ್ತಮ ಅವಕಾಶಗಳನ್ನು ಒದಗಿಸಿ, ಸಕಾರಾತ್ಮಕ ಕಲಿಕೆಯ ವಾತಾವರಣವನ್ನು ನಿರ್ಮಿಸುವಲ್ಲಿ ಸಮರ್ಥ ಮಾರ್ಗದರ್ಶಕರಾಗುವ ಆವಶ್ಯಕತೆಯಿದೆ.

## 1.4 ಭಾಷಾ ಕಲಿಕೆ ಮತ್ತು ಶೈಕ್ಷಣಿಕ ಮಾರ್ಗದರ್ಶಕರು

ಭಾಷೆ ಬಲ್ಲವನು ಜಗತ್ತನ್ನೇ ಗೆಲ್ಲಬಲ್ಲ ಎಂಬ ಮಾತು ಭಾಷೆಗಳನ್ನು ಕಲಿಯುವುದರ ಮಹತ್ವವನ್ನು ಸಾರಿಸಾರಿ ಹೇಳುತ್ತದೆ. ಭಾಷೆ ಮತ್ತು ಅದನ್ನು ಕಲಿಯುವವ ನಡುವೆ ಭಾಷೆಯ ಆಳಆಗಲ ಎತ್ತರಗಳನ್ನು ಅರಿತುಕೊಂಡ ಚಳಕಗಳನ್ನು ಕೈಗೂಡಿಸಿಕೊಂಡ ಕೌಶಲವನ್ನು ಮೈಮನಗೂಡಿಸಿಕೊಂಡ ಭಾಷಾ ಶಿಕ್ಷಕರು ಹಾಗೂ ಕಲಿಕಾರ್ಥಿಗಳ ಭಾಷಾ ಕಲಿಕೆಯ ಸಂಪರ್ಕ ಸೇತುವೆಯಾಗಿ ಶೈಕ್ಷಣಿಕ ಮಾರ್ಗದರ್ಶಕರು ಜವಾಬ್ದಾರಿ ನಿರ್ವಹಿಸಬೇಕಿದೆ.

ಮಾಹಿತಿ ತಂತ್ರಜ್ಞಾನ ಬಹುಮುಖ್ಯ ಪಾತ್ರ ನಿರ್ವಹಿಸುತ್ತಿರುವ, ಅಂಗೈನಲ್ಲಿ ಜಾಗತಿಕ ಜ್ಞಾನದ ಕೊಂಡಿಯನ್ನು ಹಿಡಿದುಕೊಂಡು ಸ್ವಕಲಿಕೆಯ ಸಾಧ್ಯತೆಗಳನ್ನು ಹೆಚ್ಚಿಸುತ್ತಿರುವ ಸಂದರ್ಭದಲ್ಲಿಯೂ ಕಲಿಕೆ ಮತ್ತು ಕಲಿಯುವ ನಡುವೆ ಸೂಕ್ತ ಸಂಪರ್ಕವನ್ನು ಸಾಧಿಸಿ ಅಪೇಕ್ಷಿತ ವರ್ತನೆಗಳನ್ನು ಯುಕ್ತ ಮಾರ್ಗದರ್ಶನ ಮಾಡಲು ಕಲಿಸುವವನೊಬ್ಬ ಬೇಕು ಅವನೇ ಭಾಷಾ ಶಿಕ್ಷಕ. ಎನ್ ಸಿ ಎಫ್ 2005 Position paper ಶೃತ ಪಡಿಸಿದಂತೆ ಮಕ್ಕಳು ಶಿಕ್ಷಕರು ಮತ್ತು ವಿವಿಧ ರೀತಿಯ ಪಠ್ಯಪುಸ್ತಕಗಳ ಸಂಕೀರ್ಣತೆಯ ಜೊತೆಗೆ ವಿವಿಧ ರೀತಿಯ ಸಂವಹನದ ಸ್ಥಳವಾಗಿ ತರಗತಿಯನ್ನು ರೂಪಗೊಳಿಸುವ ಮತ್ತು ಪರಸ್ಪರ ವಿಷಯಗಳ ನಡುವಿನ ಸಂವಹನದಲ್ಲಿ ಶಿಕ್ಷಕರು ಅತ್ಯಂತ ಪ್ರಮುಖ ಪಾತ್ರ ವಹಿಸುತ್ತಾರೆ. ವೃತ್ತಿ ಪರ ತರಬೇತಿ ಪಡೆದ ಮತ್ತು ಸಾಮಾಜಿಕ ಸೂಕ್ಷ್ಮತೆ ಅರಿತಿರುವ ಶಿಕ್ಷಕರಿಗೆ ಯಾವುದೇ ಬದಲಿ ವ್ಯವಸ್ಥೆ ಇಲ್ಲ ಎಂಬುದು ಮನವರಿಕೆಯಾಗಿದೆ ಎಂದು ಹೇಳಿರುವುದು ಶಿಕ್ಷಕನ ಸ್ಥಾನಮಾನದ ಶ್ರೇಷ್ಠತೆಗೆ ಹಿಡಿದ ಕನ್ನಡಿ ಆಗಿದೆ ಎಂಬುದನ್ನು ಅರಿತು ಭಾಷಾ ಶಿಕ್ಷಕರಿಗೆ ಮಾರ್ಗದರ್ಶನ ಮಾಡಬೇಕಿದೆ.

**ಚಟುವಟಿಕೆ– ೪. ನಿಮ್ಮ ವ್ಯಾಪ್ತಿಯಲ್ಲಿಯ ಉತ್ತಮ ಭಾಷಾ ಶಿಕ್ಷಕರನ್ನು ಪಟ್ಟಿ ಮಾಡಿರಿ. ಅವರ ಕ್ರಿಯಾಶೀಲತೆಯ ಯಶೋಗಾಥೆಯೊಂದನ್ನು ಬರೆಯಿರಿ.**

ಭಾಷಾ ಕಲಿಕೆಯು ಎಲ್ಲ ಕಲಿಕೆಯ ಮುಂಬಾಗಿಲಾಗಿದೆ. ಜ್ಞಾನವನ್ನು ಕಟ್ಟಿಕೊಳ್ಳುವ ಪ್ರಕ್ರಿಯೆಯಲ್ಲಿ ಮಗುವಿಗೆ ಮೊದಲ ಆದ್ಯತೆಯಾಗಿ ಭಾಷೆ ಬೇಕು. ಭಾಷೆ ಹಿಡಿತವಿಲ್ಲದೆ ಬೇರೆ ಯಾವುದೇ ವಿಷಯ ಜ್ಞಾನವನ್ನು ಗ್ರಹಿಸಲು ಸಾಧ್ಯವಾಗದು. ಹಾಗಾಗಿ ಭಾಷೆ ಸಂವಹನ ಮಾಧ್ಯಮವಾಗಿ ಅಷ್ಟೇ ಅಲ್ಲ ಬಹುತ್ವದ ಆಯಾಮವಾಗಿ ಅಂದರೆ ಯೋಚನೆ ಆಲೋಚನೆ ಅನುಭವಿಸುವ ಸಾಧನವಾಗಿ ಸಮಾಜೋಪಯೋಗಿಯಾಗಿ ಜ್ಞಾನ ಸಂಗ್ರಹಣೆ ನೆಲೆಯಾಗಿ ಭಾವನಾವಾಹಕವಾಗಿ ಹೊಸಜ್ಞಾನವನ್ನು

ಕಟ್ಟಿಕೊಳ್ಳುವ ನೆಲೆಯಾಗಿ ಕಾರ್ಯನಿರ್ವಹಿಸುತ್ತದೆ. ಪ್ರತಿಯೊಬ್ಬ ವ್ಯಕ್ತಿಯಲ್ಲಿ ಆಲೋಚನೆ ಮತ್ತು ಅಭಿವೃದ್ಧಿಯು ಭಾಷೆಯ ಮೂಲಕ ಆರಂಭಗೊಳ್ಳುತ್ತವೆ. ಭಾಷಾ ಕಲಿಕೆ ಮೂಲಕ ಮಗುವಿನ ಸರ್ವತೋಮುಖ ವ್ಯಕ್ತಿತ್ವರೂಪ ಗೊಳ್ಳುವ ಪ್ರಕ್ರಿಯೆಯಲ್ಲಿ ಭಾಷಾ ಕಲಿಕೆಯ ಮಹತ್ವದ್ದಾಗಿದೆ. ಭಾಷಾ ಕಲಿಕೆಯಲ್ಲಿ ಬಹು ಮಹತ್ವದ ಪಾತ್ರವನ್ನು ನಿರ್ವಹಿಸುತ್ತಿರುವ ಶಿಕ್ಷಕರ ಗುಣಲಕ್ಷಣಗಳ ಬಗ್ಗೆ ತಿಳಿದುಕೊಂಡಾಗ ಶೈಕ್ಷಣಿಕ ಮಾರ್ಗದರ್ಶಕರು ಸಮರ್ಥವಾಗಿ ಮಾರ್ಗದರ್ಶನ ಮಾಡಲು ಸಹಾಯಕವಾಗುತ್ತದೆ.

**ಭಾಷಾ ಶಿಕ್ಷಕರ ಗುಣಲಕ್ಷಣಗಳು ಜವಾಬ್ದಾರಿಗಳು**

- ಭಾಷೆಯ ಬಗ್ಗೆ ಜ್ಞಾನ ಹೊಂದಿರಬೇಕು
- ಸಾಹಿತ್ಯದ ಪರಿಚಯವಿರಬೇಕು
- ಅಧ್ಯಯನಶೀಲತೆ ಮೈಗೂಡಿಸಿಕೊಂಡಿರುವನಾಗಿರಬೇಕು
- ಭಾಷಾ ಕೌಶಲ್ಯಗಳಲ್ಲಿ ಪರಿಣಿತಿ ಸಾಧಿಸಿದವನಾಗಿರಬೇಕು
- ಭಾಷಾ ಸಾಮರ್ಥ್ಯಗಳು ವ್ಯಾಕರಣದಲ್ಲಿ ಪರಿಣಿತಿ ಹೊಂದಿರುವವನಾಗಿರಬೇಕು
- ವೃತ್ತಿ ಪರಿಣತಿ ವೃತ್ತಿ ಗೌರವ ಹೊಂದಿರುವವನಾಗಿರಬೇಕು
- ಶೈಕ್ಷಣಿಕ ತಂತ್ರಜ್ಞಾನ ಪರಿಣತಿ ಪಡೆದಿರಬೇಕು
- ಮೌಲ್ಯಮಾಪನದಲ್ಲಿ ಪರಿಣಿತಿ ಹೊಂದಿರಬೇಕು
- ಪ್ರಗತಿಪರ ಚಿಂತನಶೀಲತೆ ಮೈಗೂಡಿಸಿಕೊಂಡಿರಬೇಕು
- ಮೌಲ್ಯಗಳ ಪ್ರೇರಕನಾಗಿರಬೇಕು

ವಾಚನಾಭಿರುಚಿ, ಭಾಷಾಂತರ, ಅನುವಾದದ ಜ್ಞಾನ, ಕ್ರಿಯಾ ಸಂಶೋಧನೆ ಕೈಗೊಳ್ಳುವ ಸಾಮರ್ಥ್ಯ, ಇತರ ವಿಷಯಗಳ ಜ್ಞಾನ, ಸೌಹಾರ್ದಯುತ ಸಂಬಂಧ ಸಾಧಿಸುವಿಕೆ ,ಉತ್ತಮ ಕೇಳುಗ,ಹಾಡುಗಾರ, ಕಥೆಗಾರ, ಚಿತ್ರಕಾರ, ಅಭಿನಯಕಾರ, ಉತ್ತಮ ಓದುಗ, ಉತ್ತಮವಾಗಿ ಸಾಂಸ್ಕೃತಿಕ ರಾಯಭಾರಿ, ಸೃಜನಶೀಲ ಬರಹಗಾರ, ನಾಯಕತ್ವದ ಗುಣಗಳನ್ನು ರೂಡಿಸಿಕೊಂಡಿರುವ ಗುಣಲಕ್ಷಣಗಳನ್ನುಳ್ಳ ವ್ಯಕ್ತಿಯಾಗಿರಬೇಕು.

ಹೀಗೆ ಬಹು ಪಾತ್ರಗಳನ್ನು ನಿರ್ವಹಿಸುತ್ತಾ ಭಾಷಾ ಕಲಿಕಾ ಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡ ಶಿಕ್ಷಕ ಭಾಷೆಯ ಕಲಿಕೆಯನ್ನು ಅನುಕೂಲಿಸುವಾಗ ಸಾಹಿತ್ಯದ ಸೊಗಡಿನೊಂದಿಗೆ ಭಾಷೆಗೆ ಇರುವ ಶಕ್ತಿಯನ್ನು ಸಶಕ್ತವಾಗಿ ಬಳಸಿಕೊಂಡು ಉತ್ಕಟವಾದ ಆಸಕ್ತಿ ಸದಾಭಿಮಾನ ಹಾಗೂ ವೈಚಾರಿಕ ದೃಷ್ಟಿಕೋನದಿಂದ ತೊಡಗಿಸಿಕೊಂಡರೆ ಮಕ್ಕಳು ತಾವಾಗಿಯೇ ಸ್ವಯಂ ಪ್ರೇರಿತರಾಗಿ ಲವಲವಿಕೆಯಿಂದ ಕಲಿಕಾ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳುತ್ತಾರೆ.ಇವುಗಳಲ್ಲದೆ ಇನ್ನು ಸಾಕಷ್ಟು ವಾಸ್ತವಿಕ ಸಂದರ್ಭದಲ್ಲಿ ನಿರ್ವಹಿಸುವ ಕುಶಲತೆ ಸಾಮರ್ಥ್ಯ ಚಳಕಗಳನ್ನು ರೂಡಿಸಿಕೊಂಡರೆ ಒಬ್ಬ ಸಮರ್ಥ ಭಾಷಾ ಶಿಕ್ಷಕನಾಗಿ ಹೊರಹೊಮ್ಮುತ್ತಾನೆ.

**ಚಟುವಟಿಕೆ– 5 ನೀವು ಅರಿತುಕೊಂಡಂತೆ ನಿಮ್ಮ ವ್ಯಾಪ್ತಿಯ ಭಾಷಾ ಶಿಕ್ಷಕರಿಗೆ ನೀವು ಮಾರ್ಗದರ್ಶನ ಮಾಡಲೇಬೇಕಾದ ಅಂಶಗಳನ್ನು ಪಟ್ಟಿ ಮಾಡಿರಿ.**

## 1.5 ಶೈಕ್ಷಣಿಕ ಮಾರ್ಗದರ್ಶಕರು ಮತ್ತು ಭಾಷಾ ಕೌಶಲ್ಯ ಅಭಿವೃದ್ಧಿ

ಮಾನವ ಜೀವಿಯನ್ನು ಇತರ ಪ್ರಾಣಿಗಳಿಂದ ಭಿನ್ನವಾಗಿಸಿದ ಮಾಧ್ಯಮವೆಂದರೆ ಭಾಷೆ. ಮನಸ್ಸಿನ ಭಾವನೆಗಳನ್ನು ತಿಳಿಸುವ ಮಾಧ್ಯಮವಾಗಿ ಭಾಷೆಯು ಬಹು ಉಪಯುಕ್ತತೆ ಪಡೆದಿದೆ. ಪರಸ್ಪರ ಮನುಷ್ಯರ ಸಂವಹನ, ವ್ಯವಹಾರವು ಅತ್ಯುತ್ತಮವಾಗಿ ಸಾಗಬೇಕೆಂದರೆ ಭಾಷೆ ಮುಖ್ಯವಾಗಿ ಬೇಕೇಬೇಕು. ಇಷ್ಟೊಂದು ಮಹತ್ವ ಪಡೆದಿರುವ ಭಾಷೆ ಎಂದರೆ ಏನು? ಎಂಬುದಕ್ಕೆ ಹಲವು ಭಾಷಾ ವಿದ್ವಾಂಸರು ತಮ್ಮದೇ ಆದಂತಹ ವ್ಯಾಖ್ಯಾನವನ್ನು ಮಾಡಿದ್ದರೂ ಸ್ಟುವರ್ಟ್ ವಾಂಟ್ ಹಾಗೂ ಬ್ಲಾಕ್ ಅಂಡ್ ಟ್ರ್ಯಾಗರ್ ನೀಡಿರುವ ವ್ಯಾಖ್ಯೆಯು ಬಹು ಮಹತ್ವದ್ದಾಗಿದೆ.

ಒಂದು ಸಾಮಾಜಿಕ ಸಮೂಹ ಪರಸ್ಪರ ವ್ಯವಹಾರಕ್ಕಾಗಿ ಬಳಸುವ ಯಾದೃಚ್ಛಿಕ ಧ್ವನಿ ಸಂಕೇತಗಳ ವ್ಯವಸ್ಥೆ ಭಾಷೆ ಎಂಬ ಮಾತು ಭಾಷೆ ಎಂದರೇನು ಎಂಬುದಕ್ಕೆ ನಿಖರ ಮತ್ತು ಸ್ಪಷ್ಟ ಉತ್ತರ ಒದಗಿಸಿದೆ.

ಇಲ್ಲಿ ಪರಸ್ಪರ ವ್ಯವಹಾರ ಅಂದರೆ ಕೊಡುಕೊಳ್ಳುವಿಕೆ ನಡೆಯಲು ಮಾತು ಬರಹ ಆಲಿಸುವಿಕೆ ಮುಖ್ಯವಾಗಿ ಬೇಕೇ ಬೇಕು. ಈ ವ್ಯವಹಾರದಲ್ಲಿ ಆಲಿಸುವಿಕೆ ಮಾತನಾಡುವಿಕೆ ಬರೆಯುವಿಕೆ ಓದುವಿಕೆ ಇವೆಲ್ಲ ಭಾಷಾ ಕೌಶಲಗಳಾಗಿ ಪ್ರಾಮುಖ್ಯತೆ ಪಡೆದಿವೆ.

ಭಾಷೆಯ ಕಲಿಕೆಯಲ್ಲಿ ಈ ಕೌಶಲಗಳನ್ನು ಉಳಿಸಿಕೊಳ್ಳಲೇಬೇಕು. ಚೆನ್ನಾಗಿ ಆಲಿಸಿದರೆ ಚೆನ್ನಾಗಿ ಮಾತಾಡಬಹುದು, ಚೆನ್ನಾಗಿ ಆಲಿಸಿ ಮಾತನಾಡಿದರೆ ಚೆನ್ನಾಗಿ ಓದಬಹುದು, ಬರೆಯಬಹುದು. ಆದ್ದರಿಂದ ಭಾಷೆಯ ಮೂಲ ಕೌಶಲಗಳನ್ನು ರೂಡಿಸಿಕೊಳ್ಳಲೇಬೇಕು.

**ಚಟುವಟಿಕೆ –6 ಶೈಕ್ಷಣಿಕ ಮಾರ್ಗದರ್ಶಕರಾಗಿ ಮಕ್ಕಳ ಭಾಷಾ ಕೌಶಲ್ಯ ಅಭಿವೃದ್ಧಿಗೆ ನೀವು ರೂಪಿಸುವ ಚಟುವಟಿಕೆಗಳನ್ನು ಪಟ್ಟಿ ಮಾಡಿ.**

## 1.6 ಭಾಷಾ ಕೌಶಲ ಅಭಿವೃದ್ಧಿ ಉಪಕ್ರಮಗಳು

ಶೈಕ್ಷಣಿಕ ವ್ಯವಸ್ಥೆಯಲ್ಲಿ ಕಲಿಕಾ ಪ್ರಕ್ರಿಯೆಯಲ್ಲಿ ಅಡಗಿಕೊಂಡ ಎಲ್ಲರೂ ಒಂದಿಲ್ಲೊಂದು ಭಾಷೆಯನ್ನು ಬಳಸಿ ಕಲಿಕೆಯಲ್ಲಿ, ಸಾಮರ್ಥ್ಯ ರೂಢಿಯಲ್ಲಿ, ವ್ಯಕ್ತಿತ್ವ ನಿರ್ಮಾಣದಲ್ಲಿ ತೊಡಗಿಕೊಂಡಿರುತ್ತಾರೆ. ಭಾಷಾ ಶಿಕ್ಷಕರು ಬಳಸುವ ಭಾಷೆಯ ಪ್ರಭಾವ, ಪ್ರೌಢಿಮೆಗಳು ಮಕ್ಕಳ ಕಲಿಕೆಯ ಮೇಲೆ ಸಹಜವಾಗಿ ಪರಿಣಾಮ ಬೀರುವುದು. ಮಗು ಶಾಲೆಯಲ್ಲಿ ಮಾತ್ರ ಭಾಷೆಯನ್ನು ಕಲಿಯುತ್ತದೆ ಭಾಷೆ ಸಾಮರ್ಥ್ಯಗಳನ್ನು ರೂಡಿಸಿಕೊಳ್ಳುತ್ತದೆ ಎಂದರೆ ತಪ್ಪಾದೀತು. ಅದು ಸಂವಹಿಸುವ ಪ್ರತಿಕ್ಷಣವೂ ಅದರ ಭಾಷಿಕ ಸಾಮರ್ಥ್ಯಗಳು ವೃದ್ಧಿಗೊಳ್ಳುತ್ತಾ ಸಾಗುತ್ತಿರುತ್ತದೆ. ಮನೆ, ಬೀದಿ, ನೆರೆಹೊರೆ, ಸಮಾಜ, ಪರಿಸರ ಹೀಗೆ ಹಲವು ಸನ್ನಿವೇಶಗಳು ಅವಕಾಶ ಒದಗಿಸುತ್ತಿರುತ್ತವೆ.ಶಾಲೆಯು ಭಾಷಾ ಕಲಿಕೆಯ ಪ್ರಾಯೋಗಿಕ ನೆಲೆಯಾಗಿ ತಪ್ಪುಗಳ ಸುಧಾರಿಸುವ, ಸರಿಪಡಿಸುವ ವ್ಯವಸ್ಥೆಯಾಗಿ ಬಹು ಪ್ರಮುಖ ಪಾತ್ರ ನಿರ್ವಹಿಸುತ್ತದೆ. ಮಗುವಿನ ಭಾಷಾ ಕೌಶಲಗಳನ್ನು ಅಭಿವೃದ್ಧಿಪಡಿಸಲು ವ್ಯವಸ್ಥೆಯು ಹಲವು ಉಪಕ್ರಮಗಳ ಮೂಲಕ ಪ್ರಯತ್ನಿಸುತ್ತದೆ. ಶೈಕ್ಷಣಿಕ ಮಾರ್ಗದರ್ಶಕರಾಗಿ ತೊಡಗಿಕೊಂಡ ತಾವು ಮಗುವಿನ ಭಾಷಾ ಕೌಶಲ ಅಭಿವೃದ್ಧಿಯ ಉಪಕ್ರಮಗಳ ಕುರಿತು ಅರಿತುಕೊಂಡರೆ ಸಮರ್ಥ

ಮಾರ್ಗದರ್ಶನ ಸಾಧ್ಯವಾದೀತು. ಭಾಷಾ ಕೌಶಲ ಅಭಿವೃದ್ಧಿಯ ಉಪಕ್ರಮಗಳಾದ ವರ್ಗಕೋಣೆ, ಭಾಷಾ ಆಟಗಳು, ಭಾಷಾ ಒಲಂಪಿಕ್ಸ್, ಭಾಷಾ ಪ್ರಯೋಗಾಲಯ, ಭಾಷಾ ವನದ ಕುರಿತು ಅರಿಯೋಣ.

**ಅ) ವರ್ಗ ಕೋಣೆ –** ವರ್ಗಕೋಣೆಯು ಮಕ್ಕಳಿಗೆ ಬದುಕುವ ಕಲೆಯನ್ನು ಕಲಿಸುವ, ಸಾಮರ್ಥ್ಯವನ್ನು ರೂಪಿಸುವ ಹಲವು ಅವಕಾಶಗಳನ್ನು ಸೃಜಿಸುವ ನೆಲೆಯಾಗಿದೆ. ಸಹಪಾಠಿಗಳ ಜೊತೆಯಲ್ಲಿ ಶಿಕ್ಷಕರ ಮಾರ್ಗದರ್ಶನದಲ್ಲಿ ಸಂವಾದ ಚರ್ಚೆ ವಿಚಾರ ವಿನಿಮಯ ವಾದ ಮಂಡನೆ ಪ್ರಶ್ನೋತ್ತರ ಪರೀಕ್ಷೆ ಬರವಣಿಗೆ ಮೌಖಿಕ ಸಂದರ್ಶನ ಆಲಿಸುವುದು ಓದುವುದು ಬರೆಯುವುದು ಉಕ್ತಲೇಖನ ಬರೆಯುವುದು ಕೇಳುವುದು ಹೇಳುವುದು ಪ್ರಶ್ನಿಸುವುದು ಉತ್ತರಿಸುವುದು ಹುಡುಕುವುದು ಮುಂತಾದ ಹಲವು ಸಾಧನಗಳ ಮೂಲಕ ಕೌಶಲಗಳನ್ನು ರೂಡಿಸಿಕೊಳ್ಳುವ ಅವಕಾಶಗಳಿರುವುದು ಕಂಡುಬರುತ್ತದೆ. ಶಿಕ್ಷಕರು ಈಗಂತೂ ಮಾಹಿತಿ ತಂತ್ರಜ್ಞಾನದ ಬಳಕೆಯ ಮೂಲಕ ತರಗತಿಯನ್ನು ನೈಜ ತರಗತಿಯನ್ನಾಗಿಸುವ ಸಂದರ್ಭದಲ್ಲಿರುವುದರಿಂದ ಭಾಷಾ ಕಲಿಕೆಯ ಮತ್ತು ಭಾಷಾ ಕೌಶಲ್ಯಾಭಿವೃದ್ಧಿಗೆ ಸಾಕಷ್ಟು ಸಂಪನ್ಮೂಲಗಳು ಕೂಡ ಲಭ್ಯವಿರುವುದು ಕಂಡುಬರುತ್ತದೆ.

ಶೈಕ್ಷಣಿಕ ಮಾರ್ಗದರ್ಶಕರಾಗಿ ಈ ಎಲ್ಲ ಸಂಪನ್ಮೂಲಗಳನ್ನು ವರ್ಗಕೋಣೆಗೆ ಒದಗಿಸಿಕೊಟ್ಟು ಭಾಷಾ ಶಿಕ್ಷಕರು ಮತ್ತು ಮಕ್ಕಳು ಭಾಷಾ ಕೌಶಲಗಳನ್ನು ಸಮರ್ಥವಾಗಿ ರೂಢಿಸಿಕೊಳ್ಳಲು ಅವಕಾಶ ಸೃಜಿಸುವದು.

**ಚಟುವಟಿಕೆ –7**

**ಶೈಕ್ಷಣಿಕ ಮಾರ್ಗದರ್ಶಕರಾಗಿ ವರ್ಗ ಕೋಣೆಯಲ್ಲಿ ಭಾಷಾ ಕೌಶಲ ಅಭಿವೃದ್ಧಿ ಕುರಿತು ಕೈಗೊಂಡ ಒಂದು ಚಟುವಟಿಕೆಯ ಬಗ್ಗೆ ನಿರೂಪಿಸಿರಿ.**

**ಆ) ಭಾಷಾ ಆಟಗಳು**

ಎಲ್ಲರಿಗೂ ಆಡುವದೆಂದರೆ ಪ್ರೀತಿ. ಆಟಗಳನ್ನು ಆಡುವ ಮೂಲಕ ಭಾಷಾ ಕೌಶಲಗಳನ್ನು ಬೆಳೆಸಿಕೊಳ್ಳುವಲ್ಲಿ ಸಹಾಯಕವಾಗುವುದೆ ಭಾಷಾ ಆಟಗಳು. ಈ ಭಾಷಾ ಆಟಗಳನ್ನು ಆಡುತ್ತ ಬಾಷಾ ಚಟುವಟಿಕೆಗಳಲ್ಲಿ ಪಾಲ್ಗೊಂಡು ಸುಲಭವಾಗಿ ಕಲಿಯುವ ಪ್ರಕ್ರಿಯೆಯಾಗಿದೆ. ಈ ಆಟಗಳಲ್ಲಿ ನಿಯಮಗಳನ್ನು ಅನುಸರಿಸಿ ಆಟಗಳನ್ನು ಆಡುವ ಮೂಲಕ ಭಾಷೆಯ ಕೌಶಲಗಳನ್ನು ರೂಢಿಸುವ ಚಟುವಟಿಕೆಗಳನ್ನು ಸಂಯೋಜಿಸುವ ಪ್ರಯತ್ನ ಮಾಡಲಾಗುತ್ತದೆ. ಆಟವನ್ನು ಆಡುವ ಮೂಲಕ ಮಕ್ಕಳು ಭಾಷಾ ಕೌಶಲಗಳನ್ನು ಭಾಷಾ ಸಾಮರ್ಥ್ಯಗಳನ್ನು ರೂಡಿಸಿಕೊಂಡು ಸಮರ್ಥ ಸಂವಹನಕಾರರಾಗಿ ರೂಪುಗೊಳ್ಳಲು ಸಹಾಯಕವಾಗುತ್ತದೆ.

**ಚಟುವಟಿಕೆ 8**

**ಭಾಷಾ ಆಟಗಳನ್ನು ಪಟ್ಟಿ ಮಾಡಿರಿ.**

**ಇ) ಭಾಷಾ ಒಲಂಪಿಕ್ಸ್**

ಭಾಷಾ ಆಟಗಳಂತೆ ಹೊರಾಂಗಣ ಆಟಗಳನ್ನು ಸಂಯೋಜಿಸಿಕೊಂಡು ಭಾಷಾ ಕೌಶಲಗಳನ್ನು ರೂಢಿಸುವ ನೂತನ ಪರಿಕಲ್ಪನೆ ಈ ಭಾಷಾ ಒಲಂಪಿಕ್ಸ್. ವಿವಿಧ ಭಾಷಾ ಸಾಮರ್ಥ್ಯಗಳಿಗೆ ಹೊಂದಬಲ್ಲ

ಭಾಷಾ ಕೌಶಲಗಳನ್ನು ಬೆಳೆಸುವ ಉದ್ದೇಶದಿಂದ ಚಟುವಟಿಕೆಗಳನ್ನು ಜೋಡಿಸಿಕೊಂಡು ಆಡುವುದೇಭಾಷಾ ಓಲಂಪಿಕ್ಸ್. ಹೊರಾಂಗಣ ಆಟದ ಜೊತೆಗೆ ಭಾಷಿಕ ಚಟುವಟಿಕೆಗಳನ್ನು ನಿರ್ವಹಿಸಿ ಭಾಷಾ ಕೌಶಲಗಳಾದ ಆಲಿಸುವಿಕೆ ಮಾತನಾಡುವಿಕೆ ಓದುವಿಕೆ, ಬರೆಯುವಿಕೆಯನ್ನು ರೂಡಿಸಿಕೊಳ್ಳುವುದಾಗಿದೆ. ರನ್ನಿಂಗ್ ರೇಸ್, ಬಲ್ಲೆ ಎಸೆತ, ಜಿಗಿತ, ಓಟಗಳನ್ನು ಸಂಯೋಜಿಸಿಕೊಂಡು ಅಧ್ಯಯನ ಮಾಡುತ್ತಾ ಆಡುವುದು ಭಾಷಾ ಓಲಂಪಿಕ್ಸ್ ಆಗಿದೆ.

**ಉದಾ :** ಪ್ರಾಸ ಪದಗಳ ರನ್ನಿಂಗ್ ರೇಸ್.

ಶಿಭಿರಾರ್ಥಿಗಳನ್ನು ಗುಂಪುಗಳಲ್ಲಿ ವಿಭಾಗಿಸಿ ಪ್ರಾಸ ಪದಗಳನ್ನು ಹೇಳುತ್ತಾ ಯಾರು ಮೊದಲು ಓಡುತ್ತಾ ಗುರಿಗೆರೆ ಮುಟ್ಟುತ್ತಾರೋ ಅವರು ಜಯಶಾಲಿಗಳು.

**ಚಟುವಟಿಕೆ 9 : ಭಾಷಾ ಓಲಂಪಿಕ್ಸ್ ಆಟಗಳನ್ನು ಪಟ್ಟಿ ಮಾಡಿರಿ.**

**ಈ) ಭಾಷಾ ಪ್ರಯೋಗಾಲಯ**

ಭಾಷೆಯೊಂದನ್ನು ಕಲಿಯಲು ಯೋಜಿಸಿಕೊಂಡ ವ್ಯವಸ್ಥೆಯನ್ನು ಭಾಷಾ ಪ್ರಯೋಗಾಲಯ ಎನ್ನಬಹುದು. ಭಾಷಾ ಪ್ರಯೋಗಾಲಯದಲ್ಲಿ ವೈಜ್ಞಾನಿಕ ತಂತ್ರಜ್ಞಾನ ಆಧಾರಿತ ಉಪಕರಣಗಳ ಮೂಲಕ ಬಹು ಭಾಷೆಗಳನ್ನು ಕಲಿಸುವ ಕಲಿಯುವ ಅವಕಾಶಗಳಿವೆ. ಮಕ್ಕಳಲ್ಲಿ ಭಾಷಾ ಕೌಶಲ್ಯಗಳನ್ನು ರೂಢಿಸಿಕೊಳ್ಳುವಲ್ಲಿ ಉಂಟಾಗುವ ಆಡೆತಡೆಗಳಿಗೆ ಪರಿಹಾರಗಳನ್ನು ಕಂಡುಕೊಳ್ಳುತ್ತಾ ನಿರಂತರ ಅಭ್ಯಾಸ ಮಾಡಲು ಸೂಕ್ತವಾದ ಮತ್ತು ವೈಜ್ಞಾನಿಕ ಹಿನ್ನೆಲೆಯ ಪ್ರಯೋಗಾಲಯವನ್ನು ಭಾಷಾ ಪ್ರಯೋಗಾಲಯ ಎನ್ನುತ್ತಾರೆ.

ಭಾಷಾ ಪ್ರಯೋಗಾಲಯದಲ್ಲಿ ರೇಡಿಯೋ ಟೇಪ್ ರೆಕಾರ್ಡರ್ ಟಿವಿ ಸಿಡಿ ಡಿವಿಡಿ ಕಂಪ್ಯೂಟರ್ ಅಂತರ್ಜಾಲ ಪ್ರಿಂಟರ್ ಗಳು ಸುಸಜ್ಜಿತವಾಗಿದ್ದು ಬಹುಭಾಷೆಯ ಸಾಮರ್ಥ್ಯಗಳನ್ನು ಮಕ್ಕಳಲ್ಲಿ ಬೆಳೆಸುವಲ್ಲಿ ಬಹುಭಾಷಾ ಪರಿಣಿತಿಯನ್ನು ಹೊಂದಿದ ಶಿಕ್ಷಕರು ಎಲ್ಲರೂ ನಿರತವಾಗಬೇಕು ಭಾಷೆಯ ಕೌಶಲಗಳನ್ನು ರೂಢಿಸಿಕೊಳ್ಳಲು ಯೋಜಿತ ಸಂಪನ್ಮೂಲವನ್ನು ಯುಕ್ತ ತಂತ್ರಜ್ಞಾನವನ್ನು ಬಳಕೆ ಮಾಡುವ ಮೂಲಕ ಭಾಷಾ ಪ್ರಯೋಗಾಲಯದಲ್ಲಿ ಸಂಯೋಜಿಸಲಾಗುವದು.. ಈ ಭಾಷಾ ಪ್ರಯೋಗಾಲಯದ ಮೂಲಕ ಮಕ್ಕಳು ಭಾಷಾ ಕೌಶಲಗಳನ್ನು ಭಾಷಾ ಸಾಮರ್ಥ್ಯಗಳನ್ನು ರೂಢಿಸಿಕೊಂಡು ಯಶಸ್ವಿ ಸಂವಹನಕಾರರಾಗಿ ಹೊರಹೊಮ್ಮುತ್ತಾರೆ.

**ಉದಾ :**

ಭಾಷಾ ಪ್ರಯೋಗಾಲಯದ ಚಟುವಟಿಕೆ.

ಆಲಿಸುವಿಕೆ – ಮೊಬೈಲ್ ರೆಕಾರ್ಡ್ ಮಾಡಿಸಿ ಕೇಳಿಸುವುದು.

ಮಾತನಾಡುವಿಕೆ – ಪರಸ್ಪರ ಇಬ್ಬರು ಸಂಭಾಷಣೆ ಮಾಡಿದ್ದನ್ನು ಕೇಳಿಸುವುದು.

ಬರೆಯುವಿಕೆ – ಧ್ವನಿ ಮುದ್ರಿತ ಉಕ್ತ ಲೇಖನವನ್ನು ಬರೆಯುವ ಚಟುವಟಿಕೆ

ಓದುವಿಕೆ – ಮಾದರಿ ಓದು ಕೇಳಿಸುವುದು.

**ಚಟುವಟಿಕೆ 10 : ಭಾಷಾ ಪ್ರಯೋಗಾಲಯದಲ್ಲಿ ಮಾಡಬಹುದಾದ ಚಟುವಟಿಕೆಯೊಂದನ್ನು ನಿರೂಪಿಸಿರಿ.**

ಉ) ಭಾಷಾವನ

ಓದಿರಿ..

ಹೀಗೊಂದು ಪುಟ್ಟ ಗ್ರಾಮ. ಆ ಗ್ರಾಮದ ಹೊರವಲಯದಲ್ಲಿ ಒಂದು ಸಣ್ಣಶಾಲೆ. ಅದೊಂದು ದಿನ ಶಾಲೆಯ ಕೊನೆಯ ಅವಧಿಯಲ್ಲಿ ಆಟದ ಮೈದಾನದಲ್ಲಿ ಆಟವಾಡುತ್ತಿರುವ ಕೆಲವು ಮಕ್ಕಳು. ಶಾಲಾ ಕೈತೋಟದಲ್ಲಿ ಓದುತ್ತಿರುವ ಕೆಲವು ಮಕ್ಕಳು. ಅಷ್ಟರಲ್ಲಿ ಒಂದು ಬಿಳಿಕಾರಿನಲ್ಲಿ ಅಧಿಕಾರಿ ಒಬ್ಬರು ಬಂದಿಳಿದು ಶಾಲಾ ಕೈತೋಟದಲ್ಲಿ ಕುಳಿತು ಓದುತ್ತಿರುವ ಮಕ್ಕಳಕಡೆಗೆ ಹೋದರು.

ಮಕ್ಕಳಿಗೂ ಶಿಕ್ಷಕರಿಗೂ ದಿಢೀರನೆ ಬಂದಿರುವ ಅಧಿಕಾರಿಯನ್ನು ಕಂಡು ಭಯವಾಯಿತು. ಆದರೆ ಆ ಭಯ ಕ್ಷಣಮಾತ್ರದಲ್ಲಿ ದೂರವಾಯಿತು. ಆಧಿಕಾರಿಗಳು ಕೆಲವು ವಿದ್ಯಾರ್ಥಿಗಳನ್ನು ಓದಿಸಿದರು. ಕೆಲವು ವಿದ್ಯಾರ್ಥಿಗಳಿಂದ ಬರೆಸಿದರು. ಇದರಿಂದ ಸಂತೋಷಗೊಂಡ ಅಧಿಕಾರಿಗಳು ಆ ಶಿಕ್ಷಕರನ್ನು ಪ್ರಶಂಶಿಸಿದರು. ಏಕೆಂದರೆ ಆ ಶಾಲಾ ಕೈತೋಟ ಕೇವಲ ಕೈತೋಟವಾಗಿರದೆ ಒಂದು ಭಾಷಾವನವಾಗಿತ್ತು. ಅಲ್ಲಿ ಶಿಕ್ಷಕರು ಭಾಷೆಗೆ ಸಂಬಂಧಿಸಿದ ಕೆಲವು ಚಿತ್ರಪಟಗಳನ್ನು ನೇತುಹಾಕಿದ್ದರು ಹಾಗೆಯೇ ಭಾಷಾ ಕೌಶಲಗಳ ಚಾರ್ಟ್ ಕೂಡ ತೂಗುಹಾಕಿದ್ದರು. ಆ ಅಧಿಕಾರಿಗಳು ಮಕ್ಕಳನ್ನು ಉದ್ದೇಶಿಸಿ ಶಾಲೆಯಲ್ಲಿ ನಿರ್ವಹಣೆ ಮಾಡಿದ ಭಾಷಾವನ ಹಾಗೂ ಶಿಕ್ಷಕರ ಕುರಿತು ಮೆಚ್ಚುಗೆ ವ್ಯಕ್ತಪಡಿಸಿದರು.

**ಚಟುವಟಿಕೆ – 11 ನೀವು ವಿಹರಿಸಿದ ಉದ್ಯಾನವನದಲ್ಲಿ ನೋಡಿದ ವಸ್ತುಗಳನ್ನು ಆಟದ ಪರಿಕರಗಳನ್ನು ಮತ್ತು ಸೂಚನಾ ಫಲಕಗಳನ್ನು ಪಟ್ಟಿ ಮಾಡಿರಿ.**

ಉದ್ಯಾನವನದಲ್ಲಿ ಆಡುತ್ತ ಕುಣಿಯುತ್ತ, ಜಿಗಿಯುತ್ತ, ಜೀಕುತ್ತ, ಜಾರುತ್ತ, ನಲಿಯುತ್ತ, ನೆಗೆಯುತ್ತ ರಂಜನೆ ಪಡೆಯುವದರ ಜೊತೆಗೆ ಭಾಷೆಯ ಕೌಶಲಗಳನ್ನು ರೂಢಿಸುವ ಅವಕಾಶಗಳನ್ನು ಒದಗಿಸಿ ಕೊಡುವದೇ ಭಾಷಾವನವಾಗಿದೆ. ಭಾಷಾವನದಲ್ಲಿ ಪ್ರಕೃತಿಯ ವಸ್ತುಗಳ ಜೊತೆಗೆ ಆಲಿಸುವ, ಮಾತನಾಡುವ, ಓದುವ ಬರೆಯುವ ಅವಕಾಶಗಳನ್ನು ಸೃಜಿಸಿ ಕಲಿಯುವವರು ಚಟುವಟಿಕೆಗಳಲ್ಲಿ ಭಾಗವಹಿಸಿ ತಮ್ಮ ಭಾಷಾ ಕೌಶಲಗಳನ್ನು ಹೆಚ್ಚಿಸಿಕೊಳ್ಳುವ ಅವಕಾಶವಿದೆ.

ಜೋಕಾಲಿ, ಜಾರುಬಂಡಿ, ಜೀಕುಮೂಕು, ಓಟ, ಆಟಗಳ ಜೊತೆ ಪಾಠವೂ ನಡೆಯುತ್ತದೆ. ಉದ್ಯಾನವನದ ವಸ್ತುಗಳ ಜೊತೆಗೆ ಮಾತನಾಡುವ ಓದುವ ಬರೆಯುವ ಆಲಿಸುವ ಕೌಶಲಗಳನ್ನು ಬೆಳೆಸಿಕೊಳ್ಳುವರು

ಮಗುವಿನಲ್ಲಿ ಭಾಷಾ ಬಳಕೆಯ ಸಾಮರ್ಥ್ಯವನ್ನು ಬೆಳೆಸಲು ಮುಕ್ತ ವಾತಾವರಣವಿದ್ದರೆ ಭಾಷಾಕಲಿಕೆ ಪರಿಣಾಮಕಾರಿಯಾಗುವುದು ಖಚಿತ ಎಂಬುದನ್ನು ನಮ್ಮ ದೇಶದ ಪ್ರಾಚೀನ ಗುರುಕುಲ ಶಿಕ್ಷಣಪದ್ಧತಿಯಿಂದ ತಿಳಿಯಬಹುದು. ಗುರುಕುಲ ಶಿಕ್ಷಣಪದ್ಧತಿಯಲ್ಲಿ ಗುರುವಿನ ಮನೆಯಲ್ಲಿ ಶಿಕ್ಷಣ ಪಡೆದುಕೊಳ್ಳಲಾಗುತ್ತಿತ್ತು. ಈ ಮನೆಗಳು ಆಶ್ರಮಗಳಂತೆ ವನಾಂತರದ ನೀರವ ಪ್ರದೇಶಗಳಲ್ಲಿ ಏರ್ಪಟ್ಟಿದ್ದವು.

ವಾಲ್ಮೀಕಿ, ಕಣ್ವ, ಸಾಂದೀಪಿನಿ ಮುಂತಾದ ಋಷಿಗಳು ತಮ್ಮ ಆಶ್ರಮದಲ್ಲಿ ವೈದಿಕ, ಧಾರ್ಮಿಕ ಮತ್ತು ತತ್ವಶಾಸ್ತ್ರದ ಶಿಕ್ಷಣದಂತೆ ವ್ಯಾಕರಣ ಭಾಷಾಶಾಸ್ತ್ರಗಳನ್ನು ಬೋಧಿಸಿದರು. ಇದರಿಂದಾಗಿ ಕಲಿಕೆ ಗಟ್ಟಿಗೊಳ್ಳುತ್ತಿತ್ತು. ಈ ಅಂಶವನ್ನು ಆಧರಿಸಿ ಮಕ್ಕಳ ಕಲಿಕೆ ಪರಿಣಾಮಕಾರಿಯಾಗಲು ಭಾಷಾವನ ರಚನೆಯ ಪರಿಕಲ್ಪನೆ ಇಂದಿನ ಶಿಕ್ಷಣಪದ್ಧತಿಯಲ್ಲಿ ಅತ್ಯಂತ ಸಮಂಜಸವಾಗಿದೆ.

**ಊ) ಭಾಷಾವನ ಒಂದು ಮಾದರಿ**

ಒಂದು ಮನೆಯ ಮುಂದಿನ ಅಥವಾ ಹಿಂದಿನ ಕೈತೋಟ ಮನೆಯ ಸೊಬಗನ್ನು ಹೆಚ್ಚಿಸುತ್ತದೆಯೋ ಹಾಗೆ ಶಾಲೆಯಲ್ಲಿ ನಿರ್ಮಿಸಿದಂತಹ ಕೈತೋಟ ಅಥವಾ ವನ ಶಾಲೆಯ ಸೊಬಗನ್ನು ಹೆಚ್ಚಿಸುತ್ತದೆ. ಇಂತಹ ವನದಲ್ಲಿ ಭಾಷೆಗೆ ಸಂಬಂಧಿಸಿದ ಪರಿಕರಗಳಿಂದ ಕಲಿಕಾ ವಾತಾವರಣ ನಿರ್ಮಿಸಿದರೆ ಅದು ಭಾಷಾವನ ಎನಿಸಿಕೊಳ್ಳುತ್ತದೆ.

- ಭಾಷಾವನದಲ್ಲಿ ಭಾಷೆಗೆ ಸಂಬಂಧಿಸಿದ ಚಿತ್ರಪಟಗಳನ್ನು ಮಿಂಚುಪಟ್ಟಿಗಳನ್ನು ಬಳಸಬೇಕು.
- ಮಣ್ಣಿನಲ್ಲಿಯೂ ಕೂಡ ವಿದ್ಯಾರ್ಥಿಗಳು ಬರೆಯಬಹುದಾಗಿರುವುದರಿಂದ ನಿಗದಿತ ಜಾಗದಲ್ಲಿ ಮರಳನ್ನು ಬಳಸಿರಬೇಕು.
- ಸಸ್ಯಗಳನ್ನು ನೆಟ್ಟು ಆ ಸಸ್ಯಗಳ ಹೆಸರನ್ನು ಬರೆದಿರಬೇಕು.
- ಸಸ್ಯಗಳಿಗೆ ಒಡ್ಡುಗಳನ್ನು ನಿರ್ಮಿಸಿರಬೇಕು. ಸುಂದರವಾದ ಇಟ್ಟಂಗಿಗಳಿಂದ ಒಡ್ಡುಗಳನ್ನು ನಿರ್ಮಿಸಿದರೆ ಕಲಿಕೆಗೆ ಬಳಸಿಕೊಳ್ಳಬಹುದಾಗಿದೆ.
- ಭಾಷಾವನದ ಆವರಣಕ್ಕಾಗಿ ವಿಧವಿಧದ ಗಿಡಗಳನ್ನು ಬಳಸಿದರೆ ಉತ್ತಮ.
- ಭಾಷಾವನದಲ್ಲಿ ಜಲನಿರೋಧಕ ಚಾರ್ಟುಗಳನ್ನು ಬಳಸಬೇಕು. ಇದರಿಂದಾಗಿ ಮಳೆಗಾಲದಲ್ಲಿಯೂ ಭಾಷಾವನದ ಬಳಕೆಯಾಗುತ್ತದೆ.
- ಭಾಷಾವನ ನಿರ್ಮಾಣ ಮಾಡಲು ಸ್ಥಳಾವಕಾಶ ಇಲ್ಲದಿದ್ದರೆ ಗೋಡೆಗಳ ಮೇಲೆ ಭಾಷಾವನದ ಚಿತ್ರರಚನೆ ಮಾಡಿ ಬಳಸಬಹುದು.
- ಪ್ರೊಜೆಕ್ಟರ್‌ಗಳಮುಖಾಂತರವೂ ಭಾಷಾವನದ ಕಲ್ಪನೆ ಮೂಡಿಸಬಹುದು.
- ಶಿಕ್ಷಕರು ತಮ್ಮ ವಿವೇಚನೆಗೆ ತಕ್ಕಂತೆ ಇನ್ನೂ ವಿನೂತನವಾದ ಭಾಷಾವನದ ನಿರ್ಮಾಣ ಮಾಡಬಹುದು.

**ಚಟುವಟಿಕೆ 12**

**ನೀವು ಪ್ರಯತ್ನಿಸಿ**

**ಶಾಲೆಯ ವನದಲ್ಲಿರುವ ಮೈದಾನದಲ್ಲಿರುವ ಒಂದು ಗಿಡದ ಮೂಲಕ ಮಕ್ಕಳಿಗೆ ಹೇಗೆ ಆಲಿಸುವಿಕೆ ಮಾತನಾಡುವಿಕೆ ಓದುವಿಕೆ ಬರೆಯುವಿಕೆ ಗ್ರಂಥಾವಲೋಕನ ಚಿಂತನ ಕೌಶಲ ಬೆಳೆಸಲು ಯೋಜಿಸಬಲ್ಲಿರಿ? ಭಾಷಾ ಶಿಕ್ಷಕರಿಗೆ ಹಾಗೂ ಮಕ್ಕಳಿಗೆ ಮಾಡುವ ಮಾರ್ಗದರ್ಶನದ ಕುರಿತು ವಿವರಿಸಿ.**

## ಅಧ್ಯಾಯ 2 – ಶಾಲಾ ಭಾಷಾವನ

### 2.1 ಪೀಠಿಕೆ

ಶಾಲೆ ಎಂದರೆ ಬರೀ ಕಟ್ಟಳೆಗಳ ಕಟ್ಟಡವಲ್ಲ. ಶಿಕ್ಷೆಯ ತಾಣವೂ ಅಲ್ಲ. ಶಿಕ್ಷಣ ಕಲಿಕೆ ಪರೀಕ್ಷೆ ಮೌಲ್ಯಮಾಪನ ಪಠ್ಯ ಪಠ್ಯೇತರ ಚಟುವಟಿಕೆಗಳನ್ನು ಅಷ್ಟೇ ನಡೆಸುವ ನೆಲೆಯಷ್ಟೇ ಅಲ್ಲ. ಅದು ಪ್ರೀತಿ ವಿಶ್ವಾಸ ಆತ್ಮಸ್ಥೈರ್ಯ ಸ್ವಾಭಿಮಾನ ಮಾನವೀಯ ಮೌಲ್ಯ ದೇಶಾಭಿಮಾನ ಶಾಂತಿ ಸಹನೆ ಉದಾತ ತತ್ವ ಆದರ್ಶ ನೀತಿಗಳನ್ನು ಬಿತ್ತಿ ಬೆಳಸುವ ಭವ್ಯನೆಲ. ಯೋಗ ಮತ್ತು ಯೋಗ್ಯತೆ ಬರಬೇಕೆಂದರೆ ಕುಶಲತೆ ಆಧಾರಿತ ಸಾಮರ್ಥ್ಯ ಹೊಂದಿರಲೇಬೇಕು ಈ ಕುಶಲತೆ ಸಾಮರ್ಥ್ಯ ರೂಡಿಸಿಕೊಂಡು ಇತರರಿಗಿಂತ ಭಿನ್ನವಾದ ನೆಲೆಯಲ್ಲಿ ಚಿಂತನೆ ನಡೆಸಿ ಬದುಕು ರೂಪಿಸಿಕೊಳ್ಳಬಲ್ಲ ಸಾಮರ್ಥ್ಯ ರೂಢಿಗತವಾಗಬೇಕಾದರೆ ಕಲಿಯುವಾಗಲೇ ಸಕಲ ಕೌಶಲ್ಯಗಳನ್ನು ರೂಡಿಸಿಕೊಂಡಿರಬೇಕು. ಶಾಲೆಗಳಲ್ಲಿ ವಿಭಿನ್ನ ಪ್ರಯೋಗ ಚಟುವಟಿಕೆಗಳ ಮೂಲಕ ಶಿಕ್ಷಕ ಈ ಕೌಶಲಗಳ ಬೆಳವಣಿಗೆಗೆ ಅಭಿವೃದ್ಧಿಗೆ ರೂಢಿಗೆ ಮಾರ್ಗದರ್ಶನ ನೀಡಿ ಪ್ರೋತ್ಸಾಹಿಸುತ್ತಿರುತ್ತಾರೆ. ಭಾಷಾ ಶಿಕ್ಷಕರಂತೂ ಭಾಷೆಯ ಕೌಶಲಗಳನ್ನು ರೂಢಿಸಲು ಹಲವು ಪ್ರಯೋಗಾತ್ಮಕ ಪ್ರಯತ್ನಗಳನ್ನು ಮಾಡುತ್ತಿರುತ್ತಾರೆ. ಭಾಷಾ ಪ್ರಯೋಗಾಲಯ ವರ್ಗ ಕೋಣೆ ಆಟದ ಮೈದಾನ ಈ ಭಿನ್ನ ಕಲಿಕಾ ಪ್ರಯೋಗದ ನೆಲೆಗಳಲ್ಲಿ ಭಾಷಾ ಕೌಶಲಗಳ ರೂಢಿಗೆ ಪ್ರಯತ್ನಿಸುತ್ತಿರುತ್ತಾರೆ. ಅಂತಹ ನೆಲೆಗೆ ಮತ್ತೊಂದು ಪ್ರತಿರೂಪವೇ ಭಾಷಾವನ.

ಶಾಲಾ ಪರಿಸರದಲ್ಲಿ ಮೈದಾನದಲ್ಲಿ ಆಟವಾಡುವುದೆಂದರೆ ಮಕ್ಕಳಿಗೆ ಎಲ್ಲಿಲ್ಲದ ಹುರುಪು. ಉದ್ಯಾನವನಗಳಲ್ಲಂತೂ ಮಕ್ಕಳು ಮನೋರಂಜನೆ ಪಡೆಯುತ್ತಾ ಮೈಮನಗಳನ್ನು ಹುರುಪುಗಳಿಸಿಕೊಳ್ಳುತ್ತಾರೆ. ಅಂತಹ ಭಿನ್ನ ತಾಣವಾದ ಉದ್ಯಾನವನದಲ್ಲಿ ಭಾಷಾ ಕೌಶಲ್ಯಗಳನ್ನು ರೂಢಿಸುವ ವಿನೂತನ ಮಾರ್ಗೋಪಾಯಗಳ, ಚಟುವಟಿಕೆಗಳ ಪ್ರಯೋಗವೇ ಈ ಶಾಲಾ ಭಾಷಾವನ.

### 2.2 ಶಾಲಾ ಭಾಷಾ ವನದ ಮಹತ್ವ

ಭಾಷಾ ಕೌಶಲಗಳನ್ನು ರೂಢಿಸಲು ಸಾಕಷ್ಟು ಮಾರ್ಗೋಪಾಯಗಳಿವೆ. ಭಾಷಾ ಪ್ರಯೋಗಾಲಯ, ವರ್ಗಕೋಣೆ, ಭಾಷಾ ಆಟಗಳು, ಭಾಷಾ ಒಲಂಪಿಕ್ಸ್ ಇದ್ದರೂ ಮತ್ತೊಂದು ಪ್ರಯೋಗವಾಗಿ ಪರಿಸರದ ಮೂಲಕ ಕಲಿಕೆ ಪ್ರಕೃತಿ ಕಲಿಕೆಗೆ ಒತ್ತು ನೀಡುವ ಮೂಲಕ ಭಾಷಾ ಕೌಶಲ್ಯಗಳನ್ನು ರೂಢಿಸುವ ಪ್ರಯತ್ನವಾಗಿ ಭಾಷಾವನವೊಂದನ್ನು ಶಾಲೆಯಲ್ಲಿ ನಿರ್ಮಿಸಿ ಆ ಮೂಲಕವಾಗಿ ಭಾಷಾ ಕಲಿಕೆಯ ವಿನೂತನ ಸಾಧ್ಯತೆಯನ್ನು ಸಾದರ ಪಡಿಸುವುದು ಅವಶ್ಯಕವಾಗಿದೆ.

ತರಗತಿಯ ಕೋಣೆಯ ಹೊರಗಡೆ ಶಾಲಾ ಮೈದಾನದಲ್ಲಿ ಆಟವಾಡುವ ಸಂದರ್ಭದಲ್ಲಿ ಭಾಷಾ ಕೌಶಲ್ಯಗಳನ್ನು ಬೆಳೆಸುವ ನೂತನ ಮಾರ್ಗೋಪಾಯಗಳ ಸಾದರ ರೂಪವಾದ ಭಾಷಾವನದಲ್ಲಿ ಮಕ್ಕಳಿಗೆ ಸ್ವಯಂ ಕಲಿಕೆಯ ಅವಕಾಶಗಳನ್ನು ಸೃಜಿಸಬಹುದಾಗಿದೆ. ಮಕ್ಕಳು ಸ್ವತಃ ಉದ್ಯಾನವನ ನಿರ್ಮಿಸುವ ನಿರ್ವಹಿಸುವ ಗಿಡ ಮರ ಬೆಳೆಸಿ ನಿರ್ಮಿಸುವ ಸೌಂದರ್ಯ ಪ್ರಜ್ಞೆ ಬೆಳಸಿಕೊಳ್ಳುವ ಮೂಲಕ ಹಾಡುತ್ತಾ ನಲಿಯುತ್ತಾ ಕೆಲಸ ಮಾಡುತ್ತಾ ಕಲಿಯುವ ಅವಕಾಶದ ತಾಣವಾಗಿ ಭಾಷಾವನ ಮಹತ್ವದ ಪಾತ್ರ ನಿರ್ವಹಿಸಬಲ್ಲದು.

ಶಾಲಾ ಭಾಷಾವನದಲ್ಲಿ ಮಕ್ಕಳು ತಮ್ಮ ಅನುಭವಗಳನ್ನು ನಿಖರವಾಗಿ ಮತ್ತು ಪ್ರಾಯೋಗಿಕವಾಗಿ ಪಡೆಯುವ ಮೂಲಕ ತಾವು ಮಾತನಾಡುವ ಕಲಿಯುವ ಭಾಷಾ ಕೌಶಲಗಳ ಸಾಹಿತ್ಯವನ್ನು ಹೊಂದಲು ಸಹಾಯಕವಾಗುತ್ತದೆ.

ತಾವು ಪಡೆದ ಅನುಭವವನ್ನು ವಿವಿಧ ಸಂದರ್ಭಗಳಲ್ಲಿ ಉದಾಹರಿಸುವ ಅನ್ವಯಿಸಿಕೊಳ್ಳುವ ಆಯೋಜಿಸಿಕೊಳ್ಳುವ ಅವಕಾಶಗಳನ್ನು ಶಾಲಾ ಭಾಷಾ ವನದ ಮೂಲಕ ರೂಢಿಸಿಕೊಳ್ಳಬಹುದಾಗಿದೆ.

ಮಗುವಿಗೆ ಅವರ ಭಾಷೆಯನ್ನು ಇನ್ನಷ್ಟು ಅಭಿವೃದ್ಧಿಪಡಿಸಲು ಶಾಲಾ ಭಾಷಾವನ ಸಹಾಯ ಮಾಡುತ್ತದೆ. ಅವರು ಸುತ್ತಲೂ ನೋಡುವ ವಿವಿಧ ಬಣ್ಣಗಳು ಆಕಾರಗಳು ಮತ್ತು ಗಾತ್ರಗಳ ಬಗ್ಗೆ ತಿಳಿಯುತ್ತಾ ಅವುಗಳ ಜೊತೆಗೆ ಇನ್ನಷ್ಟು ಮೋಜು ಮಾಡುತ್ತಾ ಅವುಗಳ ಕುರಿತಾದ ಜ್ಞಾನವನ್ನು ಸಂಪಾದಿಸಿಕೊಳ್ಳುತ್ತ, ಪರಸ್ಪರ ಚರ್ಚೆ , ಸಂವಾದ, ವಾದಮಂಡನೆ, ಸಮರ್ಥನೆ ಸಾಧ್ಯತೆಗಳನ್ನು ರೂಡಿಸಿಕೊಳ್ಳಲು ಶಾಲಾ ಭಾಷಾವನ ಸಹಕಾರಿಯಾಗುತ್ತದೆ.

ಯಾವುದೇ ವಸ್ತುವನ್ನು ಕುರಿತಾಗಿ ವಿವರಿಸಲು ವರ್ಣಿಸಲು ಚರ್ಚಿಸಲು ವಿಶ್ಲೇಷಿಸಲು ಶಾಲಾ ಭಾಷಾವನದ ಮೂಲಕ ಪ್ರಾಯೋಗಿಕ ಅನುಭವವನ್ನು ಪಡೆಯುತ್ತಾ ಭಾಷಾ ಕೌಶಲಗಳ ಸಾಮರ್ಥ್ಯ ಅಭಿವೃದ್ಧಿಗೆ ಶ್ರಮಿಸಬಹುದಾಗಿದೆ.

**ಚಟುವಟಿಕೆ 13 : ನಿಮ್ಮ ವ್ಯಾಪ್ತಿಯ ಶಾಲೆಗಳಲ್ಲಿ ಭಾಷಾನವದ ಮೂಲಕ ಭಾಷಾ ಕೌಶಲ ಅಭಿವೃದ್ಧಿಗೆ ಶ್ರಮಿಸಬಹುದೇ? ಚರ್ಚಿಸಿ, ತೀರ್ಮಾನಿಸಿ.**

## 2.3 ಶಾಲಾ ಭಾಷಾವನದ ಮೂಲಕ ಭಾಷಾ ಕೌಶಲಗಳ ಅಭಿವೃದ್ಧಿ

ಭಾಷಾ ಕೌಶಲಗಳನ್ನು ಬೆಳೆಸಲು ಭಾಷಾವನಗಳು ಅತ್ಯಂತ ಸಹಾಯಕವಾಗಿವೆ. ವಿದ್ಯಾರ್ಥಿಗಳಲ್ಲಿ ಆಲಿಸುವುದು, ಮಾತನಾಡುವುದು, ಓದುವುದು, ಬರೆಯುವುದು ಮತ್ತು ಚಿಂತನಕೌಶಲಗಳನ್ನು ಅಭಿವೃದ್ಧಿಪಡಿಸಲು ಭಾಷಾವನಗಳಲ್ಲಿ ಹಮ್ಮಿಕೊಳ್ಳುವ ಚಟುವಟಿಕೆಗಳು ಪೂರಕವಾಗಿವೆ. ಕೇವಲ ವರ್ಗ ಕೋಣೆಯಲ್ಲಿ ಭೌತಿಕವಾಗಿ ಅಥವಾ ಉಪನ್ಯಾಸ ವಿಧಾನದಲ್ಲಿ ಬೋಧನೆ ಮಾಡಿದಾಗ ಮಗು ಕಲಿಕೆಯಲ್ಲಿ ನಿರಾಸಕ್ತಿಯನ್ನು ತೋರಿಸಬಹುದು. ಆದರೆ ಭಾಷಾವನದಲ್ಲಿ ಪರಿಸರದಲ್ಲಿ ಮಗು ಅತ್ಯಂತ ಸಂತೋಷದಿಂದ ವಿಷಯಗಳನ್ನು ತಿಳಿದುಕೊಂಡು ಅರ್ಥೈಸಿಕೊಳ್ಳಬಹುದು.

## 2.4 ಶಾಲಾ ಭಾಷಾವನದ ಮೂಲಕ ಆಲಿಸುವಿಕೆ ಕೌಶಲ್ಯ ಅಭಿವೃದ್ಧಿ ಚಟುವಟಿಕೆಗಳು

ಭಾಷಾ ಕೌಶಲಗಳಲ್ಲಿ ಆಲಿಸುವುದು ವಿಶೇಷ ಕೌಶಲವಾಗಿದೆ. ಆಲಿಸಿದ ನಂತರವೇ ಗ್ರಹಿಕೆ, ಸ್ಮರಣೆ, ಮಾತು, ಬರಹ ಎಲ್ಲವೂ ಸಾಧ್ಯವಾಗುತ್ತದೆ. ಭಾಷಾವನದ ವನದ ಮೂಲಕ ವಿವಿಧ ಸನ್ನಿವೇಶಗಳನ್ನು ಸೃಷ್ಟಿಸುವ ಮೂಲಕ ಸಾಕಷ್ಟು ಅವಕಾಶಗಳು ಭಾಷಾವನದಲ್ಲಿ ನಿರೂಪಿಸಬಹುದು. ಆಲಿಸುವುದು ಎಂದರೆ ಬರಿ ಕೇಳುವುದಲ್ಲ ಲಕ್ಷಕೊಟ್ಟು ಕೇಳುವುದು, ಉದ್ದೇಶಪೂರ್ವಕವಾಗಿ ಕೇಳುವುದು, ಗಮನ ಹರಿಸಿ ಗಮನ ಕೇಂದ್ರೀಕರಿಸಿ ಕೇಳುವುದು, ಭಾಷಾವನದಲ್ಲಿಯ ಪ್ರತಿ ವಸ್ತು ಸಂಗತಿ ಸೂಚನೆಗಳೆಲ್ಲವನ್ನು ಪರಿಚಯಿಸುವ ಕೊಂಡಿಗಳನ್ನು ಆಡಿಯೋ ಲಿಂಕ್ ಗಳನ್ನು ಪ್ರದರ್ಶಿಸುವ ಮೂಲಕ ಪ್ರತಿಯೊಂದು ವಸ್ತುಗಳ ಸ್ವಪರಿಚಯ ಮಾಡಿಕೊಳ್ಳುವ ಅವಕಾಶವನ್ನು ಸೃಷ್ಟಿಸಬಹುದಾಗಿದೆ.

**ಚಟುವಟಿಕೆ – 14**

**ಭಾಷಾವನದಲ್ಲಿ ಆಲಿಸುವಿಕೆ ಕೌಶಲವನ್ನು ಅಭಿವೃದ್ಧಿಪಡಿಸಲು ಕೈಗೊಳ್ಳಬಹುದಾದ ಚಟುವಟಿಕೆಗಳ ಸವಿವರವನ್ನು ಬರೆದು ಅದರಂತೆ ಶಿಬಿರಾರ್ಥಿಗಳನ್ನು ಪ್ರಾಯೋಗಿಕವಾಗಿ ತೊಡಗಿಸಿಕೊಳ್ಳಿ.**

- ಗಿಡಗಳಿಗೆ ಸಂಬಂಧಿಸಿದ ಪದ್ಯಗಳು ಆಡಿಯೋಗಳನ್ನು ಭಾಷಾವನದಲ್ಲಿ ಅಳವಡಿಸುವುದು. ಅವುಗಳನ್ನು ಕೇಳುವುದರ ಮೂಲಕ ಮಕ್ಕಳು ಪರಿಸರದ ಬಗೆಗೆ ಇರುವ ಸಾಹಿತ್ಯವನ್ನು ಗ್ರಹಿಸುವರು.
- ಮಕ್ಕಳ ಮನಸ್ಸನ್ನು ಏಕಾಗ್ರತೆಗೊಳಿಸಲು ಮಕ್ಕಳಿಗೆ ಭಾಷಾವನದಲ್ಲಿ ಕರೆದುಕೊಂಡುಹೋಗಿ ವಿವಿಧ ಸಸ್ಯಗಳ ಪರಿಚಯದ ಮೂಲಕ ಆ ಸಸ್ಯಗಿಡಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಆಡಿಯೋ ಅಥವಾ ಸ್ಪೀಕರ್‌ಗಳನ್ನು ಅಳವಡಿಸಿ ಕೇಳಿಸುವುದು.
- ಗಿಡಗಳಿಗೆ ಸಂಬಂಧಿಸಿದಂತೆ ಕೆಲವು ಗಾದೆಮಾತುಗಳನ್ನು ನುಡಿಗಟ್ಟುಗಳು ಇರುವ ಆಡಿಯೋಗಳನ್ನು ಅಳವಡಿಸುವುದು.
- ಭಾಷಾವನದಲ್ಲಿ ಪ್ರಕೃತಿಯಲ್ಲಾಗುವ ವ್ಯತ್ಯಾಸಗಳ ಆಡಿಯೋಗಳನ್ನು ಅಳವಡಿಸುವುದು ಉದಾಹರಣೆಗೆ ಮಿಂಚು, ಗುಡುಗು, ಮಳೆ, ಬಿರುಗಾಳಿ, ಸಮುದ್ರದ ಅಲೆಗಳು ಇವುಗಳ ಆಡಿಯೋಗಳನ್ನು ಬಳಸುವುದರ ಮೂಲಕ ಮಕ್ಕಳಿಗೆ ಕವನ ರಚನೆಗೆ ಪ್ರೋತ್ಸಾಹ ನೀಡುವುದು ಅಲ್ಲದೆ ವ್ಯಾಕರಣಾಂಶಗಳಾದ ಅನುಕರಣಾವ್ಯಯ ಜೋಡುನುಡಿಗಳ ಬಗ್ಗೆಯೂ ತಿಳುವಳಿಕೆ ನೀಡುವುದು.
- ಗಾದೆಮಾತು, ವಚನ, ನುಡಿಗಟ್ಟು, ಒಗಟುಗಳನ್ನು ಸಂಗ್ರಹಿಸುವ ಚಟುವಟಿಕೆಗಳನ್ನು ಬಳಸಿ ವಿವಿಧ ಸಾಹಿತ್ಯಗಳನ್ನು ಕೇಳಿಸುವುದು.

## 2.5 ಶಾಲಾ ಭಾಷಾವನದ ಮೂಲಕ ಮಾತನಾಡುವಿಕೆ ಚಟುವಟಿಕೆಗಳು

"ನುಡಿದರೆ ಮುತ್ತಿನ ಹಾರದಂತಿರಬೇಕು" ಎನ್ನುವ ಬಸವಣ್ಣನವರ ನುಡಿಯಂತೆ "ಮಾತೇ ಮುತ್ತು; ಮಾತೇ ಮೃತ್ಯು" ಎಂತಹ ಗಾದೆಮಾತುಗಳು ಮಾತಿನ ಮಹತ್ವವನ್ನು ತಿಳಿಸುತ್ತವೆ. ಬೆನ್ ಜಾನ್ಸನ್‌ನ ಪ್ರಕಾರ "ಭಾಷೆಯು ಮನುಷ್ಯನನ್ನು ತೋರಿಸುತ್ತದೆ; ಮಾತನಾಡು ನಾನು ನಿನ್ನನ್ನು ತಿಳಿದುಕೊಳ್ಳುತ್ತೇನೆ. ಉತ್ತಮ ಮಾತನಾಡುವ ಕೌಶಲವು ಸುಸಂಸ್ಕೃತ ಸಮಾಜಕ್ಕೆ ಪಾಸ್‌ಪೋರ್ಟ್ ಆಗಿದೆ." ಸರಿಯಾದ ಮಾತು ಇತರರನ್ನು ಆಕರ್ಷಿಸಲು ಸಹಾಯಮಾಡುತ್ತದೆ ತಪ್ಪಾಗಿ ಮಾತನಾಡುವುದು, ವ್ಯಕ್ತಿಯನ್ನು ಸಾರ್ವಜನಿಕವಾಗಿ ಅಪಹಾಸ್ಯಕ್ಕೆ ಒಳಪಡಿಸುತ್ತದೆ. ಮಾತನಾಡುವ ಕೌಶಲ್ಯವು ಒಬ್ಬರ ಆಲೋಚನೆಗಳನ್ನು ಇತರರಿಗೆ ಸ್ಪಷ್ಟವಾಗಿ ತಿಳಿಸಲು ಸಹಾಯಮಾಡುತ್ತದೆ.

**ಚಟುವಟಿಕೆ– 15**

**ಭಾಷಾವನದಲ್ಲಿ ಮಾತನಾಡುವಿಕೆ ಕೌಶಲ ಅಭಿವೃದ್ಧಿ ಚಟುವಟಿಕೆಗಳನ್ನು ಪಟ್ಟಿ ಮಾಡಿರಿ. ಅದರಂತೆ ಶಿಭಿರಾರ್ಥಿಗಳನ್ನು ಪ್ರಾಯೋಗಿಕವಾಗಿ ತೊಡಗಿಸಿ.**

**ಶಾಲಾ ಭಾಷಾವನದ ಮೂಲಕ ಮಾತನಾಡುವಿಕೆ ಚಟುವಟಿಕೆಗಳು**

- ಭಾಷಾ ವನದಲ್ಲಿ ಒಂದು ವಿಷಯದ ಕುರಿತು ಚರ್ಚಿಸಿ ತೀರ್ಮಾನಕ್ಕೆ ಬರಬಹುದು. ಅನೇಕ ವಿಚಾರಗಳನ್ನು ಹಂಚಿಕೊಳ್ಳಬಹುದು.
- ಶಬ್ದಕೋಶವನ್ನು ಭಾಷಾವನದಲ್ಲಿ ಅಳವಡಿಸುವುದು. ವಿದ್ಯಾರ್ಥಿಗಳು ಸಂವಹನಕ್ಕೆ ಅಗತ್ಯವಾದ ಪದಗಳು ಅರ್ಥ ಮತ್ತು ಉಚ್ಚಾರಣೆಗಳನ್ನು ಅರ್ಥಮಾಡಿಕೊಳ್ಳುತ್ತಾರೆ. ಅವುಗಳನ್ನು ತಮ್ಮ ಸಂಭಾಷಣೆಯಲ್ಲಿ ಅಳವಡಿಸಿಕೊಳ್ಳುತ್ತಾರೆ.
- ವ್ಯಾಕರಣವು ಮಾತನಾಡುವಿಕೆ ಅಗತ್ಯವಾಗಿದೆ. ಕೇಳುಗರು ಗುರುತಿಸುವ ಹಾಗೂ ಅರ್ಥಮಾಡಿಕೊಳ್ಳುವ ರೀತಿಯಲ್ಲಿ ಮಾಹಿತಿಯನ್ನು ತಿಳಿಸಲು ವ್ಯಾಕರಣವು ಸಹಾಯಮಾಡುವುದು. ಭಾಷಾವನದಲ್ಲಿ ವ್ಯಾಕರಣಾಂಶಗಳ ಫಲಕಗಳನ್ನು ಹಾಕುವುದು. ಅವುಗಳನ್ನು ನೋಡಿ ವಿದ್ಯಾರ್ಥಿಗಳು ಮಾತನಾಡಲು ರೂಢಿಸುವರು.

**2.6 ಓದುಗಾರಿಕೆ ಕೌಶಲ ಬೆಳಸುವ ಚಟುವಟಿಕೆಗಳು**

ನಾವು ನಮ್ಮ ದಿನನಿತ್ಯದ ಜೀವನದ ದಿನದ ಪ್ರಾರಂಭ ನಮ್ಮ ಮೊಬೈಲ್ ವಾಟ್ಸಪ್ ಫೇಸ್ಬುಕ್ ಇನ್ಸ್ಟಾಗ್ರಾಮ್ ಹಾಗೂ ವಿಡಿಯೋಗಳನ್ನು ನೋಡುವುದರ ಮೂಲಕ ಹಾಗೂ ಅದರಲ್ಲಿರುವ ಸಂದೇಶಗಳನ್ನು ಓದುವುದರ ಮೂಲಕ ಪ್ರಾರಂಭಿಸುತ್ತೇವೆ. ಅಷ್ಟೇ ಅಲ್ಲದೆ ನಾವು ನಮ್ಮ ದೂರದರ್ಶನದ ಅಲ್ಲಿ ಬರುವ ಮುಖ್ಯಾಂಶಗಳು ಹಾಗೂ ವಾರ್ತಾ ಪತ್ರಿಕೆಯಲ್ಲಿ ಬರುವ ಸುದ್ದಿಗಳನ್ನು ಓದುವುದರ ಮೂಲಕ ನಮ್ಮ ಬೆಳಗಿನ ಸಮಯವನ್ನು ಪ್ರಾರಂಭಿಸುತ್ತೇವೆ. ಹಾಗಾದರೆ ಓದುಗಾರಿಕೆ ಎಂಬುದು ನಮ್ಮ ದಿನದ ಪ್ರಾರಂಭದಿಂದಲೇ ಮೊದಲಾಗುತ್ತದೆ. ಭಾಷಾ ಕೌಶಲಗಳಲ್ಲಿ ಆಲಿಸುವುದು, ಮಾತನಾಡುವುದು, ಓದುವುದು ಮತ್ತು ಬರೆಯುವುದು ನಮ್ಮ ಭಾಷೆಯ ಬೆಳವಣಿಗೆಯಲ್ಲಿ ಅತಿ ಮುಖ್ಯವಾದ ಪಾತ್ರವನ್ನು ವಹಿಸುತ್ತವೆ. ಆಲಿಸುವುದು ಮತ್ತು ಮಾತನಾಡುವುದು ಮಗು ಹುಟ್ಟಿದ ನಂತರ ಬೆಳೆಯುತ್ತಾ ಈ ಎರಡು ಕೌಶಲ್ಯಗಳನ್ನು ತನ್ನಲ್ಲಿ ಬೆಳೆಸಿಕೊಂಡು ಬರುತ್ತದೆ. ಆದರೆ ಓದುಗಾರಿಕೆ ಕೌಶಲವು ಔಪಚಾರಿಕವಾಗಿ ಮಗು ಶಾಲೆಗೆ ಬಂದ ನಂತರ ಕಲಿಯುವಂತಹ ಒಂದು ಕೌಶಲವಾಗಿದೆ. ಶಾಲೆಯ ಎಂಬ ಔಪಚಾರಿಕ ಸಂಸ್ಥೆಗೆ ಮಗು ಪ್ರವೇಶ ಪಡೆದ ನಂತರ ಅದರ ಓದುಗಾರಿಕೆಯ ಕೌಶಲ್ಯದ ಹಂತಗಳು ಪ್ರಾರಂಭವಾಗುತ್ತದೆ. ಈ ಓದುಗಾರಿಕೆ ಕೌಶಲಮಗು ಒಂದು ತಿಳಿದ ಭಾಷೆಯ ಪದಗಳನ್ನು ಅರಿತುಕೊಂಡು ಆ ಪದಕ್ಕೆ ಮೂರ್ತ ಸ್ವರೂಪವನ್ನು ನೀಡುವ ಸಂಕೇತವನ್ನು ಕಲಿಯುವ ಸಮಯವಾಗಿದೆ.

ಮಗುವಿನ ಕಲಿಕೆಯು ಸಂತಸದಾಯಕವಾಗಿರಬೇಕು, ಕುತೂಹಲಕಾರಿಯಾಗಿರಬೇಕು ಆಕರ್ಷಣೆಯವಾಗಿರಬೇಕು ಎಂಬುದು ಹಲವು ಕಾಲದಿಂದಲೂ ನಮಗೆ ಗೊತ್ತಿರುವ ವಿಷಯ. ಹಾಗಾದರೆ ಮಗುವಿಗೆ ಕುತೂಹಲಕಾರಿಯು ಸಂತಸದಾಯಕವಾಗಿರುವ ವಾತಾವರಣವಾದ ನಾವೀಗ ಉದ್ಯಾನದ ಪರಿಚಯವನ್ನು ಮಾಡುತ್ತಾ ಉದ್ಯಾನದ ಒಳಗಡೆ ಮಗುವಿನ ಕಲಿಕೆಯನ್ನು ಪ್ರಾರಂಭಿಸಿದರೆ ಹೇಗೆ ಎಂಬುದರ ಬಗ್ಗೆ ತಿಳಿಯೋಣ.

ಓದು ವ್ಯಕ್ತಿಯ ಮೂರನೇ ಕಣ್ಣು ಇನ್ನೊಬ್ಬರು ಯೋಚಿಸಲು ಅಥವಾ ಕನಸು ಕಾಣಲು ಸಾಧ್ಯವಾಗದನ್ನು ನೋಡುವ ಮತ್ತು ವೀಕ್ಷಿಸುವ ಶಕ್ತಿಯನ್ನು ಅದು ಹೊಂದಿದೆ. ಓದುವಿಕೆಯು ಒಬ್ಬರ ಕಲ್ಪನಾ ವ್ಯಾಪ್ತಿಯನ್ನು ವಿಸ್ತರಿಸುತ್ತದೆ. ಇದು ಕಣ್ಣುಗಳಿಗೆ ಹೊಸ ದೃಷ್ಟಿ ಮತ್ತು ಮನಸ್ಸಿಗೆ ಹೊಸ ಬುದ್ಧಿವಂತಿಕೆಯನ್ನು ನೀಡುತ್ತದೆ ಮನಸಿನೊಂದಿಗೆ ಹೊಸ ಸಾಫ್ಟ್ ವೇರ್ ನೊಂದಿಗೆ ಲೋಡ್ ಮಾಡುತ್ತದೆ.ಓದುವಿಕೆ ಬೌದ್ಧಿಕ ಮತ್ತು ಭಾವನಾತ್ಮಕ ಬೆಳವಣಿಗೆಯ ಮೇಲೆ ಪರಿಣಾಮ ಬೀರುವ ಪ್ರಮುಖ ಅಂಶವಾಗಿದೆ.

ಓದುವ ಅಭ್ಯಾಸವು ಜ್ಞಾನದ ಕೋಣೆಗೆ ಕಿಲಿಕೈ. ಒಳ್ಳೆಯ ಓದು ಅಭ್ಯಾಸವು ಆರೋಗ್ಯಕರ ವ್ಯಸನವಾಗಿದೆ. ಒಮ್ಮೆ ಈ ಶಕ್ತಿಯುತ ಅಭ್ಯಾಸವನ್ನು ಕರಗತ ಮಾಡಿಕೊಂಡರೆ ಇದು ಶಬ್ದಕೋಶ ವಿಶ್ಲೇಷಣಾತ್ಮಕ ಕೌಶಲಗಳು ಏಕಾಗ್ರತೆಯ ಶಕ್ತಿ ಮತ್ತು ಹೊಸ ಪದಗಳನ್ನು ಅರ್ಥೈಸಿಕೊಳ್ಳುವುದನ್ನು ಸುಧಾರಿಸುತ್ತದೆ. ಆ ಮೂಲಕ ಶೈಕ್ಷಣಿಕ ಮತ್ತು ಸ್ಪರ್ಧಾತ್ಮಕ ಸಾಧನೆಗಳಲ್ಲಿ ವ್ಯಕ್ತಿಗೆ ಸಹಾಯ ಮಾಡುತ್ತದೆ.

ಮಾನವನು ಇತರ ಜೀವಿಗಳಿಗಿಂತ ಭಿನ್ನವಾಗಿ ಕಾಣುವುದು ಆತನ ಭಾಷೆ ಆಲೋಚನೆ ಮತ್ತು ಓದುಗಾರಿಕೆ. ಓದುಗಾರಿಕೆ ಪ್ರತಿಯೊಬ್ಬ ನಾಗರಿಕನಿಗೂ ಕೂಡ ಅತ್ಯವಶ್ಯಕವಾದ ಕೌಶಲ ಇದು ಮಗುವಿನ ಶಾಲಾ ಹಂತದ ಗಟ್ಟಿ ಓದುವಿನಿಂದ ಪ್ರಾರಂಭವಾಗಿ, ವಿಮರ್ಶಾತ್ಮಕ ಓದಿನ ಹಂತದವರಿಗೆ ವಿಭಿನ್ನ ರೀತಿಯ ಅನುಭವವನ್ನು ನೀಡುತ್ತದೆ. ಆದ್ದರಿಂದ ಓದುಗಾರಿಕೆಯನ್ನು ಆಸಕ್ತಿದಾಯಕ ಹಾಗೂ ಉಲ್ಲಾಸಕರ ವಾತಾವರಣದ ಮೂಲಕ ಕಲಿಯುವ ವಿನೂತನ ವಿಧಾನವೇ ಭಾಷಣದ ಪರಿಕಲ್ಪನೆ ಮರದ ಮಾತು ಆಲಿಸು ಮರದೊಂದಿಗೆ ಮಾತನಾಡು ಮರದ ಬಗ್ಗೆ ಓದು ಮತ್ತು ಮರದ ಭಾಷೆ ಬರೆ ಎಂದು ಮಗುವಿನಲ್ಲಿ ಆಸಕ್ತಿ ಕೆರಳಿಸಿ ಕಲಿಕೆಯನ್ನು ದೃಢಪಡಿಸುವುದು.

**ಉದಾ** : ಮಾದರಿ ಓದಿನ ಆಡಿಯೋ, ಮಾದರಿ ವಾಚನ ಮಾಡುವುದು

ಯಾವುದಾದರೂ ಒಂದು ಗಿಡದ ವಸ್ತುವಿನ ಸ್ವಗತ ಪರಿಚಯ ಮಾಡಿಸುವುದು.

**ಚಟುವಟಿಕೆ – 16: ಭಾಷಾವನದಲ್ಲಿ ಓದುವಿಕೆ ಕೌಶಲ್ಯ ಅಭಿವೃದ್ಧಿ ಚಟುವಟಿಕೆಗಳನ್ನು ಪ್ರಾಯೋಗಿಕವಾಗಿ ಮಾಡಿರಿ.**

## 2.7 ಭಾಷಾ ವನದಲ್ಲಿ ಓದು ಕೌಶಲದ ಚಟುವಟಿಕೆಗಳು

**1. ಅಕ್ಷರ ಗುರುತಿಸಿ– ಪದ ಓದು.**

ಮರಗಳಿಗೆ ತೂಗುಹಾಕಿರುವ ಪದಗಳ ಪಟ್ಟಿಯನ್ನು ಗಟ್ಟಿಯಾಗಿ ಓದುವುದು.

ಉದಾಹರಣೆಗೆ

**ಅರಸ, ಅಗಸ, ಅಮರ, ಅಚಲ, ಅವಸರ, ಅವಕಾಶ ಇತ್ಯಾದಿ.**

**Apple, Home, Tree, Fruiot, Flowers, Weeks, Games**

**2. ಪದ ಓದು– ವಾಕ್ಯ ರಚಿಸು.**

**ಮರದಲ್ಲಿ ತೂಗು ಹಾಕಿರುವ ಸರಳ ಶಬ್ದಗಳನ್ನು ಉಪಯೋಗಿಸಿಕೊಂಡು ಸಣ್ಣ ವಾಕ್ಯಗಳನ್ನು ರಚಿಸಿ ಓದುತ್ತಾರೆ**

**ಉದಾಹರಣೆಗೆ**

ಅರಸ, ಅಗಸ, ಅಮರ, ಅಚಲ, ಅವಸರ, ಅವಕಾಶ, ಇತ್ಯಾದಿ.

1. ಅಮರನ ಅಮ್ಮನ ಅರಮನೆಯ ಅಂದ.
2. ಅರಸನ ಅರಮನೆಯ ಅಚಲ.

3. ಅಜಯನ ಅವಸರದ ಆಪತ್ತು.
4. ಅಪ್ಪ ಅಮ್ಮನ ಅಡಿಕೆ ಮರ.

| |
|---|
| Ram, Sing, Play, Dance, Read |

1. Ram sings song
2. I like to play.
3. They are dancing
4. We are reading book

**3. ಗಾದೆ ಓದು ಅರ್ಥ ತಿಳಿ**

ಮರದಲ್ಲಿ ನೇತು ಹಾಕಿರುವ ಗಾದೆ ಮಾತುಗಳ ಪಟ್ಟಿಯನ್ನು ಮಕ್ಕಳು ಕುತೂಹಲದಿಂದ ನೋಡುವರು ಮತ್ತು ಅವುಗಳ ಅರ್ಥವನ್ನು ಚರ್ಚಿಸಿ ತಿಳಿಯುವರು.

- ❖ ಅಡಿಕೆಗೆ ಹೋದ ಮಾನ ಆನೆ ಕೊಟ್ಟರೂ ಬಾರದು.
- ❖ ಅಳಿಲ ಸೇವೆ ಮಳಲ ಭಕ್ತಿ.
- ❖ ಅತ್ತೆ ಆಸ್ತಿನ ಅಳಿಯ ದಾನ ಮಾಡಿದ.
- ❖ ಅಳಿಯ ಮನೆ ತೊಳೆಯ.
- ❖ ಅಲ್ಪರ ಸಂಘ ಅಭಿಮಾನ ಭಂಗ.
- ❖ ಅರ್ಧ ಕಲಿತವನ ಅಬ್ಬರ ಹೆಚ್ಚು.
- ❖ ಅಳಿಯನಿಗೆ ದೀಪಾವಳಿ ಮಾವನಿಗೆ ಕೋಪಾವಳಿ.
- ❖ ಅಯ್ಯಾ ಎಂದರೆ ಸ್ವರ್ಗ ಎಲವೋ ಎಂದರೆ ನರಕ.
- ❖ ಅತಿ ಆಸೆ ಗತಿಗೇಡು.
- ❖ ಅತಿಯಾದರೆ ಅಮೃತ ವಿಷ

- A barking dog never bites
- Bad news travels fast
- Cold hands, warm heart
- Do as you would be done by
- East is east, and west is west

| |
|---|
| **ಚಟುವಟಿಕೆ – 17 : ಭಾಷಾ ವನದಲ್ಲಿ ಓದುಗಾರಿಕೆ ಕೌಶಲ ಚಟುವಟಿಕೆಗಳನ್ನು ಇನ್ನಷ್ಟು ಪಟ್ಟಿ ಮಾಡಿರಿ.** |

## 2.8 ಬರೆಯುವಿಕೆ ಕೌಶಲ ಬೆಳೆಸುವ ಚಟುವಟಿಕೆಗಳು.

**ಬರವಣಿಗೆಯ ಅರ್ಥ:**

'ಬರವಣಿಗೆ ಎಂಬುದು ಧ್ವನಿ ಸಂಕೇತಗಳಿಗೆ ಆಕಾರ ಕೊಡುವ ಕ್ರಿಯೆ'

ಬರಹ ಕೌಶಲವನ್ನು ಲೇಖನ ಕೌಶಲ ಎಂದು ಕರೆಯಲಾಗುತ್ತದೆ. ಮಾತಿನಂತೆ ಬರಹ ಕೂಡ ಅಭಿವ್ಯಕ್ತ ಕೌಶಲವಾಗಿದೆ. ಬರಹಯು ವಿದ್ಯಾರ್ಥಿಯ ಜ್ಞಾನದ ಕೈಗನ್ನಡಿ. ವ್ಯಕ್ತಿಯ ಭಾವನೆಯ ಅಭಿವ್ಯಕ್ತಿಯ ವಾಹಕವಾಗಿದೆ. ಮಗುವಿನ ಅಕ್ಷರಭ್ಯಾಸದೊಂದಿಗೆ ಆರಂಭವಾಗಿ ವೈಚಾರಿಕ ಲೇಖನದ ವರೆಗಿನ ವಿಭಿನ್ನ ಆಯಾಮಗಳನ್ನು ಒಳಗೊಂಡಿದೆ. ಬರವಣಿಗೆ ನೋಡಲು ಸುಂದರವಾಗಿ, ಓದಲು ಅದ್ಭುತ ಲೋಕ ಸೃಷ್ಟಿಸಿ, ವಿಮರ್ಶಕ ಅಕ್ಕಸಾಲಿಗನ ಕೈಯಲ್ಲಿ ಹೊಳೆಯುವ ಆಭರಣವಾಗುತ್ತದೆ. ಮಕ್ಕಳು ತಮ್ಮ ಅಂತರಂಗದ ಭಾವನೆ ಕನಸು ವಿಚಾರ ಆಲೋಚನೆಗಳು ಕಲ್ಪನೆಗಳನ್ನು ಲಿಖಿತ ರೂಪದಲ್ಲಿ ಅಭಿವ್ಯಕ್ತಿಸಲು ಅವಕಾಶ ನೀಡುವುದು. ಗ್ರಹಿಕೆ ಅಭಿವ್ಯಕ್ತಿ ಧಾರಣ ಮನನದಲ್ಲಿ ಬರವಣಿಗೆಯು ಸ್ಥಾನವನ್ನು ಕಂಡುಕೊಳ್ಳುವುದು. ಶಬ್ದ ಭಂಡಾರದ ಬೆಳವಣಿಗೆ ವಾಕ್ಯ ರಚನೆಯ ಕ್ರಮ ಉಚ್ಚಾರಣೆಯ ಕ್ರಮ ಸಂವಹನ ಕೌಶಲಗಳನ್ನು ರೂಡಿಸಿಕೊಳ್ಳಲು ಅವಕಾಶ ಕಲ್ಪಿಸುವುದು. ಸ್ಪುಟವಾದ ಸುಂದರ ಕೈಬರಹದೊಂದಿಗೆ ವ್ಯಾಕರಣ ಬದ್ಧವಾಗಿ ವಾಕ್ಯ ಸರಣಿ ರಚಿಸಲು ಉತ್ತೇಜನ ನೀಡುವುದು.

### ಭಾಷಾ ವನದಲ್ಲಿ ಬರೆಯುವ ಕೌಶಲ

ಭಾಷಾ ಕೌಶಲಗಳಲ್ಲಿ ಬರವಣಿಗೆಯು ಒಂದು ಕೃತಕ ಕೌಶಲ. ಔಪಚಾರಿಕ ವ್ಯವಸ್ಥೆಯಲ್ಲಿ ಶಿಸ್ತು ಬದ್ಧವಾಗಿ ಕಲಿಯುವುದು ಅವಶ್ಯಕವಾಗಿದೆ. ಭಾಷಾ ವನದಲ್ಲಿ ಮಗು ಸಂತಸದಾಯಕವಾಗಿ, ಅಕ್ಷರಭ್ಯಾಸವನ್ನು ಮಾಡಬೇಕು. ಅದಕ್ಕಾಗಿ ಶಿಕ್ಷಕರು ತಮ್ಮ ತರಗತಿಯ ಮಕ್ಕಳನ್ನು ಕ್ರಿಯಾತ್ಮಕವಾಗಿ ತೊಡಗಿಸಿ ಅನುಭವಿಸಿ ಅಕ್ಷರದ ಆಟವನ್ನು ಆಡುವುದು ಮುಖ್ಯವಾಗಿದೆ. ಭಾಷಾವನದಲ್ಲಿ ಬರವಣಿಗೆಯನ್ನು ಕಲಿಯಲು ನೆಲವೇ ಅತ್ಯಂತ ಸೂಕ್ತ. ನೆಲದಲ್ಲಿ ಅಕ್ಷರಗಳನ್ನು ದೊಡ್ಡದಾಗಿ ಬರೆಯಬಹುದು ಮತ್ತು ಇದು ಕಡಿಮೆ ವೆಚ್ಚದ ಸಾಧನವಾಗಿದೆ. ಭಾಷಾ ವನದಲ್ಲಿ ಸಿಮೆಂಟ್ ಕಪ್ಪು ಹಲಗೆಯನ್ನು ಮಾಡಿ ಸೀಮೆ ಸುಣ್ಣ ಬಳಸಿ ಅಕ್ಷರ ಪದ ಬರೆಯುವ ಅಭ್ಯಾಸ ಮಾಡಬಹುದು.

**ಚಟುವಟಿಕೆ – 18**
**ಭಾಷಾವನದಲ್ಲಿ ಬರೆಯುವ ಅವಕಾಶವನ್ನು ಸೃಜಿಸುವ ಬಗೆ ಹೇಗೆ? ಚರ್ಚಿಸಿ, ಚಟುವಟಿಕೆಗಳನ್ನು ರೂಪಿಸಿರಿ.**

**ಚಟುವಟಿಕೆಗಳು**

**1. ಅಕ್ಷರ ಓದು – ನನ್ನ ಹಾಗೆ ಬರೆ.**
ಮರಕ್ಕೆ ತೂಗು ಹಾಕಿರುವ ವರ್ಣಮಾಲೆಯ ಪಟ್ಟಿಯನ್ನು ನೋಡಿ, ಅದರಂತೆ ಬರೆಯುವುದು..

**1. ಪದ ಓದಿ– ಬರೆಯೋಣ.**

ಭಾಷಾ ವನದ ಮರದ ಟೊಂಗಿಯಲ್ಲಿ ತೂಗು ಹಾಕಿರುವ ಪದಗಳ ಪಟ್ಟಿಯನ್ನು ನೋಡಿ ಅದರಂತೆ ಮಕ್ಕಳು ಓದುತ್ತಾ ನಕಲು ಮಾಡುವರು.

ಅರ ಅರಸ ಅವಸರ ನವರಸ

ಮರ ದಸರ ಆಗಮನ ಜನಮನ

ಸರ ಸರಸ ಏಕದಳ ಅಪಜಯ

ನಳ ಕವನ ಕಲರವ ರಸಮಯ

**Chack, Pen, Peild, Ball, Rat, Cat, Door, Entre, Chiar, Foot**

**3. ಗುಣಿತಾಕ್ಷರಗಳನ್ನು ಬರೆಯೋಣ.**

ಮರಳ ಪಾಟಿಯಲ್ಲಿ ಗುಣಿತಾಕ್ಷರಗಳ ಪಟವನ್ನು ನೋಡಿ ನಕಲು ಮಾಡುವುದು.

ಕ ಕಾ ಕಿ ಕೀ ಕು ಕೂ ಕೃ ಕೆ ಕೇ ಕೈ ಕೊ ಕೋ ಕೌ ಕಂ ಕಃ

ಗ ಗಾ ಗಿ ಗೀ ಗು ಗೂ ಗೃ ಗೆ ಗೇ ಗೈ ಗೊ ಗೋ ಗೌ ಗಂ ಗ

**4. ನನ್ನ ವಾಕ್ಯ–ನನ್ನ ಬರೆಹ.**

**ಮಕ್ಕಳು ಭಾಷಾವನದ ಮರದಲ್ಲಿ ತೂಗು ಹಾಕಿರುವ ಸರಳ ವಾಕ್ಯವನ್ನು ನೋಡಿ ಓದುತ್ತಾ ನಕಲು ಮಾಡುವರು.**

ಜಾಣ ಬಾಲಕನ ಗಾಯನ

ಜನರ ರಾಜ ನಾಡ ಮಹಾರಾಜ

ಒಲೆ ರಾಜನ ಕಿರೀಟ ಮಣಿಗಳ ಕಿರೀಟ.

ಗುರುಗಳು ಹಾಡಲು ಹಾಡುವರು

ಮರದಲ್ಲಿ ತೂಗುವ ಗೀಜುಗನ ಗೂಡು


ಬಡಗಿ ಒಣಮರದ ನೇಗಿಲು ಮಾಡುವನು

ರಾಮನ ಅಂಗಡಿಯ ಕರದಂಟು.

ರಾಧೆಯ ಮನೆಯ ಕೈತೋಟ.

**5. ಚಿತ್ರನೋಡು – ವಾಕ್ಯಬರೆ.**

**ಮಕ್ಕಳು ನಿತ್ರವನ್ನು ನೋಡಿ ತಮ್ಮ ಕಲ್ಪನೆಯ ವಾಕ್ಯಗಳನ್ನು ಬರೆಯುವುದು.**



1.

----------------------------------------------------------------------

--------------------------------------------------------

2.



-----------------------------------------------------------------------------

-----------------------------------------------------------------------------

## 2.9. ಗ್ರಂಥಾವಲೋಕನ ಕೌಶಲ ಬೆಳೆಸುವ ಚಟುವಟಿಕೆಗಳು

ಶೈಕ್ಷಣಿಕ ಪ್ರಕ್ರಿಯೆಯಲ್ಲಿ ಕೌಶಲ್ಯಗಳನ್ನು ರೂಡಿಸಿಕೊಂಡು ಸಮರ್ಥ ಸಂವಹನಕಾರರಾಗಿ ಹೊರಹೊಮ್ಮಿದ ಮಕ್ಕಳು ತಮ್ಮ ಜ್ಞಾನ ಅಭಿವೃದ್ಧಿಯನ್ನು ಮಾಡಿಕೊಳ್ಳಬೇಕಾದರೆ ಓದುವ ಮತ್ತು ಬರೆಯುವ ಕೌಶಲ್ಯಗಳನ್ನು ಬಳಕೆ ಮಾಡುತ್ತಾ ಸಾಕಲೇಬೇಕು. ಕುತೂಹಲ ಕೌತುಕತೆ ಮೂಲವಾಗುತ್ತದೆ. ಭಾಷಾ ಕಲಿಕೆಯ ಪ್ರಕ್ರಿಯೆಗಳಲ್ಲಿಯೂ ಕುತೂಹಲವು ಜ್ಞಾನದ ಹಂಬಲದ ಈಡೇರಿಕೆಗೆ ಒಂದಿಲ್ಲೊಂದು ರೀತಿಯಲ್ಲಿ ಹುಡುಕುವಿಕೆಯಲ್ಲಿ ತೊಡಗಲೇಬೇಕಾಗುತ್ತದೆ ಅಂದರೆ ಜ್ಞಾನದ ಲಿಖಿತ ದಾಖಲೆಗಳಾದ ಆಗರಗಳಾದ ಗ್ರಂಥಗಳ ಮತ್ತು ಅದರಲ್ಲಿ ಅಡಗಿರುವ ಭಾಷಿಕ ಸಾಹಿತಿಕ ಸಾಮಾಜಿಕ ವ್ಯವಹಾರಿಕ ಆಧ್ಯಾತ್ಮಿಕ ಆರ್ಥಿಕ ರಾಜಕೀಯ ಸಾಮಾಜಿಕ ಮುಂತಾದ ಸತ್ವಗಳನ್ನು ಅರಿಯಲು ಗ್ರಂಥಾ ಅವಲೋಕನ ಅಂದರೆ ಆಲೋಡನಾ ಕೌಶಲವನ್ನು ರೂಡಿಸಿಕೊಳ್ಳಲೇಬೇಕು. ಭಾಷಾವನದ ಮೂಲಕವೂ ಈ ಗ್ರಂಥಾ ಅವಲೋಕನ ಕೌಶಲವನ್ನು ರೂಢಿಸುವ ಚಟುವಟಿಕೆಗಳನ್ನು ಈ ಮುಂದಿನಂತೆ ಮಾಡಬಹುದಾಗಿದೆ.

**ಕವಿ ಕೃತಿ ವೃಕ್ಷ**

ಭಾಷಾವರದಲ್ಲಿ ಕವಿಗಳ ಹೆಸರುಗಳು ಮತ್ತು ಅವರುಗಳ ಕೃತಿಗಳನ್ನು ಹೆಸರಿಸಿದ ಪಟಗಳನ್ನು ಪ್ರದರ್ಶನ ಮಾಡುವುದು ಕವಿಯು ತನ್ನ ಕೃತಿಯ ಬಗ್ಗೆ ಹೇಳಿಕೊಳ್ಳುವ ಧ್ವನಿಸುರುಳಿಗಳ ಕೊಂಡಿಯನ್ನು ಪ್ರದರ್ಶಿಸುವುದು. ಆ ಮೂಲಕ ಮಕ್ಕಳು ಆಕರ್ಷಿತಗೊಂಡು ಗ್ರಂಥಾಲಯದಲ್ಲಿ ಆ ಕೃತಿಗಳ ಹುಡುಕುವಿಕೆಯಲ್ಲಿ ತೊಡಗುವ ಓದುವ ಸ್ವಾನುಭವವನ್ನು ಸೃಷ್ಟಿಸಿಕೊಳ್ಳುತ್ತಾರೆ.

**ಕೃತಿ ಪರಿಚಯ** – ಕವಿಯ ಕೃತಿಯ ಕುರಿತಾದ ಸಾರಾಂಶವನ್ನು ವಿವರವಾಗಿ ಚಿತ್ರಪಟದ ಮೂಲಕ ಪ್ರದರ್ಶಿಸುವುದು.

**ನನ್ನ ಕೃತಿ ನನ್ನ ಧ್ಯೇಯ** – ಕವಿ ಲೇಖಕರ ಹೇಳಿಕೆ ಅಥವಾ ಘೋಷವಾಕ್ಯ ಧ್ಯೇಯಗಳನ್ನು ಹೇಳಿಕೆ ರೂಪದಲ್ಲಿ ಪ್ರದರ್ಶಿಸುವುದು.

**ಚಟುವಟಿಕೆ – 19 ನೀವು ಓದಿದ ಕವಿ ಕೃತಿಗಳ ಹೆಸರುಗಳನ್ನು ಪಟ್ಟೀಕರಿಸಿ.**

**ಭಾಷಾವನ ಗ್ರಂಥಾಲಯ ಮೂಲೆ–** ಭಾಷಾವನದ ಒಂದು ಮೂಲೆಯಲ್ಲಿ ಪ್ರಮುಖ ಕೃತಿಗಳ ಒಂದು ಪುಟ್ಟ ಗ್ರಂಥಾಲಯ ಅಥವಾ ಓದುವ ಮೂಲೆಯನ್ನು ನಿರ್ವಹಿಸುವುದು ಅಲ್ಲಿ ದಿನಪತ್ರಿಕೆ,ಮಾಸಪತ್ರಿಕೆ,ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಂಬಂಧಪಟ್ಟ ಪುಸ್ತಕಗಳನ್ನು ಇಟ್ಟು ಓದಲು ಸಹಕರಿಸುವುದು.

## 2.10 ಚಿಂತನ ಕೌಶಲ ಬೆಳೆಸುವ ಚಟುವಟಿಕೆಗಳು.

ಒಂದು ವಿಷಯದ ಬಗ್ಗೆ ಏನು ? ಏಕೆ ? ಹೇಗೆ ? ಎಂಬ ಪ್ರಶ್ನಿಸುವ ಮನೋಭಾವನೆಯನ್ನು ಮೂಡಿಸುವದೇ ಚಿಂತನಾ ಕೌಶಲ. ಯಾವ ಕೆಲಸವನ್ನು ಮಾಡಬೇಕು, ಯಾವುದನ್ನು ನಂಬಬೇಕು ಎಂದು ಸ್ಪಷ್ಟವಾಗಿ ಹಾಗೂ ತರ್ಕಬದ್ದವಾಗಿ ಯೋಚಿಸುವ ಸಾಮರ್ಥವನ್ನು ವಿಮರ್ಶಾತ್ಮಕ ಚಿಂತನೆ ಎನ್ನುತ್ತಾರೆ. ಯಾವುದೇ ಹೊಸ ಮಾಹಿತಿ ಸಿಕ್ಕಾಗ ಮಕ್ಕಳು ಹೇಗೆ ಪ್ರತಿಕ್ರಿಯಿಸುತ್ತಾರೆ.ತಮ್ಮ ಜ್ಞಾನದ ಹಾಗೂ ಅನುಭವ ಮೂಲಕ ಸಮಸ್ಯೆ ಅಥವಾ ಬದಲಾವಣೆಯನ್ನು ಹೇಗೆ ಎದುರಿಸುತ್ತಾರೆ, ಹೇಗೆ ಪ್ರತಿಕ್ರಿಯಿಸುತ್ತಾರೆ ಎಂಬುದು ಬಹಳ ಮುಖ್ಯ. ಅದಕ್ಕೆ ಶಿಕ್ಷಕರು ಬೇರೆ ಬೇರೆ ಜನರ ಜೊತೆಯಲ್ಲಿ ಬೆರೆಯಲು,ಆಡಲು ಬಿಡಬೇಕು.ಮಕ್ಕಳ ಆಸಕ್ತಿಗನುಗುಣವಾಗಿ ಅವರ ಜ್ಞಾನವೃದ್ಧಿಗೆ ಸಹಾಯ ಮಾಡಬೇಕು. ಅವರ ವಿಚಾರಗಳನ್ನು,ಯೋಜನೆಗಳನ್ನು ಬರೆಯಲು ಸೂಚಿಸಬೇಕು.ಇದರಿಂದ ಮಕ್ಕಳ ವಿಚಾರಗಳಲ್ಲಿ ಸ್ಪಷ್ಟತೆ ಹಾಗೂ ಆಳತೆ ಉಂಟಾಗುತ್ತದೆ.

**ಭಾಷಾ ವನದಲ್ಲಿ ಚಿಂತನಾ ಕೌಶಲ.**

ಪ್ರಕೃತಿಯು ಮನುಷ್ಯನ ಆವಿಷ್ಕಾರಗಳ ತಾಯಿ. ಮಾನವನ ಹೊಸ ಚಿಂತನೆ, ಆಲೊಚನೆ ಮತ್ತು ಸಂಶೋಧನೆಗೆ ಪ್ರೇರಣೆ ನೀಡಿದೆ. ಉದಾಹಣೆಗೆ ನ್ಯೂಟನನು ಮರದಿಂದ ಕೆಳಗೆ ಬೀಳುವ ಸೇಬಿನಿಂದ ಗುರುತ್ವಾಕರ್ಷನೆ ನಿಯಮ ಕಂಡು ಹಿಡಿದಿರುವುದು. ಅದರಂತೆ ಭಾಷಾವನ ಮಗುವಿನಲ್ಲಿ ಚಿಂತನಾ ಮತ್ತುವಿಮರ್ಶಾ ಕೌಶಲ ಅಭಿವೃದ್ಧಿಪಡಿಸಲು ಪೂರಕವಾಗುತ್ತದೆ. ಭಾಷಾವನವು ಭಾಷಾಯ ಕಲಾತ್ಮಕ ಮತ್ತು ವಿಭಿನ್ನ ಪ್ರಯೋಗಗಳನ್ನು ಮಾಡಲು ಸಹಾಯವಾಗುತ್ತದೆ. ಸಾಹಿತ್ಯದ ಪ್ರಕಾರಗಳಾದ ಕಥೆ, ಕವನ, ನಾಟಕ, ಪ್ರಬಂಧ, ಮುಂತಾದವುಗಳ ರಚನೆಗೆ ಪೂರಕವಾದ ವಾತವರಣ ಸೃಷ್ಠಿ ಮಾಡುತ್ತದೆ.

**ಚಟುವಟಿಕೆ–20**
**ಕೆಲವೊಂದು ವಿಷಯಗಳನ್ನು ನೀಡಿ ನಾಲ್ಕು ಗುಂಪುಗಳಿಗೆ ವಿಷಯ ಆಯ್ದುಕೊಂಡು ಆಲಿಸುವ ಮಾತನಾಡುವ ಓದುವ ಬರೆಯುವ ಕೌಶಲಗಳ ಕುರಿತು ವಿಶ್ಲೇಷಿಸಿ ವಿವರಿಸಲು ತಿಳಿಸಿರಿ.**

**ಚಟುವಟಿಕೆಗಳು.**

1. ಮಕ್ಕಳು ತಮಗೆ ಗೊತ್ತಿರುವ ಮರಗಳ ಹೆಸರನ್ನು ಪಟ್ಟಿ ಮಾಡುತ್ತಾರೆ.
2. ಮರದಲ್ಲಿರುವಪದಗಳ ಪಟ್ಟಿಯನ್ನು ನೋಡಿ ಸಂಧಿಯ ಹೆಸರನ್ನು ಹೇಳುವರು.
3. ಒಗಟು ಓದು ಉತ್ತರ ಹೇಳು.

ಮಕ್ಕಳು ಭಾಷಾ ವನದಲ್ಲಿ ನೇತು ಹಾಕಿರುವ ಒಗಟುಗಳನ್ನು ಕುತೂಹಲದಿಂದ ಓದುತ್ತಾರೆ ಒಗಟಿನ ಅರ್ಥವನ್ನು ತಿಳಿದು ಸಂತೋಷದಿಂದ ನಲಿಯುತ್ತಾರೆ.

- ಅಂಗನ ಮಂಗಣ್ಣ ಅಂಗಿ ಬಿಚ್ಚಿ ನುಂಗಣ್ಣ. ಉತ್ತರ– ಬಾಳೆಹಣ್ಣು
- ಅಂಗೈ ಅಗಲದ ರೊಟ್ಟಿಗೆ ಲೆಕ್ಕವಿಲ್ಲದಷ್ಟು ಉಪ್ಪಿನಕಾಯಿ. ಉತ್ತರ– ಆಕಾಶ ನಕ್ಷತ್ರ
- ಅಂಗೈ ಕೊಟ್ಟರೆ ಮುಂಗೈ ನುಂಗುತ್ತದೆ. ಉತ್ತರ – ಬಳೆ
- ಅಪ್ಪನಿಗೆ ಎಣಿಸಲಾಗದು ಅಮ್ಮನಿಗೆ ಮಡಿಸಲಾಗದು. ಉತ್ತರ–ಆಕಾಶನಕ್ಷತ್ರ
- ಅಂಗಡಿಯಿಂದ ತರೋದು ಮುಂದಿಟ್ಟುಕೊಂಡು ಅಳೋದು. ಉತ್ತರ – ಈರುಳ್ಳಿ
- ಅನ್ನ ಮಾಡಲಿಕ್ಕೆ ಬಾರದಂತ ಅಕ್ಕಿ ಯಾವುದು. ಉತ್ತರ–ಏಲಕ್ಕಿ.

**3. ಚಿತ್ರನೋಡು– ಕಥೆಬರೆ.**

ಮಕ್ಕಳು ಚಿತ್ರವನ್ನು ಗಮನಿಸಿ ತಮ್ಮ ಕಲ್ಪನೆಗೆ ತಕ್ಕಂತೆ ಕಥೆಗಳನ್ನು ರಚಿಸುವುದು.




1.---------------------------------------------------------------------------
----------------------------------------------------------------------------
----------------------------------------------------------------------------
----------------------------------------------------------------------------
--------------------------------------------------------------
-----------------------------------------------------------------------

2.



------------------------------
------------------------------
------------------------------
------------------------------

**ಚಟುವಟಿಕೆ 21: ಶಾಲಾ ಭಾಷಾವನ ಭಾಷಾ ಕೌಶಲ ಅಭಿವೃದ್ಧಿಗೆ ಪೂರಕವಾಗಿದೆಯೇ? ಸಮರ್ಥನೀಯ ಅಂಶಗಳನ್ನು ಪಟ್ಟಿ ಮಾಡಿರಿ.**

## ಅಧ್ಯಾಯ – 3 ಭಾಷಾವನ ಮತ್ತು ಮಾಹಿತಿ ತಂತ್ರಜ್ಞಾನ

### 3.1 ಪೀಠಿಕೆ

ಪ್ರಕೃತಿಯು ರಮ್ಯತೆಯ ತಾಣ. ಅಂಥ ಪ್ರಕೃತಿಯ ರಮ್ಯತೆಯ ಮಾನವ ಕೃತ ಪ್ರತಿರೂಪವೇ ಉದ್ಯಾನವನ. ಈ ಉದ್ಯಾನವನದಲ್ಲಿ ಭಾಷಾ ಕೌಶಲಗಳನ್ನು ರೂಢಿಸಲು, ಸಾಮರ್ಥ್ಯ ವೃದ್ಧಿಸಲು ಹಲವು ನವೀನ ಅವಕಾಶಗಳು ಸೃಜನೆಯಾಗಿವೆ. ಪ್ರಾಯೋಗಿಕ ಕಲಿಕೆಯ ಮೂಲಕ ಉದ್ಯಾನವನದಲ್ಲಿ ಕೌಶಲ್ಯಾಭಿವೃದ್ಧಿಗೆ ಶ್ರಮಿಸುವುದೇ ಭಾಷಾವನ ಪರಿಕಲ್ಪನೆ. ಮಕ್ಕಳು ತಮ್ಮ ಪರಿಸರದಲ್ಲಿ ತಾವು ಕಂಡುಂಡ ಅನುಭವಗಳನ್ನು ಕಲಿಕೆಯ ಮೂಲಕ ರೂಢಿಸುವುದೇ ಶಿಕ್ಷಣ ವ್ಯವಸ್ಥೆಯ ಮುಖ್ಯ ಧ್ಯೇಯ. ಈ ಧ್ಯೇಯದ ಈಡೇರಿಕೆಯ ಹಲವು ಪ್ರಯತ್ನಗಳಲ್ಲಿ ಭಾಷಾವನವೂ ಒಂದು.
ಪ್ರಕೃತಿಯಲ್ಲಿ ವಿಹರಿಸುವ ಮಗು ಸಂತೋಷ ವಿಸ್ಮಯ ಹಾಗೂ ಕೌತುಕವನ್ನು ಅನುಭವಿಸುತ್ತದೆ. ಈ ಅನುಭವವು ಅವರನ್ನು ಜ್ಞಾನದ ಹಂಬಲಿಗರಾಗಿ ಪರಿವರ್ತಿಸುತ್ತದೆ.ಪ್ರಕೃತಿಯ ರಮ್ಯತೆ ಸೌಂದರ್ಯ ಅವರನ್ನು ಮಂತ್ರ ಮುಗ್ಧರನ್ನಾಗಿಸಿ ಅವರ ಮನಸ್ಸನ್ನು ಕದಡುತ್ತದೆ. ಏನು? ಏಕೆ? ಹೇಗೆ? ಎಂಬಂತಹ ಪ್ರಶ್ನೆಗಳು ಮೂಡಿ ಕಲಿಕೆಯಲ್ಲಿ ತೊಡಗುವಂತೆ ಮಾಡುತ್ತವೆ. ಪ್ರಕೃತಿ ಆಧಾರಿತವಾದ ಕಲಿಕೆಯಲ್ಲಿ ಅವರು ತೊಡಗಿಕೊಳ್ಳುತ್ತಾರೆ. ಶಿಕ್ಷಕರಾದವರು ಮಾರ್ಗದರ್ಶನ ಮಾಡುತ್ತಾ ಜ್ಞಾನವನ್ನು ಕಟ್ಟಿಕೊಳ್ಳುವ ಅವಕಾಶವನ್ನು ಸೃಜಿಸುತ್ತಾರೆ. ಮಕ್ಕಳು ಅವಕಾಶಗಳ ಸದುಪಯೋಗ ಪಡಿಸಿಕೊಂಡು ತಮ್ಮ ಸಾಮರ್ಥ್ಯವನ್ನು ಗಟ್ಟಿಗೊಳಿಸಿಕೊಳ್ಳುತ್ತಾರೆ.

ಭಾಷಾವನದಲ್ಲಿಯೂ ಈ ಪ್ರಕ್ರಿಯೆಯು ಯೋಜಿತ ರೀತಿಯಲ್ಲಿ ಜರುಗುತ್ತದೆ. ಭಾಷಾ ವನದಲ್ಲಿ ಸಂಯೋಜಿಸಿದ ಪ್ರತಿ ಚಟುವಟಿಕೆಯು ಮಕ್ಕಳ ಭಾಷಾ ಕೌಶಲ್ಯ ಅಭಿವೃದ್ಧಿಯ ಉದ್ದೇಶದ ಈಡೇರಿಕೆಯನ್ನು ಸಾಧ್ಯವಾಗಿಸುತ್ತದೆ.

ಆಧುನಿಕ ಜಗತ್ತಂತೂ ತಂತ್ರಜ್ಞಾನ ಆಧಾರಿತವಾಗಿಯೇ ಮುನ್ನಡೆಯುತ್ತಿರುವುದು ನಮಗೆಲ್ಲ ತಿಳಿದಿರುವ ಸಂಗತಿ. ಮಕ್ಕಳ ಭಾಷಾ ಕೌಶಲ್ಯ ಅಭಿವೃದ್ಧಿಯ ಉಪಕ್ರಮವಾದ ಭಾಷಾವನದಲ್ಲಿ ತಂತ್ರಜ್ಞಾನ ಬಳಕೆಯ ಸಾಧ್ಯತೆಗಳ ಪ್ರಯತ್ನದ ಪ್ರತಿರೂಪವೇ ಈ ಭಾಷಾವನ ಹಾಗೂ ಮಾಹಿತಿ ತಂತ್ರಜ್ಞಾನ.

### 3.2 ಮಾಹಿತಿ ತಂತ್ರಜ್ಞಾನ ಅರ್ಥ



ಮಾಹಿತಿ ಎನ್ನುವದರ ಬಗ್ಗೆ ಮನುಷ್ಯನಿಗೆ ಬಹು ಪೂರ್ವದಿಂದಲೇ ಅರಿವಿದ್ದರೂ ಅದು ತಂತ್ರಜ್ಞಾನದ ಜೊತೆಗೆ ಬೆರೆತದ್ದು ಇತ್ತೀಚೆಗೆ. ಅದಕ್ಕೆ ಕಾರಣ ತಂತ್ರಜ್ಞಾನದ ತ್ವರಿತ ಬೆಳವಣಿಗೆ. ಮಾಹಿತಿಯನ್ನು ವೇಗವಾಗಿ ರವಾನಿಸುವ ತಂತ್ರಜ್ಞಾನವು ಅದನ್ನು ಶೇಖರಿಸುವ ಮತ್ತು ರಕ್ಷಿಸುವ

ಜವಾಬ್ದಾರಿಯನ್ನೂ ಹೊರುತ್ತದೆ. ಯಾವುದೇ ಒಂದು ಕ್ಷೇತ್ರವನ್ನು ತೆಗೆದುಕೊಂಡರೂ ಅದರಲ್ಲಿ ಮಾಹಿತಿ ತಂತ್ರಜ್ಞಾನ ಎಂಬ ತುಣುಕು ಇದ್ದೇ ಇರುತ್ತದೆ. ಇದರಿಂದ ದೂರ ಎನ್ನುವ ಪದ ತನ್ನ ಅರ್ಥವನ್ನು ಕಳೆದುಕೊಳ್ಳುತ್ತದೆ. ಇದೆಲ್ಲಾ ಸಾಧ್ಯವಾಗುತ್ತಿರುವದು ಅಂತರಜಾಲ, ದೂರಸಂಪರ್ಕ ಮುಂತಾದವುಗಳ ಬಳಕೆಯಿಂದಾಗಿ. ಇದರಿಂದ ನಾವು ದೇಶದ ಯಾವುದೇ ಮೂಲೆಗಳಿಗೆ ಮಾಹಿತಿಯನ್ನು ಸಂಸ್ಕರಿಸಬಹುದು. ಅದಲ್ಲದೆ ಇತರರೊಂದಿಗೆ ಸಂಪರ್ಕವನ್ನು ಕೂಡ ಮಾಡಬಹುದು.

ಭಾರತದ ಬೆಳವಣಿಗೆಗಳಲ್ಲಿ ಮುಖ್ಯವಾದ ಬೆಳವಣಿಗೆ ಎಂದರೆ ತಂತ್ರಜ್ಞಾನದ ಬೆಳವಣಿಗೆ. ತಂತ್ರಜ್ಞಾನ ಎಂದರೆ ಉಪಕರಣಗಳ ಜ್ಞಾನದ,ತಂತ್ರಗಳ, ಯಂತ್ರಗಳ ಸಹಾಯದಿಂದ ಹೊಸ ಸಮಸ್ಯೆಗಳ ಪರಿಹಾರ ಮತ್ತು ಮೊದಲೆ ಅಸ್ತಿತ್ವದಲ್ಲಿರುವ ಪರಿಹಾರಗಳನ್ನು ಸುಧಾರಿಸಿ ಒಂದು ಗುರಿ ಸಾಧಿಸುವುದು. ತಂತ್ರಜ್ಞಾನವನ್ನು ಇಂದು ಅನೇಕ ಕ್ಷೇತ್ರಗಳಲ್ಲಿ ಕಾಣಬಹುದು. ಉದಾಹರಣೆಗೆ ಇಂದು ಶಾಲಾ ಕಾಲೇಜುಗಳಲ್ಲಿ ಪಾಠ ಮಾಡುವ ರೀತಿ ಬದಲಾಗಿದೆ. ತಂತ್ರಜ್ಞಾನದ ಉಪಯೋಗಗಳನನ್ನು ವಿವರವಾಗಿ ನೋಡೋಣ.

**ಚಟುವಟಿಕೆ 22: ಶೈಕ್ಷಣಿಕ ಮಾರ್ಗದರ್ಶಕರಾಗಿ ಭಾಷಾ ಕೌಶಲಗಳ ಬೆಳವಣಿಗೆಗೆ ಉಪಯುಕ್ತವಾಗಬಲ್ಲ ಮಾಹಿತಿ ತಂತ್ರಜ್ಞಾನದ ಉಪಕರಣಗಳನ್ನು ಹಾಗೂ ಉಪಯುಕ್ತತೆಯನ್ನು ಪಟ್ಟಿ ಮಾಡಿರಿ.**

## 3.3 ಭಾಷಾ ಕೌಶಲ್ಯಾಭಿವೃದ್ದಿ ಮತ್ತು ಮಾಹಿತಿ ತಂತ್ರಜ್ಞಾನ

ವನದೊಂದಿಗಿನ ಕಲಿಕೆ ಸಮೃದ್ಧವಾಗಿ ವಿದ್ಯಾರ್ಥಿಗಳ ಜ್ಞಾನ ಅಭಿವೃದ್ಧಿಗೆ ಆಸಕ್ತಿಗೆ ಪೂರಕವಾಗಿ ಆಟದ ಮೂಲಕ ಪಾಠ ಚಟುವಟಿಕೆಯ ಮೂಲಕ ಜ್ಞಾನವೃದ್ಧಿಸಿಕೊಳ್ಳುವುದು. ಹೊರಾಂಗಣದಲ್ಲಿ ವಿದ್ಯಾರ್ಥಿಗಳನ್ನು ತೊಡಗಿಸಿಕೊಳ್ಳುವುದರ ಮೂಲಕ ನಿರಂತರ ಶಿಕ್ಷಣದ ಒಂದು ಬದಲಾವಣೆಯನ್ನು ಈ ಒಂದು ಭಾಷಾವನ ಕಲಿಕೆಯಿಂದ ನಾವು ಕೈಕೊಳ್ಳಬಹುದು. ವಿದ್ಯಾರ್ಥಿಗಳಿಗೆ ಉತ್ತಮವಾದ ಕಲೆಗಳನ್ನು ಅಳವಡಿಸಲು ಅನುಕೂಲ ಮಾಡಿಕೊಡಬಹುದು. ಹಿಂದಿನ ಸಾಂಪ್ರದಾಯಿಕ ರೀತಿಯಾದ ಶಿಕ್ಷಕ ಕೇಂದ್ರಿತ ಬೋಧನಾ ಪದ್ದತಿ ಇಂದಿನ ಹೊಸ ಆಧುನಿಕತೆಗೆ ಸಮಂಜಸ ಎನಿಸಲಾರದು. ವೈಯಕ್ತಿಕ ಆಸಕ್ತಿಗೆ ಅನುಗುಣವಾಗಿ ವಿದ್ಯಾರ್ಥಿಗಳನ್ನು ನಿರಂತರವಾಗಿ ತೊಡಗಿಸಿಕೊಳ್ಳುವಿಕೆಗೆ ಅವಕಾಶವನ್ನು ಮಾಡಿಕೊಡುವುದರ ಮೂಲಕ ಮಕ್ಕಳ ಆಲೋಚನಾ ಮಟ್ಟವನ್ನು ಹೆಚ್ಚಿಸುವುದರೊಂದಿಗೆ ಚಟುವಟಿಕೆಯ ಮೂಲಕ ಕಲಿಕೆಯನ್ನ ಮಾಡಲು ಪ್ರಯತ್ನ ಮಾಡಬೇಕಾಗಿದೆ. ಕೆಲವೊಂದು ಸಮಯದಲ್ಲಿ ನೈಸರ್ಗಿಕ ಭಾಷಾವನದ ಕೊರತೆಯಿಂದ ಸಹ ಶಾಲೆಗಳ ತರಗತಿಗಳಲ್ಲಿ ಕೃತಕವಾಗಿ ಭಾಷಾವನ ನಿರ್ಮಾಣ ಮಾಡಿ ಶಾಲಾ ಕೊಠಡಿಗಳ ಗೋಡೆಗಳ ಮೇಲೆ ಮರಗಳ ಚಿತ್ರ ಬಳ್ಳಿಗಳ ಚಿತ್ರ ಬಿಡಿಸಿ ಬೇರೆಬೇರೆ ರೀತಿಯ ಗಿಡದ ಪರಿಚಯವನ್ನು ಶಾಲಾ ಕೊಠಡಿಯಲ್ಲಿಯೇ ನಿರ್ಮಾಣ ಮಾಡಬಹುದು. ಈ ರೀತಿ ಮಾಡಬೇಕಾದರೆ ವಿದ್ಯಾರ್ಥಿಗಳ ಸಹಯೋಗ ಸಹಕಾರ ತುಂಬಾ ಮುಖ್ಯ ಆಗಿರುತ್ತದೆ. ಅಲ್ಲಿ ನಾವು ಕೃತಕವಾಗಿ ಮರಗಿಡಗಳ ಚಿತ್ರಗಳನ್ನು ಬಿಡಿಸುವುದರ ಮೂಲಕ ಹಾಗೂ ಆ ಚಿತ್ರಗಳಿಗೆ ಅಕ್ಷರಗಳ ಜೋಡಣೆ ಮಾಡುವುದರ ಮೂಲಕ, ಚಿತ್ರಪುಟಗಳನ್ನು ಜೋಡಣೆ ಮಾಡುವುದರ ಮೂಲಕ ಕಾಗುಣಿತ ವಿಷಯದ

ಪರಿಕಲ್ಪನೆಯನ್ನು ಮೂಡಿಸುವುದರ ಮೂಲಕ ಮಕ್ಕಳಲ್ಲಿ ಆಸಕ್ತಿಯನ್ನು ಮೂಡಿಸಿ ಪೂರಕವಾದ ಭಾಷಾವನದ ಪರೋಕ್ಷ ಅನುಭವವನ್ನು ನಾವು ಶಾಲಾ ಕೊಠಡಿಯಲ್ಲಿ ಮಾಡುವುದರ ಮೂಲಕ ಈ ರೀತಿ ತೊಡಗಿಸಿಕೊಳ್ಳಲು ಅವಕಾಶ ಮಾಡಿಕೊಡಬೇಕಾಗುತ್ತದೆ ಅಂದರೆ ಎಲ್ಲಾ ಶಾಲೆಗಳಲ್ಲೂ ನೈಸರ್ಗಿಕ ಭಾಷಾವನ ಎಂಬುದು ಶಾಲೆಗಳಲ್ಲಿ ಅನುಕೂಲ ಇರುತ್ತದೆ ಎಂದು ಹೇಳಲು ಬರುವುದಿಲ್ಲ. ಯಾವ ಶಾಲೆಗಳಲ್ಲಿ ಭಾಷಾ ನಿರ್ಮಾಣ ಮಾಡುವಂತಹ ಹಾಗೂ ನೀರಿನ ವ್ಯವಸ್ಥೆ ಎಲ್ಲಾ ತರದ ಅನುಕೂಲಕರ ಪರಿಕರಗಳ ವ್ಯವಸ್ಥೆ ಇರುವಂತಹ ಶಾಲೆಗಳಲ್ಲಿ ವಾತಾವರಣದ ನಿರ್ಮಾಣ ಅತಿ ಸುಲಭ ಹಾಗೂ ಸುಲಭವಾಗಿ ಅನುಷ್ಠಾನ ಮಾಡಬಹುದು. ನೈಸರ್ಗಿಕ ಭಾಷಾವನದ ನಿರ್ಮಾಣಕ್ಕೆ ಅವಕಾಶವಿಲ್ಲದ ಶಾಲೆಗಳ ತರಗತಿಗಳಲ್ಲಿ ಕೃತಕವಾಗಿ ಭಾಷಾವನ ನಿರ್ಮಾಣ ಮಾಡಿ ಕಲಿಕೆಯನ್ನುಂಟುಮಾಡುವುದು ಶಿಕ್ಷಕರ ಕರ್ತವ್ಯ.

ಕಲಿಕೆ ಪರಿಣಾಮಕಾರಿಯಾಗಿ ಆಗಬೇಕಾದರೆ ಮಾಹಿತಿ ತಂತ್ರಜ್ಞಾನವನ್ನು ಉಪಯೋಗಮಾಡುವ ಅವಶ್ಯಕತೆ ಅನಿವಾರ್ಯ ಉಂಟಾಗಿದೆ. ಆದ್ದರಿಂದ ಮುಂದುವರಿದು ನಾವು ಕೃತಕ ಭಾಷಾವನ ನಿರ್ಮಾಣಕ್ಕಾಗಿ ತಂತ್ರಜ್ಞಾನದ ಬಳಕೆಯನ್ನು ಮಾಡಬೇಕಾದ ಅವಶ್ಯಕತೆ ಶಿಕ್ಷಕರಲ್ಲಿ ಮುಖ್ಯವಾಗಿರುತ್ತದೆ. ಹಾಗೆಯೇ ಕುಶಲತೆಯಿಂದ ಭಾಷಾವನದ ಕೃತಕತೆಯ ನಿರ್ಮಾಣವನ್ನು ಮಾಡಿ ಅವರಿಗೆ ಇರುವಂತಹ ನೈಸರ್ಗಿಕವಾದ ವಾತಾವರಣದ ಪರಿಚಯವನ್ನು ಮಾಡಿಕೊಡುವುದರ ಮೂಲಕ ಅದರೊಂದಿಗೆ ಅಕ್ಷರ, ಶಬ್ದ, ವಾಕ್ಯಗಳ ಪರಿಕಲ್ಪನೆಯನ್ನು ಮೂಡಿಸುವಂತಹ ಕೆಲಸವನ್ನು ಶಿಕ್ಷಕರಾದ ಅದರಲ್ಲಿಯೂ ಭಾಷಾ ಶಿಕ್ಷಕರಾದ ನಮ್ಮ ಮೇಲೆ ತುಂಬಾ ಜವಾಬ್ದಾರಿ ಇರುವುದನ್ನು ನಾವು ಗಮನಿಸಬಹುದು. ತಂತ್ರಜ್ಞಾನದ ಮೂಲಕ ಮಾಹಿತಿ ತಂತ್ರಜ್ಞಾನವನ್ನು ಬಳಸಿಕೊಂಡು ಯಾವ ರೀತಿಯಾಗಿ ಭಾಷಾವನವನ್ನು ನಿರ್ಮಾಣಮಾಡಬೇಕು ಎಂಬುದನ್ನು ನಾವು ಚರ್ಚೆ ಮಾಡುವುದರ ಮೂಲಕ, ಯೋಚನೆ ಮೂಲಕ ವಿಭಿನ್ನವಾದ ಉತ್ತಮವಾದ ಭಾಷಾವನವನ್ನು ಕೃತಕವಾಗಿ ನಿರ್ಮಾಣ ಮಾಡುವುದು ನಾವು ಪ್ರಯತ್ನಿಸಿದ್ದೆ ಆದರೆ ಆ ಭಾಷಾವನದ ನಿರ್ವಹಣೆಯನ್ನು ಶಿಕ್ಷಕರು ಶಾಲೆಯಲ್ಲಿ ನಿರ್ವಹಿಸಬಹುದು ಎಂಬ ಒಂದು ಆಶಾಭಾವನೆಯನ್ನು ಈ ಮೂಲಕ ನಾವು ವ್ಯಕ್ತಪಡಿಸಬಹುದು.

ವಿದ್ಯಾರ್ಥಿಗಳಿಗೆ ಭಾಷೆ ಅತ್ಯಮೂಲ್ಯ ಮಗು ತನ್ನ ಬೌದ್ಧಿಕ ಬೆಳವಣಿಗೆಗೆ ಅಂದರೆ ಅಕ್ಷರ ಕಲಿಕೆ ಶಬ್ದಗಳ ಗ್ರಹಣಶಕ್ತಿ ವಾಕ್ಯ ಬಳಸುವ ಕಲೆ ಇವೆಲ್ಲವೂ ಕೂಡ ಮುಖ್ಯ ಕಲಿಕೆಯನ್ನು ದೃಡಪಡಿಸಿಕೊಳ್ಳಲು ಕಲಿಕೆಯನ್ನು ಅಭಿವೃದ್ಧಿಗೊಳಿಸಿಕೊಳ್ಳಲು ಸಹಾಯಕಆಗುತ್ತದೆ. ಸಾಂಪ್ರದಾಯಿಕ ಪದ್ಧತಿ ಹಿಂದಿನ ಬೋಧನೆಯ ಅನುಷ್ಠಾನದ ರೀತಿ ಈ ಕಾಲದ ವಿದ್ಯಾರ್ಥಿಗಳಲ್ಲಿ ಆಸಕ್ತಿಯನ್ನು ಕುಂಠಿತಗೊಳಿಸುತ್ತಿದೆ. ನಾವಿನ್ಯಪೂರ್ಣ ಹಾಗೂ ಕಲಿಕಾ ಚಟುವಟಿಕೆ ಮಗುವಿನ ಸಮಗ್ರ ವಿಕಾಸಕ್ಕೆ ಅನುವು ಮಾಡಿಕೊಡುತ್ತದೆ. ಮಗುವಿನ ಸಮಗ್ರ ಭಾಷಾಕಲಿಕೆಯು ಅವನ ಇನ್ನಿತರ ವಿಷಯಗಳ ಅಧ್ಯಯನಕ್ಕೆ ಪೂರಕವಾದ ವಾತಾವರಣವನ್ನು ನಿರ್ಮಿಸಿಕೊಡುತ್ತದೆ. ಭಾಷಾ ಕಲಿಕೆಗೆ ಮಗುವಿಗೆ ಆಸಕ್ತಿಮೂಡುವಂತೆ ನಾವು ಇತರ

ವಿಭಿನ್ನವಾದ ವಿನೂತನವಾದ ನವೀನಶೈಲಿಯ ಬೋಧನಾಪದ್ಧತಿಯನ್ನು ಅಳವಡಿಸಿಕೊಳ್ಳುವುದು ತುಂಬಾ ಅಮೂಲ್ಯ ಮತ್ತು ಮಹತ್ವಪೂರ್ಣವಾಗಿದೆ. ಈ ಒಂದು ನಿಟ್ಟಿನಲ್ಲಿ ಭಾಷಾವನ್ನು ನಾವು ಶಾಲೆಯಲ್ಲಿ ಹೇಗೆ ನಿರ್ವಹಿಸಬೇಕು ಎಂಬುದನ್ನು ಅದರ ಜೊತೆಗೆ ನಿರ್ವಹಣಾ ರೀತಿಯನ್ನು ನಾವು ಸರಿಯಾದ ನಿಟ್ಟಿನಲ್ಲಿ ಅಳವಡಿಸಿಕೊಂಡಿದ್ದೆ ಆದರೆ ಅದರ ಮೂಲಕ ಭಾಷೆಯ ಬೆಳವಣಿಗೆ ಕಲಿಕಾ ಅಭಿವೃದ್ಧಿಗೆ ಪೂರಕವಾದ ವಾತಾವರಣವನ್ನ ಕಲ್ಪಿಸಿಕೊಟ್ಟಂತೆ ಆಗುತ್ತದೆ. ಒಂದು ಶಾಲೆಯಲ್ಲಿ ತೋಟದ ಮೂಲಕ ಚಿಕ್ಕಚಿಕ್ಕಗಿಡಗಳನ್ನು ಹಾಗೂ ಚಿಕ್ಕಚಿಕ್ಕ ಸಸಿಗಳನ್ನು ಹೂವಿನಗಿಡಗಳನ್ನ ಬೇರೆಬೇರೆ ವಿವಿಧ ರೀತಿಯ ಫಲಕೊಡುವ ಹಣ್ಣಿನ ಗಿಡಗಳನ್ನು ನೆಡುವುದರ ಮೂಲಕ ಹಾಗೂ ಆ ಶಾಲೆಯ ಆವರಣದಲ್ಲಿ ಹಚ್ಚಹಸಿರಿನ ವಾತಾವರಣವನ್ನ ನಿರ್ಮಾಣ ಮಾಡುವುದರೊಂದಿಗೆ ಅಲ್ಲಿ ಒಂದು ಚಿಕ್ಕ ಉದ್ಯಾನವನ ತಮ್ಮತಮ್ಮ ಶಾಲೆಯ ಆವರಣದ ಕ್ಷೇತ್ರದ ಅನುಕೂಲಕ್ಕೆ ತಕ್ಕಂತೆ ಗಾತ್ರದಲ್ಲಿ ಬದಲಾವಣೆಯನ್ನು ಮಾಡಿಕೊಂಡು, ಚಿಕ್ಕದಾಗಿರುವಂತಹ ಕ್ಷೇತ್ರದಲ್ಲಿ ಚಿಕ್ಕದಾಗಿರುವಂತಹ ಭಾಷಾವನ, ದೊಡ್ಡಕ್ಷೇತ್ರದಲ್ಲಿ ದೊಡ್ಡದಾಗಿರುವಂತಹ ಭಾಷಾವನ ನಿರ್ಮಾಣಕ್ಕೆ ಕೈಕೊಳ್ಳುವಂತಹ ಕ್ರಮ ಏನು ಎಂಬುದನ್ನು ನಾವು ಇಲ್ಲಿ ತಿಳಿದುಕೊಳ್ಳಬೇಕು.

ಭಾಷಾವನದಲ್ಲಿ ನಾವು ಯಾವ ರೀತಿಯಾಗಿ ತಂತ್ರಜ್ಞಾನವನ್ನು ಬಳಸಬೇಕು. ಅದರ ನಿರ್ವಹಣೆಯನ್ನ ಹೇಗೆ ಮಾಡಬೇಕು ಎಂಬುದರ ಬಗ್ಗೆ ನಾವು ಈ ಅಧ್ಯಾಯದಲ್ಲಿ ತಿಳಿದುಕೊಳ್ಳೋಣ. ಅಂದರೆ ಒಂದು ಭಾಷಾವನದಲ್ಲಿ ನಾವು ಮೊಬೈಲ್ಗಳ ಮೂಲಕ ವಿವಿಧ ಚಿತ್ರಗಳನ್ನು, ಅಕ್ಷರದ ಚಿತ್ರಗಳನ್ನಾಗಲಿ, ಇನ್ನಿತರ ಶಬ್ದಗಳ ಚಿತ್ರಗಳನ್ನಾಗಲಿ ಅಥವಾ ವಾಕ್ಯವೃಂದದ ಪಠ್ಯಗಳನ್ನಾಗಲಿ ಮೊಬೈಲ್ಸಹಾಯದ ಮೂಲಕ ಕಂಪ್ಯೂಟರ್ಗಳ ಸಹಾಯದ ಮೂಲಕ ಅವುಗಳನ್ನು ತಯಾರಿಸಿ ಮತ್ತು ಪ್ರಾಜೆಕ್ಟರ್ಸಹಾಯದ ಮೂಲಕ ಕೃತಕ ಭಾಷಾವನದ ವೀಡಿಯೋ ಪ್ರದರ್ಶನವನ್ನ ಮಾಡಿ ಹಾಗೂ ಸ್ಪೀಕರ್ಗಳ ಸಹಾಯದ ಮೂಲಕ ವಿವಿಧ ಧ್ವನಿಸುರುಳಿಗಳನ್ನು ಉಪಯೋಗಿಸಿ ಆಲಿಸುವ ಸಾಮರ್ಥ್ಯಕ್ಕೆ ತಕ್ಕಂತಹ ಚಟುವಟಿಕೆಗಳನ್ನ ಹಮ್ಮಿಕೊಳ್ಳಲು ಇವೆಲ್ಲವನ್ನು ಕೂಡ ಬಳಸುವುದರ ಮೂಲಕ ನಾವು ಭಾಷಾ ಕಲಿಕೆಗೆ ಅನುಕೂಲವಾಗುವಂತಹ ಒಂದು ವಾತಾವರಣವನ್ನು ಸೃಷ್ಟಿಸಿ ಈ ಮೂಲಕ ವಿದ್ಯಾರ್ಥಿ ಪದಗಳ ಸಂಪತ್ತು ಹಾಗೂ ವಾಕ್ಯದ ರಚನಾ ಕೌಶಲ್ಯವನ್ನು ನಾವು ಬೆಳೆಸಬಹುದು. ವಿದ್ಯಾರ್ಥಿಗಳ ಕಲಿಕೆಗೆ ಪೂರಕವಾದ ವಾತಾವರಣವನ್ನು ಹಮ್ಮಿಕೊಂಡು ಅದರ ಮೂಲಕ ನಮ್ಮ ಭಾಷೆಯ ಬೆಳವಣಿಗೆ ಮಾಡುವಲ್ಲಿ ಸಹಾಯಕಾರಿ ಆಗಬಹುದು ಹೀಗೆ ನಾವು ಭಾಷಾವನದ ನಿರ್ವಹಣೆ ಮಾಡಬೇಕಾಗುತ್ತದೆ.

### ಅ) ಭಾಷಾ ವನದಲ್ಲಿ ಮೊಬೈಲ್ ಬಳಕೆ

ಭಾಷಾವನದಲ್ಲಿ ಮೊಬೈಲ್ನಿಂದ ಅಕ್ಷರಗಳನ್ನು ಡೌನ್ಲೋಡ್ಮಾಡಿಕೊಂಡು ಅಕ್ಷರಗಳ ಚಿತ್ರಗಳನ್ನು ಮಾಡಿಕೊಂಡು ಒಂದು ಚಿಕ್ಕಗಿಡದ ಕೊಂಬೆಗಳಿಗೆ ತೂಗುಹಾಕುವುದಕ್ಕೆ ಒಂದು ಚಿಕ್ಕ ಕಾರ್ಡಬೋರ್ಡ

ತುಂಡನ್ನು ಕತ್ತರಿಸಿ ಇಟ್ಟುಕೊಳ್ಳುವುದು. ಈ ರೀತಿ ಕತ್ತರಿಸಿಕೊಂಡು ಒಂದು ಟ್ಯಾಗ್ರೀತಿ ಮಾಡಿ ಅವುಗಳಿಗೆ ಒಂದೊಂದು ಅಕ್ಷಗಳನ್ನು ತೂಗು ಹಾಕುವುದು ಈ ರೀತಿಯಾಗಿ ವರ್ಣಮಾಲೆ ಅಕ್ಷರಗಳನ್ನು ಮಾಡಿ ಹಾಕಿದಾಗ ವಿದ್ಯಾರ್ಥಿಗಳು ಭಾಷಾವನದಲ್ಲಿ ಬಂದು ಅಕ್ಷರಗಳನ್ನು ಗುರುತಿಸುವಂತಹ ಒಂದು ಕೌಶಲ್ಯವನ್ನು ಬೆಳೆಸಿಕೊಳ್ಳುತ್ತಾರೆ. ಇದರ ಮೂಲಕ ಅಕ್ಷರಗಳನ್ನು ಓದುವ ಕೌಶಲ್ಯ ಬೆಳೆಯುವುದು ಹಾಗೂ ಪ್ರತಿಮಗು ಒಂದೊಂದು ಅಕ್ಷರಗಳನ್ನು ಓದುವುದರ ಮೂಲಕ ಪೂರ್ವಜ್ಞಾನದ ಮೂಲಕ ಅದಕ್ಕೆ ಪದಗಳನ್ನು ಜೊಡಿಸುವುದು ಮತ್ತು ಓದುವುದು. ಓದಿದ ಪದಗಳ ಬಗ್ಗೆ ಮಾತನಾಡುವಂತಹ ಕೌಶಲ್ಯ ಬೆಳೆಯುವುದು. ಹೀಗೆ ಎರಡು ಕೌಶಲ್ಯಗಳು ಏಕಕಾಲಕ್ಕೆ ಬೆಳವಣಿಗೆ ಆಗುವುದನ್ನು ನಾವು ಕಾಣಬಹುದು.

**ಚಟುವಟಿಕೆ 23 : ಭಾಷಾ ಕೌಶಲ ಬೆಳವಣಿಗೆಯ ಸಹಕಾರಿಯಾಗುವ ಆ್ಯಪ್‌ಗಳನ್ನು ಪಟ್ಟಿ ಮಾಡಿರಿ.**

## ಆ) ಭಾಷಾವನದಲ್ಲಿ ಕಂಪ್ಯೂಟರ್ ಅಥವಾ ಲ್ಯಾಪ್ ಟಾಪ್ ಬಳಕೆ

ಕಂಪ್ಯೂಟರ್ ಮೂಲಕ ಭಾಷಾವನದಲ್ಲಿ ಬಳಕೆ ಹೇಗೆ ಮಾಡಬೇಕು ಎಂಬುದನ್ನು ನೋಡುವುದಾದರೆ, ಕಂಪ್ಯೂಟರ್‌ಗಳಿಂದ ಆಥವಾ ಲ್ಯಾಪ್ ಟಾಪ್‌ಗಳ ಮೂಲಕ ಕವಿಗಳ ಭಾವಚಿತ್ರಗಳನ್ನು ಡೌನ್ಲೋಡ್ಮಾಡಿಕೊಳ್ಳುವುದು. ಆ ಚಿತ್ರಗಳನ್ನು ಒಂದೊಂದು ಗಿಡಕ್ಕೆ ಒಂದೊಂದು ಕವಿಯ ಚಿತ್ರವನ್ನು ನೇತುಹಾಕುವುದು. ಅಥವಾ ಕೈಯಲ್ಲಿ ಹಿಡಿದು ಒಬ್ಬ ವಿದ್ಯಾರ್ಥಿ ಇನ್ನುಳಿದ ವಿದ್ಯಾರ್ಥಿಗಳಿಗೆ ಗಮನದಲ್ಲಿ ಇರಿಸಿಕೊಳ್ಳುವಂತೆ ಈ ಗಿಡವು ಒಬ್ಬ ಕವಿಯನ್ನು ಸೂಚಿಸುತ್ತದೆ ಎಂದು ಕವಿ ಪರಿಚಯ ಹೇಳುತ್ತಾರೆ. ಹಾಗೂ ಭಾವಚಿತ್ರದ ಹಿಂಭಾಗದಲ್ಲಿ ಆ ಕವಿಗಳ ಬಗ್ಗೆ ಅವರು ರಚಿಸಿರುವ ಕೃತಿಗಳ ಬಗ್ಗೆ, ಅವರು ಪಡೆದ ಪ್ರಶಸ್ತಿಗಳ ಬಗ್ಗೆ, ಅವರ ಸಾಧನೆಯ ಬಗ್ಗೆ ಎಲ್ಲಾ ವಿಚಾರಗಳನ್ನು ಒಂದು ಪುಟದಲ್ಲಿ ವಿವರ ಸಹಿತ ಮಾಹಿತಿಯನ್ನು ಮುದ್ರಿಸಿ ಗಿಡಕ್ಕೆ ತೂಗುಹಾಕುವುದು ಹಾಗೂ ಅಥವಾ ಕೈಯಲ್ಲಿ ಹಿಡಿದು ಒಬ್ಬ ವಿದ್ಯಾರ್ಥಿ ಇನ್ನುಳಿದ ವಿದ್ಯಾರ್ಥಿಗಳಿಗೆ ಆ ವಿವರವನ್ನು ಗಟ್ಟಿಯಾಗಿ ಓದಲು ತಿಳಿಸುವುದು. ಈ ಮೂಲಕ ಮಾತನಾಡುವ ಹಾಗೂ ಓದುವ ಕೌಶಲ್ಯವನ್ನು ಬೆಳೆಸಲು ಅನುಕೂಲ ಆಗುತ್ತದೆ. ಹಾಗೂ ಓದಿದ ವಿಚಾರವನ್ನು ಆಲಿಸುವ ಕೌಶಲ್ಯ ಇನ್ನುಳಿದ ವಿದ್ಯಾರ್ಥಿಗಳಲ್ಲಿ ಬೆಳೆಸಿದಂತೆ ಆಗುತ್ತದೆ. ಈ ಮೂಲಕ ಬೇರೆಬೇರೆ ಕವಿಗಳ ಚಿತ್ರಗಳನ್ನು ಹಾಗೂ ಕಲೆಹಾಕಿ ತನ್ಮೂಲಕ ಕಂಪ್ಯೂಟರ್ ಬಳಸಿ ಭಾಷಾವನದಲ್ಲಿ ಓದುವ ಹಾಗೂ ಆಲಿಸುವ ಭಾಷಾ ಕೌಶಲ ಬೆಳೆಸಬಹುದಾಗಿದೆ.

## *ಇ) ಭಾಷಾ ವನದಲ್ಲಿ ಪ್ರೊಜೆಕ್ಟರ್ನ ಬಳಕೆ*

ಭಾಷಾವನದಲ್ಲಿ ಪ್ರೊಜೆಕ್ಟರ್ನಬಳಕೆ ಹೇಗೆ ಆಗುತ್ತದೆ. ಯಾವ ಶಾಲೆಗಳಲ್ಲಿ ನೈಸರ್ಗಿಕ ಭಾಷಾವನ ನಿರ್ಮಾಣಕ್ಕೆ ಬೇಕಾದ ಸೌಲಭ್ಯವಿಲ್ಲದ ಶಾಲೆಗಳಲ್ಲಿ ಉದ್ಯಾನಗಳನ್ನು ನಿರ್ಮಾಣ ಮಾಡಿರುವುದಿಲ್ಲ ಅಂತಹ ಶಾಲೆಗಳಲ್ಲಿ ಕೃತಕವಾದ ಭಾಷಾವನವನ್ನು ನಿರ್ಮಿಸುವುದು. ಭಾಷಾವನದ ಅನುಭವವನ್ನು ವಿದ್ಯಾರ್ಥಿಗಳಿಗೆ ನೀಡಲು ಪ್ರೊಜೆಕ್ಟರ್ಬಳಕೆಯನ್ನು ಮಾಡಿ ಕೃತಕವಾಗಿ ಭಾಷಾವನ ನಿರ್ಮಿಸಿ ಶಾಲಾ ಆವರಣದಲ್ಲಿ ಯಾವ ರೀತಿಯಾಗಿ ವಿವಿಧ ಚಟುವಟಿಕೆಗಳನ್ನ ಹಮ್ಮಿಕೊಳ್ಳುತ್ತೇವೆ ಆ ಎಲ್ಲಾ ಚಟುವಟಿಕೆಗಳನ್ನು ಶಾಲಾ ಕೊಠಡಿಯಲ್ಲಿ ಪ್ರೊಜೆಕ್ಟರ್ಗಳ ಮೂಲಕ ವಿಡಿಯೋಗಳನ್ನ ಪ್ರದರ್ಶನ ಮಾಡಿ ವಿದ್ಯಾರ್ಥಿಗಳ ವಿವಿಧ ಕೌಶಲ್ಯಗಳ ಬೆಳವಣಿಗೆಗೆ ಮಾಡಿದ್ದೆ ಆದರೆ ಆಗ ಆ ಮಕ್ಕಳಿಗೆ ನೈಸರ್ಗಿಕ ಭಾಷಾವನದ ಪರಿಕಲ್ಪನೆ ಹಾಗೂ ನೈಸರ್ಗಿಕ ಪ್ರಕ್ರಿಯೆಗಳು ನಡೆಯುವಂತಹ ಎಲ್ಲವನ್ನೂ ಕೂಡ ನಾವು ಈಡೇರಿಸಿಕೊಳ್ಳಬಹುದು. ವಿವಿಧ ವೀಡಿಯೋ ಪ್ರೊಜೆಕ್ಟರ್ಗಳ ಮೂಲಕ ಪ್ರದರ್ಶನ ಮಾಡುವುದರೊಂದಿಗೆ ಮಕ್ಕಳನ್ನು ಕಲಿಕೆಯಲ್ಲಿ ತೊಡಗಿಕೊಳ್ಳುವಂತೆ ಮಾಡುವುದು.

## ಈ) ಭಾಷಾವನದಲ್ಲಿ ಸ್ಪೀಕರ್‌ಗಳ ಬಳಕೆ

ಭಾಷಾವನಕ್ಕೆ ಅನುಕೂಲಕರವಾದ ವಾತಾವರಣದ ಶಾಲೆಗಳಲ್ಲಿ ನೈಸರ್ಗಿಕವಾದ ಭಾಷಾವನದಲ್ಲಿ ಪ್ರತಿಯೊಂದು ಗಿಡದ ಹತ್ತಿರ ಸ್ಪೀಕರ್ಗಳನ್ನು ಇಟ್ಟು ಭಾಷಾ ಕಲಿಕೆಗೆ ಅನುಕೂಲವಾಗಿರುವಂತಹ ಧ್ವನಿಸುರುಳಿಗಳನ್ನು ಮೊದಲೇ ತಯಾರಿಸಿಕೊಂಡು ಅವುಗಳನ್ನು ಮೊಬೈಲ್ ಅಥವಾ ಕಂಪ್ಯೂಟರ್ ಮೂಲಕ ಚಾಲನೆ ಮಾಡಿ ಅದನ್ನು ಸ್ಪೀಕರ್ಗಳಲ್ಲಿ ಕೇಳಿಸುವಂತೆ ಮಾಡಿ ಆಸ್ಪೀಕರ್ಗಳನ್ನು ಗಿಡದ ಹತ್ತಿರ ಇಟ್ಟು ಆ ಗಿಡದ ಬಗ್ಗೆ ಮಾಹಿತಿಯನ್ನು ನೀಡಬಹುದು, ಒಂದು ಹೂವಿನ ಗಿಡದ ಬಗ್ಗೆ ಮಾಹಿತಿಯನ್ನು ನೀಡಿ ಆಲಿಸುವಂತೆ ಮಾಡುವುದು. ಆಯಾ ಪ್ರಾಸಪದಗಳು ಸ್ಪೀಕರ್ಗಳ ಮೂಲಕ ಕೇಳಿಸಿಕೊಂಡಿದ್ದೆ ಆದರೆ ಆಲಿಸುವಿಕೆಯ ಕೌಶಲ್ಯ ಬೆಳವಣಿಗೆ ಆಗುತ್ತದೆ ಜೊತೆಗೆ ಹೂವಿನಗಿಡದ ಹೆಸರಿಗೆ ಹೊಂದಿಕೆಯಾಗುವ ಪ್ರಾಸಪದಗಳನ್ನು ವಿದ್ಯಾರ್ಥಿಗಳಿಂದ ಹೇಳಿಸುವ ಚಟುವಟಿಕೆ ಕೈಗೊಳ್ಳಬಹುದು. ಈ ಮೂಲಕ ಅಭಿವ್ಯಕ್ತಿ ಕೌಶಲ್ಯ ಬೆಳವಣಿಗೆಯಾಗುತ್ತದೆ. ಈ ಒಂದು ಚಟುವಟಿಕೆಯನ್ನು ಕೈಗೊಂಡರೆ ವಿದ್ಯಾರ್ಥಿಗಳಿಗೆ ಆಲಿಸುವ ಕೌಶಲ್ಯ ಹಾಗೂ ಅಭಿವ್ಯಕ್ತಿ ಕೌಶಲ್ಯ ತಿಳಿಸಿಕೊಡಬಹುದು. ಆಲಿಸುವ ಕೌಶಲ್ಯದ ಪರಿಣಾಮಕಾರಿ ಬೆಳವಣಿಗೆಗೆ ಉಪಯುಕ್ತಕಾರಿ ಸಾಧನವೆಂದರೆ ಸ್ಪೀಕರ್ಗಳು ಎಂದು ಹೇಳಬಹುದು. ಸ್ಪೀಕರ್‌ಗಳ ಮೂಲಕ ಮಾಹಿತಿ ತಂತ್ರಜ್ಞಾನವ ಅಳವಡಿಸಿಕೊಂಡು ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಸಹಯೋಗದೊಂದಿಗೆ ಮೇಲ್ಕಂಡ ಚಟುವಟಿಕೆಯನ್ನು ಮಾಡಿ ಭಾಷಾ ಕೌಶಲ್ಯ ಬೆಳವಣಿಗೆಗೆ ಬಳಸಿಕೊಳ್ಳಬಹುದು .

ನೈಸರ್ಗಿಕ ಭಾಷಾವನದ ಬಳಕೆ ಮಾಡಲು ಸಾಧ್ಯವಾಗದಿರುವಂತಹ ಶಾಲೆಗಳಲ್ಲಿ ಕೃತಕ ಭಾಷಾವನದ ನಿರ್ಮಾಣ ಮಾಡಿ ಶಾಲಾಕೊಠಡಿಯ ನಾಲ್ಕು ಮೂಲೆಗಳಲ್ಲಿ ಸ್ಪೀಕರ್ಗಳನ್ನು ಅಳವಡಿಸಿ ಮೊಬೈಲ್ಗಳ ಮೂಲಕ ಇಲ್ಲವೇ ಕಂಪ್ಯೂಟರ್ಗಳ ಮೂಲಕ ಅಲ್ಲಿ ಆಯಾ ಪ್ರಾಸಪದಗಳು ಸ್ಪೀಕರ್ಗಳ

ಮೂಲಕ ಕೇಳಿಸಿಕೊಂಡಿದ್ದೆ ಆದರೆ ಆಲಿಸುವಿಕೆಯ ಕೌಶಲ್ಯ ಬೆಳವಣಿಗೆ ಆಗುತ್ತದೆ. ಆಯಾ ಗಿಡದ ಚಿತ್ರಗಳ ಹೆಸರಿನೊಂದಿಗೆ ಹೋಲುವ ಪ್ರಾಸಪದಗಳು ಹಾಗೂ ಅಕ್ಷರಗಳೊಂದಿಗೆ ಹೋಗುವಂತಹ ಪದಗಳನ್ನು ರಚನೆಮಾಡಲು ವಿದ್ಯಾರ್ಥಿಗಳಿಗೆ ಪೂರ್ವನಿಯೋಜಿತ ಧ್ವನಿಸುರುಳಿಯನ್ನು ಸ್ಪೀಕರ್ಗಳ ಮೂಲಕ ಕೇಳಿಸುವುದರೊಂದಿಗೆ ವಿದ್ಯಾರ್ಥಿಗಳಿಗೆ ಆಲಿಸುವಿಕೆ ಕೌಶಲ್ಯವನ್ನು ಪರಿಣಾಮಕಾರಿಯಾಗಿ ಬೆಳೆಸಬಹುದು.

## 3.4 ತಂತ್ರಜ್ಞಾನ ಆಧಾರಿತ ಭಾಷಾವನ ನಿರ್ವಹಣೆ ಚಟುವಟಿಕೆಗಳು

***ಚಟುವಟಿಕೆ – ವನದಲ್ಲೊಂದು ದನಿ***

ನಿಸರ್ಗದಲ್ಲಿರುವ ಪ್ರಾಣಿಪಕ್ಷಿಗಳ ಧ್ವನಿಗಳನ್ನು ವಿದ್ಯಾರ್ಥಿಗಳು ಕೇಳಿರುತ್ತಾರೆ. ಆ ಪೂರ್ವಜ್ಞಾನದ ಹಿನ್ನಲೆಯಲ್ಲಿ ನಾವು ಭಾಷಾವನದಲ್ಲಿ ವನಗಳಲ್ಲಿರುವ ಪಕ್ಷಿಗಳ ಧ್ವನಿಯನ್ನು ಕೇಳಿಸುವುದು. ಉದಾ– ಕೋಗಿಲೆ, ನವಿಲು, ಕಾಗೆ, ಗಿಳಿ ಇತ್ಯಾದಿ ಪಕ್ಷಿಗಳ ಧ್ವನಿಗಳನ್ನು ನಾವು ಸ್ಪೀಕರ್ಗಳ ಮೂಲಕ ಕೇಳಿಸಿದ್ದೆ ಆದರೆ ಇಲ್ಲಿ ಕನ್ನಡ ವರ್ಣಮಾಲೆಯಲ್ಲಿರುವ ಕನ್ನಡದಲ್ಲಿ ಇರುವಂತಹ ಅನುಕರಣ ಅವ್ಯಯ ಎಂಬ ಒಂದು ಮುಖ್ಯ ವ್ಯಾಕರಣದ ಅಂಶವನ್ನು ವಿದ್ಯಾರ್ಥಿಗಳಿಗೆ ತಿಳಿಯಪಡಿಸಿದಂತೆ ಆಗುತ್ತದೆ. ಹಾಗೂ ಅನುಕರಣ ಅವ್ಯಯ ಕಲಿಕೆ ಅತ್ಯುತ್ತಮ ಅತ್ಯಂತ ಪರಿಣಾಮಕಾರಿಯಾಗಿ ಆಗುವುದರಲ್ಲಿ ಸಂದೇಹವಿಲ್ಲ. ಈ ಚಟುವಟಿಕೆಯಿಂದ ವಿದ್ಯಾರ್ಥಿಗಳಲ್ಲಿ ಆಲಿಸುವಿಕೆಯ ಕೌಶಲ್ಯ ಬೆಳೆಸಬಹುದು.

ಉದಾ :

ಕೋಗಿಲೆ



ಇಲ್ಲಿ ಕ್ಲಿಕ್ ಮಾಡಿ ಕೋಗಿಲೆಯ ಧ್ವನಿ



ನವಿಲು

ಇಲ್ಲಿ ಕ್ಲಿಕ್ ಮಾಡಿ ನವಿಲಿನ ಧ್ವನಿ

ಕಾಗೆ



ಇಲ್ಲಿ ಕ್ಲಿಕ್ ಮಾಡಿ ಕಾಗೆ ಧ್ವನಿ

ಗಿಳಿ



ಇಲ್ಲಿ ಕ್ಲಿಕ್ ಮಾಡಿ ಗಿಳಿಯ ಧ್ವನಿ

**ಚಟುವಟಿಕೆ 24 : ಶೈಕ್ಷಣಿಕ ಮಾರ್ಗದರ್ಶಕರಾಗಿ ಶಾಲಾ ಭಾಷಾವನಕ್ಕೆ ಬೇಕಾದ ಮಾಹಿತಿ ತಂತ್ರಜ್ಞಾನದ ಉಪಕರಣಗಳನ್ನು ಪಡೆಯುವಲ್ಲಿ ಸಮುದಾಯದ ಮತ್ತು ಇಲಾಖೆಯ ಸಹಕಾರ ಪಡೆಯುವ ಯೋಜನೆ ತಯಾರಿಸಿ.**

ಹೇಗೆ ಎಂಬುದನ್ನು ನೋಡೋಣ. ಒಂದು ಹೂವಿನ ಚಿತ್ರವನ್ನು ಮೊಬೈಲ್ಮೂಲಕ ಅಥವಾ ಕಂಪ್ಯೂಟರ್ಗಳ ಮೂಲಕ ಡೌನ್ಲೋಡ್ಮಾಡಿ ಕಾರ್ಡ್ಬೋರ್ಡ್ಶೀಟ್ಗೆ ಚಿತ್ರ ಅಂಟಿಸಿ ಅದರ ಮೇಲೆ ಹೆಸರುಗಳನ್ನು ಬರೆಯುವುದು. ಅವುಗಳನ್ನು ಬಳಸಿ ಭಾಷಾವನದಲ್ಲಿರುವ ಯಾವುದಾದರೂ ಒಂದು ಹೂವಿನ ಗಿಡದಲ್ಲಿ ಇರಿಸುವುದು. ಹೀಗೆ ಇಟ್ಟಿರುವ ಹೆರುಗಳನ್ನು ವಿದ್ಯಾರ್ಥಿಗಳಿಗೆ ಓದಲು ತಿಳಿಸುವುದು. ಇದರೊಂದಿಗೆ ಓದುವ ಕೌಶಲ್ಯ ಬೆಳೆಸಿದಂತಾಗುವುದು. ವಿದ್ಯಾರ್ಥಿಗಳು ಓದಿದ ನಂತರ ಆ ಹೂವಿನ ಅಕ್ಷರದಿಂದ ಪ್ರಾರಂಭವಾಗುವಂತಹ ಅಥವಾ ತನಗೆ ಗೊತ್ತಿರುವ ಅಂಕಿತನಾಮ ಪದವನ್ನು ಹೇಳಿಸುವುದು. ಇದರೊಂದಿಗೆ ಮಾತನಾಡುವ ಕೌಶಲ್ಯ ಬೆಳೆಯುವುದು. ಈ ಚಟುವಟಿಕೆಯ ಮೂಲಕ ಅಂಕಿತನಾಮ ಎಂಬ ಕನ್ನಡದ ವ್ಯಾಕರಣ ಅಂಶದ ಕಲಿಕೆಯ ಬಲವರ್ಧನೆಗೆ ಅವಕಾಶ ಮಾಡಿಕೊಟ್ಟಂತೆ ಆಗುತ್ತದೆ.



**ಚಟುವಟಿಕೆ – ಮರದ ನೆರಳಲಿ ಕವಿಯ ನೆನಪು**

ಭಾಷಾವನದಲ್ಲಿ ಮೊಬೈಲ್ನಿಂದ ಕವಿಗಳ ಭಾವಚಿತ್ರಗಳನ್ನು ಡೌನ್ಲೋಡ್ಮಾಡಿಕೊಂಡು ಒಂದು ಚಿಕ್ಕಗಿಡದ ನೆರಳಿನಲ್ಲಿ ಕವಿಯ ಚಿತ್ರವನ್ನು ತೆಗೆದುಕೊಂಡು ಈ ಗಿಡದ ಹೆಸರೇ ಕವಿಯ ಹೆಸರು ಉದಾ –ಕುವೆಂಪು ಗಿಡ ಎಂದು ಹೇಳುತ್ತಾ ಈ ರೀತಿಯಾಗಿ ಮಾಡಿ ವಿದ್ಯಾರ್ಥಿಯು ಕವಿಯ ಕಾಲ, ಸ್ಥಳದ ಮಾಹಿತಿ, ಪಡೆದ ಪ್ರಶಸ್ತಿಗಳ ಮಾಹಿತಿ ಸವಿವರ ವಿಚಾರವನ್ನು ಹೇಳುವುದು.ಅದನ್ನು ಇನ್ನುಳಿದ ವಿದ್ಯಾರ್ಥಿಗಳು ಆಲಿಸಿ ಮನನ ಮಾಡಿಕೊಳ್ಳುತ್ತಾರೆ. ಈ ಚಟುವಟಿಕೆಯಿಂದ ವಿದ್ಯಾರ್ಥಿಗಳು ಭಾಷಾವನದಲ್ಲಿ ಬಂದು ಕವಿಗಳನ್ನು ಗುರುತಿಸಿ ಮಾಹಿತಿ ತಿಳಿಸುವುದರೊಂದಿಗೆ ಮಾತನಾಡುವ ಕೌಶಲ್ಯ ಹಾಗೂ ಓದುವುದರ ಜೊತೆಗೆ ಓದುವ ಕೌಶಲ್ಯ ಹಾಗೂ ಆಲಿಸುವ ಕೌಶಲ್ಯವನ್ನು ಬೆಳೆಸಿಕೊಳ್ಳುತ್ತಾರೆ.

ಮಾದರಿಚಿತ್ರಗಳು – ಸರಕಾರಿಪ್ರೌಢಶಾಲೆ (ಆರ್.ಎಂ.ಎಸ್.) ಗುಂಜಿ. ತಾ ॥ ಖಾನಾಪೂರಜಿ ॥ ಬೆಳಗಾವಿ.ಶಾಲೆಯ ***ವಿದ್ಯಾರ್ಥಿಗಳು***



**ಚಟುವಟಿಕೆ – ತರಕಾರಿ ತೋಟದಲ್ಲೊಂದು ಆಟ**

ಭಾಷಾವನದಲ್ಲಿ ಮೊಬೈಲ್ನಿಂದ ವಿವಿಧ ತರಕಾರಿಗಳ ಚಿತ್ರಗಳನ್ನು ಡೌನ್ಲೋಡ್ಮಾಡಿಕೊಂಡು ಕೃತಕ ಭಾಷಾವನವಾದ ಶಾಲಾ ಬೋಧನಾ ಕೊಠಡಿಯಲ್ಲಿ ಇಟ್ಟು ವಿದ್ಯಾರ್ಥಿಗಳನ್ನು ಚಟುವಟಿಕೆಯಲ್ಲಿ ತೊಡಗಿಸಿದಾಗ ವಿದ್ಯಾರ್ಥಿಗಳು ತರಕಾರಿಯ ಚಿತ್ರ ಹಾಗೂ ಅದರ ಹೆಸರನ್ನು ಗಮನಿಸಿ ಆ ಹೆಸರಿನ ಮೊದಲ ಅಕ್ಷರದಿಂದ ಪ್ರಾರಂಭವಾಗುವ ಬೇರೆ ಬೇರೆ ಪದಗಳನ್ನು ಆಲೋಚಿಸಿ ಅಭಿವ್ಯಕ್ತಿಸುವ ಕೌಶಲ್ಯವನ್ನು ಬೆಳೆಸಿಕೊಳ್ಳುತ್ತಾರೆ. ತನ್ಮೂಲಕ ಆಲೋಚನಾ ಶಕ್ತಿಯನ್ನು ಈ ಚಟುವಟಿಕೆಯಿಂದ ಹೆಚ್ಚಿಸಬಹುದು.

***ಉದಾಹರಣೆಗೆ–***










**ಚಟುವಟಿಕೆ – ಭಾವನೆಗಳಿಗೆ ಬಣ್ಣ**

ಭಾಷಾವನದಲ್ಲಿ ಮೈಕ್ ಮತ್ತು ಸ್ಪೀಕರ್ ಬಳಸಿ ಒಂದು ಚಟುವಟಿಕೆ ಹಮ್ಮಿಕೊಳ್ಳುವುದು. ಅಲ್ಲಿ ಭಾಷಾವನದಲ್ಲಿರುವ ಹೂ ಕುಂಡಗಳಿಗೆ ಅಂಟಿಸಿರುವ ಚಿತ್ರಗಳನ್ನು ಗಮನಿಸಿ ಉದಾಹರಣೆಗೆ – ರೂಢನಾಮ ಪದಗಳಾದ ಗುಡ್ಡ, ಶಾಲೆ, ನದಿ, ಪರ್ವತ ಈ ಪದಗಳನ್ನು ಗಮನಿಸಿ ಅದರ ಬಗ್ಗೆ ವಿದ್ಯಾರ್ಥಿಗಳು ತಮಗೆ ಅನಿಸಿದ ವ್ಯಕ್ತಪಡಿಸುವರು. ಭಾವನೆಗಳನ್ನು ವ್ಯಕ್ತಿಪಡಿಸುವ ಕೌಶಲ್ಯ ಬೆಳೆಸಿಕೊಳ್ಳವರು ಇದರ ಜೊತೆಗೆ ಭಾಷಾ ವನದಲ್ಲಿ ಹಾಗೂ ಸುತ್ತಮುತ್ತಲು ಕಾಣುವ ವಸ್ತುಗಳನ್ನು ಗಿಡ, ಮರ, ಬಳ್ಳಿ, ಹೂಗಳನ್ನು ನೋಡಿ ತಮಗೆ ಅನಿಸಿದ ಭಾವನೆಗಳನ್ನು ಭಾಷೆಯ ಮೂಲಕ ವಿದ್ಯಾರ್ಥಿಗಳು ವ್ಯಕ್ತಪಡಿಸಿ ತನ್ಮೂಲಕ ಅಭಿವ್ಯಕ್ತಿ ಕೌಶಲ್ಯವನ್ನೂಸಹ ಬೆಳೆಸಿಕೊಳ್ಳುವರು. ಉದಾಹರಣೆಗೆ



**ಚಟುವಟಿಕೆ 25 : ಭಾಷಾ ವನದಲ್ಲಿ ಮಾಹಿತಿ ತಂತ್ರಜ್ಞಾನದ ಉಪಕರಣಗಳನ್ನು ಬಳಸಿ, ಭಾಷಾ ಕೌಶಲ ಬೆಳೆಸುವ ಚಟುವಟಿಕೆಗಳನ್ನು ಬರೆಯಿರಿ.**

## ಅಧ್ಯಾಯ – 4 ಶಾಲಾ ಭಾಷಾವನ ನಿರ್ಮಾಣ ಮತ್ತು ನಿರ್ವಹಣೆ

### 4.1 ಪೀಠಿಕೆ

ಶಾಲೆ ಕಲಿಕೆಯ ನೆಲೆ, ಅಲ್ಲಿ ನಡೆಯುವ ಪ್ರಕ್ರಿಯೆ ಜ್ಞಾನಾಭಿವೃದ್ಧಿಯ ಕುರಿತಾದದ್ದು. ಕೌಶಲ, ಸಾಮರ್ಥ್ಯ, ಯೋಗ್ಯತೆ, ಅರ್ಹತೆ, ಶಕ್ತಿಗಳನ್ನು ಸಂಪಾದಿಸಿಕೊಳ್ಳುವ ಜ್ಞಾನಾರ್ಥಿಗಳಿಗೆ ಮಾರ್ಗದರ್ಶಕರು ಅನುಕೂಲಿಸುವ ಕ್ರಿಯಾಜನ್ಯ ಜ್ಞಾನಾತ್ಮಕ ಕಲಿಕೆಯ ಪ್ರಕ್ರಿಯಾಗಿದೆ. ಜಗತ್ತಿನ ಯಾವುದೋ ಮೂಲೆಯಲ್ಲಿ ಜರುಗುವ ಒಂದು ಸಣ್ಣ ಘಟನೆ, ಕದಡುವಿಕೆ ತಲ್ಲಣ ಮತ್ತಾವುದೋ ಬದಿಯ ಮೂಲೆಯಲ್ಲಿರುವ ಮಗುವಿನ ವಿಕಾಸದ ಮೇಲೆ ಪರಿಣಾಮ ಬೀರುವ ಸಾಧ್ಯತೆಗಳು ಬಹಳಷ್ಟಿದೆ. ಜಗತ್ತಿನ ಪ್ರತಿ ಘಟನೆಗೂ ಸ್ಪಂದನೆ ನೀಡುವ ಮನೋಸ್ಥಿತಿಯನ್ನು ಹೊಂದಿದ ಮಕ್ಕಳ ಬೆಳವಣಿಗೆ, ಮಾನವ ಸಂಪನ್ಮೂಲದ ಅಭಿವೃದ್ಧಿ ಇಂದಿನ ಸಮಾಜದ ಅಗತ್ಯತೆಯಾಗಿದೆ. ಮಾಹಿತಿ ತಂತ್ರಜ್ಞಾನ, ಕೃತಕ ಬುದ್ಧಿಮತ್ತೆಯಂತಹ ಅವಿಷ್ಕಾರಗಳು ಜ್ಞಾನ ವಿಕಾಸದ ಪರಿಯನ್ನು ವಿಸ್ತರಿಸಿರುವುದು ಕಂಡುಬರುತ್ತದೆ. ಸರ್ವತೋಮುಖ ವ್ಯಕ್ತಿತ್ವವನ್ನು, ಸರ್ವ ಸಾಮರ್ಥ್ಯಗಳನ್ನು ರೂಢಿಸಿಕೊಂಡ ಮಾನವ ಸಂಪನ್ಮೂಲ ಅಭಿವೃದ್ಧಿ ಪಡಿಸುವುದು ಶಿಕ್ಷಣ ವ್ಯವಸ್ಥೆಯ ಜವಾಬ್ದಾರಿ ಆಗಿದೆ.ಭೇದರಹಿತ, ತರತಮ ಭಾವರಹಿತ ಸಮಸಮಾಜದ ನಿರ್ಮಾಣ ಸಂವಿಧಾನದ ಆಶೋತ್ತರಗಳು ಈಡೇರಬೇಕೆಂದರೆ ಮಗುವಿನ ಸರ್ವಾಂಗೀಣ ಪ್ರಗತಿ ಅನಿವಾರ್ಯವಾಗಿದೆ

ಶಾಲೆಯಲ್ಲಿ ಮಗುವಿನ ಜ್ಞಾನ ವಿಕಾಸಕ್ಕೆ ಸಹಕಾರ ನೀಡುವ ವಾತಾವರಣ ನಿರ್ಮಿಸುವುದು ವ್ಯವಸ್ಥೆಯ ಬಹು ದೊಡ್ಡ ಜವಾಬ್ದಾರಿಯಾಗಿದೆ. ಮಕ್ಕಳ ಜ್ಞಾನ ವಿಕಾಸವಾಗಬೇಕಾದರೆ ಸರ್ವತೋಮುಖ ವ್ಯಕ್ತಿತ್ವ ನಿರ್ಮಾಣವಾಗಬೇಕಾದರೆ ಮಗುವಿಗೆ ಕಲಿಕೆಯ ಹಲವು ಅವಕಾಶಗಳನ್ನು ಸೃಜಿಸಿ ಕೊಡಬೇಕಾಗಿದೆ. ಕುಶಲತೆ, ಕೌಶಲ,ಕೈಚಳಕಗಳನ್ನು ರೂಢಿಸಿಕೊಂಡ ಮಗು ಮಾತ್ರ ಜಾಗತಿಕ ವಿದ್ಯಮಾನಗಳಿಗೆ ಸ್ಪಂದನೆ ನೀಡಬಲ್ಲದು.ಈ ದೆಸೆಯಲ್ಲಿ ಕಲಿಕೆಯ ಔಪಚಾರಿಕ ನೆಲೆಯಾದ ಶಾಲೆಗಳಲ್ಲಿ ಭಾಷೆಯ ಮೂಲಕೌಶಲ್ಯಗಳಾದ ಭಾಷಾ ಕೌಶಲಗಳನ್ನು ರೂಡಿಸಲು ಸರ್ವ ಪ್ರಯತ್ನಗಳು ಜರುಗುತ್ತಿರುತ್ತದೆ.ಅಂತಹ ಮತ್ತೊಂದು ವಿಶೇಷ ಮಾರ್ಗೋಪಾಯ ಹಾಗೂ ಉಪಕ್ರಮವಾದ ಭಾಷಾವನ ಪರಿಕಲ್ಪನೆ ಮಹತ್ವದ್ದಾಗಿದೆ.

ಮನೋರಂಜನೆಯೊಂದಿಗೆ ಮಕ್ಕಳು ಕಲಿಕೆಯಲ್ಲಿ ತೊಡಗುವಂತಹ ಪರಿಸರದ ಹಲವು ಸಂಗತಿ ವಸ್ತುಗಳ ಮೂಲಕ ಆಡುತ್ತಾ, ಹಾಡುತ್ತಾ ನಲಿಯುತ್ತ ಕಲಿಯುವ ಅವಕಾಶವನ್ನು ಸೃಜಿಸುವ ಏಕೈಕ ಹಾಗೂ ವಿಶಿಷ್ಟವಾದ ಪರಿಕಲ್ಪನೆ ಭಾಷಾವನ. ಶಾಲೆಯಲ್ಲಿ ಹಲವು ಪ್ರಯೋಗಾಲಯಗಳು,ಮಾದರಿಗಳು ಪ್ರತಿರೂಪಗಳು, ಕೌಶಲಗಳನ್ನು ರೂಢಿಸುವ ಭೌತಿಕ ಮತ್ತು ಅಭೌತಿಕ ಪ್ರಯತ್ನಗಳು ಸಾಕಷ್ಟಿರಬಹುದು. ಅವುಗಳ ಜೊತೆಗೆ ಈ ಭಾಷಾವನ ಪರಿಕಲ್ಪನೆಯು ಮಕ್ಕಳನ್ನು ರಂಜನೀಯಗೊಳಿಸುವ ಮೂಲಕ ಕಲಿಕೆಯಲ್ಲಿ ತೊಡಗುವಂತೆ ಮಾಡುವ ವಿಶಿಷ್ಟ ಉಪಕ್ರಮವಾಗಿದೆ. ಕಲಿಕೆಯ ನವೀನ ಅವಕಾಶಗಳನ್ನು ಕೌಶಲಗಳ ರೂಢಿಯ ವಿಶಿಷ್ಟ ಪ್ರಯೋಗಗಳನ್ನು ಅತ್ಯಂತ ಸುವ್ಯವಸ್ಥಿತವಾಗಿ ಸಂಯೋಜಿಸಿ ಪರಿಸರದ

ಜೊತೆ ಮನರಂಜನೆಯ ಜೊತೆ ಸಾಮರ್ಥ್ಯ ರುಡಿಸಿಕೊಳ್ಳುವ ಈ ಭಾಷಾವನ ಪ್ರತಿಯೊಂದು ಶಾಲೆಗಳಲ್ಲಿಯೂ ಇರಲೇಬೇಕಾದ ವ್ಯವಸ್ಥೆಯಾಗಿದೆ.

| |
|---|
| **ಚಟುವಟಿಕೆ –26 : ಶಾಲಾ ಭಾಷಾ ವನ ನಿರ್ಮಾಣದ ಆವಶ್ಯಕತೆ ಕುರಿತು ಚರ್ಚಿಸಿ, ತೀರ್ಮಾನಿಸಿ.** |

## 4.2 ಶಾಲಾ ಭಾಷಾವನ ನಿರ್ಮಾಣದ ಉದ್ದೇಶಗಳು

ಶಾಲೆ ಎಂದರೆ ಅದು ನಿತ್ಯ ಕಲಿಕಾ ಪ್ರಯೋಗ ನಡೆಯುವ ಆಲಯ.ಅಲ್ಲಿ ವಿದ್ಯಾರ್ಥಿ ಚೇತನಗಳೊಂದಿಗೆ ನಿತ್ಯ ಶಿಕ್ಷಕರು ಭವ್ಯ ಭವಿಷ್ಯತ್ತಿಗೆ ಬೇಕಾದ ಮಾನವ ಸಂಪನ್ಮೂಲವನ್ನು ನಾಗರಿಕ ಸಮಾಜದ ಬೇಡಿಕೆಗಳಿಗೆ ಸ್ಪಂದಿಸುವ ನವ ನಾಗರಿಕರನ್ನು ತಯಾರು ಮಾಡುವ ಪ್ರಕ್ರಿಯೆಯಲ್ಲಿ ತೊಡಗಿರುತ್ತಾರೆ. ಶಾಲೆಯಲ್ಲಿ ಭಾಷಾವನ ನಿರ್ಮಾಣ ಮಾಡುವ ಮೂಲಕ ಸಾಮರ್ಥ್ಯ ರೂಢಿಸುವ, ಕೌಶಲಗಳನ್ನು ಕರಗತ ಮಾಡಿಕೊಳ್ಳುವ ಪ್ರಕ್ರಿಯೆಗೆ ಒಂದು ಪ್ರೇರಕ ಶಕ್ತಿ ವರ್ಧಕ ಉಪಕ್ರಮವಾದದ್ದನ್ನು ಮನಗಾಣಬಹುದು. ಶಾಲಾ ಭಾಷಾವನ ನಿರ್ಮಾಣ ಮಾಡುವ ಉದ್ದೇಶಗಳು

- ಪಂಚೇಂದ್ರಿಯಗಳ ಮೂಲಕ ಕಲಿಕೆಯ ಸಾಧ್ಯತೆಗಳನ್ನು ಈಡೇರಿಸುವುದು
- ಪರಿಸರದ ಮೂಲಕ ಕಲಿಕೆ ಉದ್ದೇಶವನ್ನು ಸಾಬೀತುಪಡಿಸುವುದು
- ಚಟುವಟಿಕೆಯುಕ್ತ ಕಲಿಕೆಗೆ ಸಾಕಷ್ಟು ಅವಕಾಶ ಸೃಷ್ಟಿಸುವುದು
- ವಿಭಿನ್ನ ಸಾಮರ್ಥ್ಯದ ಮಕ್ಕಳು ಸುಲಭವಾಗಿ ಕಲಿಯುವಂತೆ ಸಂಯೋಜಿಸುವುದು ಪರಿಣಾಮಕಾರಿ ಬೋಧನಾ ಕಲಿಕಾ ಪ್ರಕ್ರಿಯೆ ಸಾಧ್ಯವಾಗಿಸುವುದು
- ಮಕ್ಕಳ ಅವಧಾನವನ್ನು ಕೇಂದ್ರೀಕರಿಸಿ ಸ್ವಯಂ ಕಲಿಕೆ ಅವಕಾಶ ನೀಡುವುದು
- ಕಲಿಕಾ ಧ್ಯೇಯಗಳನ್ನು ಈಡೇರಿಸುವುದು
- ಭಾಷಾ ಕಲಿಕೆಯ ವೈವಿಧ್ಯತೆಯನ್ನು ಸಾಧ್ಯವಾಗಿಸುವುದು
- ಮಕ್ಕಳ ಸೃಜನಶೀಲ ಕ್ರಿಯಾಶೀಲ ಪ್ರತಿಭಾ ಶಕ್ತಿಯಿಂದ ಭಾಷಾ ಕೌಶಲ ರೂಡಿಸಿಕೊಳ್ಳುವ ಅವಕಾಶ ನೀಡುವುದು
- ಮಾಹಿತಿ ತಂತ್ರಜ್ಞಾನ ಸಮ್ಮಿಳತಗೊಳಿಸಿ ಕಲಿಕೆ ನವೀನ ಅವಕಾಶ ಸೃಷ್ಟಿಸುವುದು

- ಬಹು ಭಾಷೆ ಕಲಿಯುವ ,ಭಾಷಾ ಮಾಧ್ಯಮದ ಮೂಲಕ ಕಲಿಯುವ ಅವಕಾಶಗಳನ್ನು ನೀಡುವುದು
- ಮಕ್ಕಳ ಭಾಷಾ ಕಲಿಕೆ ವೇಗವನ್ನು ಹೆಚ್ಚಿಸುವುದು ಸ್ವಯಂ ಕಲಿಕೆ, ಸಹಪಾಠಿ ಕಲಿಕೆ ಅವಕಾಶಗಳನ್ನು ಸಂಯೋಜಿಸುವುದು.

### 4.3 ಶಾಲಾ ಭಾಷಾವನ ನಿರ್ಮಾಣದ ಪರಿಕರಗಳು

ಭಾಷಾ ಕಲಿಕೆ ಭಾಷಾ ಕೌಶಲಗಳನ್ನು ರೂಢಿಸುವ ವಿಶಿಷ್ಟ ಉಪಕ್ರಮವಾದ ಭಾಷಾವನ ನಿರ್ಮಾಣ ಮಾಡಲು ಉತ್ತಮ ಸಂಕಲ್ಪ ತಾಳುವ, ಮನೋಸ್ಥಿತಿಯನ್ನು, ಮನೋ ಧೋರಣೆಯನ್ನು ಹೊಂದಿರುವ ಭಾಷಾ ಶಿಕ್ಷಕರು ಅತಿ ಅವಶ್ಯಕವಾಗಿ ಬೇಕು. ಪ್ರಯೋಗಶೀಲ, ಕ್ರಿಯಾಶೀಲ, ಸೃಜನಶೀಲ ಮನೋಧೋರಣೆ ಹೊಂದಿದ ಸಮುದಾಯದ ಸಹಭಾಗಿತ್ವವನ್ನು ಪಡೆದುಕೊಳ್ಳುವ ವಾಂಛೆಯುಳ್ಳ, ಸಾಧಿಸಬೇಕೆಂಬ ಛಲವಂತಿಕೆಯುಳ್ಳ ಭಾಷಾ ಶಿಕ್ಷಕರು ಪ್ರಯತ್ನಿಸಿದರೆ ಭಾಷಾವನ ನಿರ್ಮಾಣ ಮತ್ತು ನಿರ್ವಹಣೆ ಸುಲಭ ಸಾಧ್ಯ. ಭಾಷಾ ಕೌಶಲಗಳು ಹಾಗೂ ಭಾಷಾ ಕಲಿಕೆಯ ವರ್ತಮಾನದ ವಿದ್ಯಮಾನಗಳನ್ನು ಅರಿತುಕೊಂಡು ಆಚರಣೆಯಲ್ಲಿ ತರಬಲ್ಲ ಜ್ಞಾನವನ್ನು ಹೊಂದಿರುವ ಶಿಕ್ಷಕರಾಗಿರಬೇಕು.

- ಸುಸಜ್ಜಿತ ಸಮತಟ್ಟಾದ ಸಾಧ್ಯವಾದಷ್ಟು ವಿಶಾಲವಾದ ಜಾಗ
- ಸಮುದಾಯದ ದಾನಿಗಳ ಸಹಕಾರ
- ಶಾಲಾ ಆವರಣ ಗೋಡೆ ತಂತಿಬೇಲಿ
- ಸಂರಕ್ಷಣೆ ವ್ಯವಸ್ಥೆ
- ಸಾಕಷ್ಟು ಪ್ರಮಾಣದಲ್ಲಿ ನೀರಿನ ವ್ಯವಸ್ಥೆ .
- ಸದಾ ಸಹಾಯ ಸಹಕಾರ ನೀಡುವ ಮುಖ್ಯೋಪಾಧ್ಯಾಯರು ವೃತ್ತಿಬಾಂಧವರು
- ಫಲವತ್ತಾದ ಮಣ್ಣು ಸಾವಯವ ಗೊಬ್ಬರ
- ಹೂವಿನ ಕುಂಡಗಳು : ಸಲಿಕೆ ಕತ್ತರಿ ಗುದ್ದಲಿ ಕೊಡಲಿ
- ಅಲ್ಲಲ್ಲಿ ಕಟ್ಟಡ ನಿರ್ಮಿಸಲು ಗಿಡ ಬೆಳೆಸಲು ಅವಕಾಶ
- ಮಾಹಿತಿ ತಂತ್ರಜ್ಞಾನ ಬಳಕೆಯ ಜ್ಞಾನ .
- ಮರ ಗಿಡ ಬೆಳೆಸುವ ಜ್ಞಾನ

- ಕೃಷಿ ತೋಟಗಾರಿಕೆ ಇಲಾಖೆಯ ಸಹಕಾರ
- ಪಾಲಕ ಪೋಷಕರ ಸ್ವಯಂಸೇವಕರ ಮಕ್ಕಳ ಸಹಕಾರ
- ಮಳೆ ಗಾಳಿ ಬಿಸಿಲಿನಿಂದ ತಕಷ್ಟು ರಕ್ಷಣೆ ವ್ಯವಸ್ಥೆ ಕೃತಕ ಹಾನಿಕಾರಕ ಶಕ್ತಿಗಳಿಂದ ರಕ್ಷಣೆ
- ವಿದ್ಯುತ್ ಸಂಪರ್ಕ ವ್ಯವಸ್ಥೆ
- ಸಂಪನ್ಮೂಲ ಸಾಹಿತ್ಯ ಸಂಗ್ರಹಿಸುವಲ್ಲಿ ಸಹಕಾರ ಇಲಾಖೆ ಹಿರಿಯ ಅಧಿಕಾರಿಗಳ ಮಾರ್ಗದರ್ಶನ

**ಚಟುವಟಿಕೆ 27 : ಶೈಕ್ಷಣಿಕ ಮಾರ್ಗದರ್ಶಕರಾಗಿ ನೀವು ಸೂಚಿಸುವ ಭಾಷಾ ನವ ನಿರ್ಮಾಣದ ಪರಿಕರಗಳನ್ನು ಪಟ್ಟಿ ಮಾಡಿರಿ.**

## 4.4 ಶಾಲಾ ಭಾಷಾ ವನ ನಿರ್ಮಾಣದ ಒಂದು ಮಾದರಿ

ಶಾಲಾ ಮೈದಾನದಲ್ಲಿ ಸೂಕ್ತ ಹಾಗೂ ವ್ಯವಸ್ಥಿತ ಜಾಗವನ್ನು ಆಯ್ಕೆ ಮಾಡಿಕೊಂಡು ಪೂರ್ವ ನಿಯೋಜಿತ ಯೋಜನೆಯಂತೆ ಸಮುದಾಯದ ವೃತ್ತಿಬಾಂಧವರ ಪಾಲಕ ಪೋಷಕರ ಮಕ್ಕಳ ಸಹಕಾರದೊಂದಿಗೆ ಕಾರ್ಯಪ್ರವೃತ್ತರಾಗುವುದು. ಲಭ್ಯವಾಗಬಹುದಾದ ಜಾಗದಲ್ಲಿ ರಕ್ಷಣಾ ವ್ಯವಸ್ಥೆಯನ್ನು ಆವರಣ ಗೋಡೆ ತಂತಿ ಬೇಲಿ ಮುಳ್ಳು ಬೇಳಿಯನ್ನು ಹಾಕಿಕೊಳ್ಳಬೇಕು.ಶಾಲಾ ಭಾಷಾವನದ ಒಂದು ಬದಿಯಿಂದ ಪ್ರವೇಶ ಮತ್ತೊಂದು ಬದಿಯಿಂದ ನಿರ್ಗಮನ ವ್ಯವಸ್ಥೆ ಮಾಡಿಕೊಳ್ಳಬೇಕು.ಪ್ರವೇಶ ದ್ವಾರದಲ್ಲಿಯೇ ಶಾಲಾ ಭಾಷಾವನದಲ್ಲಿ ಪಾಲಿಸಬೇಕಾದ ಸೂಚನೆಗಳ ಪಟವಿರಲಿ ಶಾಲಾ ಭಾಷಾವನ ಕೊಂದು ಅಂದದ ಹೆಸರು ಕೊಡಿ.ಪ್ರವೇಶ ದ್ವಾರವು ಅಲಂಕೃತಗೊಂಡಿದ್ದು ಮಕ್ಕಳು ಭಾಷಾವನ ಪ್ರವೇಶವನ್ನು ಉತ್ಸುಕಗೊಳಿಸುವಂತಿರಲಿ. ಸಾಧ್ಯವಾದರೆ ಸ್ವಾಗತಕಾರರಾಗಿ ಗೊಂಬೆಗಳು ಎರಡು ಬದಿಗಿದ್ದು ವಿವಿಧ ಭಾಷೆಗಳಲ್ಲಿ ಸ್ವಾಗತ ಕೋರುವ ಧ್ವನಿಮುದ್ರಿತ ವ್ಯವಸ್ಥೆಯನ್ನು ಸಂಯೋಜಿಸಿ. ಭಾಷಾ ಅವನ ಗೀತೆಯನ್ನು ಹಾಡುತ್ತ ಮಕ್ಕಳು ಪ್ರವೇಶಿಸುವಂತೆ ವ್ಯವಸ್ಥೆ ಮಾಡಿರಿ.

ಮಕ್ಕಳ ಭಾಷಾವನ ಪ್ರವೇಶಿಸಿದ ನಂತರ ಒಂದೊಂದಾಗಿ ವರ್ಣಮಾಲೆ ಅಕಾರಾದಿಯಾಗಿ ಓದುವ ಹೇಳುವ ಬರೆಯುವ ಅವಕಾಶವನ್ನು ನೀಡಿರಿ. ನೀವು ಬೆಳೆಸಲಿರುವ, ಬೆಳೆಸಿರುವ ಗಿಡ ಮರ ಬಳ್ಳಿ ಯಾವುದೇ ಆಗಿರಲಿ ಅವುಗಳಿಗೆ ಸಂಬಂಧಿಸಿದ ಸಾಹಿತ್ಯವನ್ನು ಸಂರಚಿಸಿಕೊಳ್ಳಿ.

ಉದಾಹರಣೆ –ಅ–ಅಶೋಕ ಮರ, ಆ–ಆಲದ ಮರ, ಇ– ಇಲಿ, ಈ–ಈಚಲು ಮರ ...ಹೀಗೆ ಮುಂದುವರೆಯಲಿ.

ಗಿಡದ ಸುತ್ತ ಸುತ್ತುವಷ್ಟು ಪ್ರಶಸ್ತವಾದ ಜಾಗವಿರಲಿ.ಗಿಡದ ಒಂದು ಬದಿಗೆ ಆ ಗಿಡದ ಪರಿಚಯವನ್ನು ಮಾಡಿಸುವುದು. ಧ್ವನಿ ಮುದ್ರಿತ ಕೊಂಡಿಯನ್ನು(ಲಿಂಕ್) ಅಳವಡಿಸಿ.ಸ್ಕ್ಯಾನ್ ಮಾಡಿ ತಾವೇ ಕೇಳುವಂತೆ ಮಾಡುವುದು. ಪಕ್ಕದ ಬದಿಗೆ ಅಶೋಕ ಗಿಡದ ಹಾಗೂ ಆ ವರ್ಣಮಾಲೆಯಿಂದ ಸಿಗುವ ಪ್ರಕೃತಿಯ ಎಲ್ಲ ವಸ್ತುಗಳ ಹೆಸರುಗಳನ್ನು ವಾಕ್ಯಗಳನ್ನು ಒಂದು ಪುಟದಲ್ಲಿ ಪ್ರಕಟಿಸಿ ತೂಗು ಹಾಕಿರಿ.ಮಕ್ಕಳಿಗೆ ಅದನ್ನು ಓದುವಂತೆ ಸೂಚನೆಯನ್ನು ನೀಡಿರಿ.ಮಕ್ಕಳು ಮೌನವಾಗಿ ಬಾಯ್ದೆರೆದು ಓದಲಿ.ಮತ್ತೊಂದು ಬದಿಗೆ ಅಶೋಕ ವೃಕ್ಷದ ಕುರಿತಾಗಿ ಬರೆಯಲು ಅಥವಾ ಆ ವರ್ಣಮಾಲೆ ಆಧರಿಸಿದ ಪದಪುಂಜ ವಾಕ್ಯ ಬರೆಯಲು ಅವಕಾಶ ನೀಡಿ. ಒಂದು ಪಾಟಿಯನ್ನು ಅಥವಾ ಒಂದು ನೋಟ್ ಪುಸ್ತಕವನ್ನು ಇಡಿ. ಮಕ್ಕಳು ತಮ್ಮಗನಿಸಿದ್ದನ್ನು ಬರೆಯಲು ಸ್ವಾತಂತ್ರ್ಯ ನೀಡಿರಿ. ಮಗದೊಂದು ಬದಿಗೆ ನಿಂತು ಮಗು ತನ್ನ ಸಹಪಾಠಿಗೆ ತಾನು ಈವರೆಗೆ ಆ ವರ್ಣಮಾಲೆ ಆಧರಿಸಿಕೊಂಡು ಅನುಭವಿಸಿದ ವಿಚಾರಗಳ ಬಗ್ಗೆ ಹೇಳುವ ಅವಕಾಶ ನೀಡಿರಿ. ವೃಕ್ಷದ ಕೊಂಬೆಗೆ ವ್ಯಾಕರಣ ಸಾಹಿತ್ಯಿಕ ಭಾಷಿಕ ಅಂಶಗಳ ಪಟಗಳನ್ನು ತೂಗು ಹಾಕಿರಿ. ಮಕ್ಕಳು ಮನರಂಜಿಸುತ್ತ ಭಾಷಾ ಕಲಿಕೆಯಲ್ಲಿ ಕೌಶಲಗಳ ರೂಢಿಯಲ್ಲಿ ಸಾಮರ್ಥ್ಯ ಅಭಿವೃದ್ಧಿಯಲ್ಲಿ ತೊಡಗಲಿ.

ಹೀಗೆ ಮುಂದುವರೆದು ಪ್ರತಿಯೊಂದು ವಸ್ತುಗಳ ಕುರಿತು ನಾಲ್ಕು ಬದಿಗೆ ಒಂದೊಂದು ಅಂದರೆ ಆಲಿಸುವ ಮಾತನಾಡುವ ಓದುವ ಬರೆಯುವ ಕೌಶಲಗಳ ಸಂಪನ್ಮೂಲಗಳನ್ನು ಸಂಯೋಜಿಸಿರಿ. ಮಕ್ಕಳು ಒಂದಷ್ಟು ಸಮಯ ಕಳೆದ ಮೇಲೆ ಆಟದ ಪರಿಕಲ್ಪನೆಗಳ ಹತ್ತಿರ ಬರುವಂತೆ ಸೂಚಿಸಿರಿ.

ಉದಾರಣೆಗೆ – ಜೋಕಾಲಿ, ಜಾರುಬಂಡಿ, ಜೀ ಕುಮೂಕು, ಓಡಾಟ ಮುಂತಾದವು. ಮಕ್ಕಳು ಈ ಆಟಗಳನ್ನು ಆಡುತ್ತಿರುವಾಗ ಭಾಷಾ ಕೌಶಲಗಳ ವೃದ್ಧಿಗೆ ಅವಕಾಶ ನೀಡಿರಿ.

**ಜೋಕಾಲಿ ಆಟ** – ಮಗು ಜೋಕಾಲಿ ಆಡುತ್ತಿದ್ದರೆ ಇನ್ನೊಂದು ಮಗು ಬದಿಗೆ ನಿಂತಿರಲಿ ಪ್ರಾಸ ಪದಗಳನ್ನು ಹೇಳುವ ಆಟವನ್ನು ಸಂಯೋಜಿಸಿರಿ ಎಲ್ಲಿಯವರೆಗೆ ಜೋಕಾಲಿ ಆಡುತ್ತಿರುವ ಮಗು ಪ್ರಾಸ ಪದವನ್ನು ಸರಿಯಾಗಿ ಹೇಳುತ್ತದೆಯೋ ಅಲ್ಲಿಯವರೆಗೆ ಜೋಕಾಲಿ ಆಡಲಿ ಎಲ್ಲಿ ತಪ್ಪುತ್ತದೆ ಅಲ್ಲಿಗೆ ಮತ್ತೊಂದು ಮಗುವಿಗೆ ಜೋಕಾಲಿ ಆಡಲು ಅವಕಾಶ ನೀಡಲಿ.

ಹೀಗೆ ಜೋಕಾಲಿ ಆಟದಲ್ಲಿ ಪದಬಂಡಿ ಅನುಕರಣಾವ್ಯ ಪದ ದ್ವಿರುಕ್ತಿ ಪದ ವಿರುದ್ಧಾರ್ಥಕ ಪದಗಳು ವಿಭಕ್ತಿ ಪ್ರತ್ಯಯಗಳು ನಾಮಪದಗಳು ಮುಂತಾದ ಭಾಷೆಕ ವ್ಯಾಕರಣ ಅಂಶಗಳನ್ನು ಹೇಳುವ ಆಟಗಳನ್ನು ಸಂಯೋಜಿಸಿರಿ.

ಜೀಕು ಮೂಕು ಆಟ ಎರಡು ಮಕ್ಕಳು ಈ ಆಟದಲ್ಲಿ ಎರಡು ಬದಿಗಿರಲಿ. ಒಂದು ಮಗು ಒಂದು ಶಬ್ದವನ್ನು ಹೇಳಿದರೆ ಆ ಶಬ್ದದ ಕೊನೆ ಅಕ್ಷರದಿಂದ ಮತ್ತೊಂದು ಮಗು ಶಬ್ದವನ್ನು ಹೇಳಲಿ ಭಾರವನ್ನು ಹಾಕಿ ಪರಸ್ಪರ ಮಕ್ಕಳಿಬ್ಬರು ಸರಿ ಪದಗಳನ್ನು ಹೇಳಿದಾಗ ಒಬ್ಬರಿಗೊಬ್ಬರು ಆಟವನ್ನು ಆಡಲಿ.

**ಜಾರುಬಂಡಿ ಆಟ –** ಜಾರು ಬಂಡಿಯ ಏಣಿ ಏರಿ ಮೇಲೆ ಕುಳಿತುಕೊಳ್ಳುವ ಮಗು ಪ್ರಾಸ ಪದಗಳನ್ನು ಅವ್ಯಯ ಪದಗಳನ್ನು ದ್ವಿರುಕ್ತಿ ಪದಗಳನ್ನು ವಿರುದ್ಧಾರ್ಥಕ ಪದಗಳನ್ನು ಮುಂತಾದ ಭಾಷೆ ಹಾಗೂ ವ್ಯಾಕರಣಾಂಶಗಳನ್ನು ಹೇಳುತ್ತಾ ಸರಿ ಹೇಳಿದರೆ ಮೇಲ್ಗಡೆಯಿಂದ ಜಾರುವ ವ್ಯವಸ್ಥೆ ಮಾಡಿ.ಇನ್ನೊಂದು ಮಗು ಇದನ್ನು ಗಮನಿಸುತ್ತಿರಲಿ ಆಡುವ ಮಗು ಹೇಳುವ ಪದ ತಪ್ಪಾದರೆ ಆ ಮಗುವಿನ ಆಟ ಮುಗಿದಂತೆ ಮತ್ತೊಂದು ಮಗು ಜಾರಬಂಡಿಯಲ್ಲಿ ಹೀಗೆ ಪದಗಳನ್ನು ಹೇಳುತ್ತಾ ಆಟವಾಡಲಿ.

**ಅಕ್ಷರ ರಂಗೋಲಿ –** ಭಾಷಾವನದಲ್ಲಿ ಸಿಗುವ ಎಲೆ ಕಾಯಿ ಹಣ್ಣು ಬೀಜ ಹೂವು ಇವುಗಳನ್ನು ಸಂಗ್ರಹಿಸಿಕೊಂಡು ಅಕ್ಷರಗಳ ಕಾಪಿ ಬರಹದ ಮಾದರಿಗಳಲ್ಲಿ ಅವುಗಳನ್ನು ತುಂಬಲಿ.ಎಲೆ ಕಾಯಿ ಬೀಜಗಳಿಂದ ಅಕ್ಷರ ರಂಗೋಲಿಹಾಕಿ ಸಂಭ್ರಮಿಸಲಿ.ಹೀಗೆ ಮಕ್ಕಳು ತಮ್ಮದೇ ಆದ ಪದಗಳನ್ನು ಬರೆಯುವ ಪದಪುಂಜ ರಚಿಸುವ ವಾಕ್ಯ ರಚಿಸುವ ರಂಗೋಲಿ ಚಿತ್ರವನ್ನು ಬಿಡಿಸುವ ಸ್ವಾತಂತ್ರ್ಯವನ್ನು ನೀಡಿರಿ.

**ಹರಟೆ ಕಟ್ಟೆ –** ಆಟವಾಡಿದ ನಂತರ ಒಂದು ಹರಟೆ ಕಟ್ಟೆಗೆ ಅವಕಾಶವಿರಲಿ. ಹಾಸ್ಯ ಚಟಾಕಿ ಚುಟುಕುಗಳ ರಚನೆ ಕತೆ ಹೇಳುವ ಜೋಕ್ ಹೇಳುವ ಅವಕಾಶವಿರಲಿ,

**ಮರಳ ಪಾಟಿ –** ಭಾಷಾವನದ ಒಂದು ಬದಿಗೆ ಒಂದು ದೊಡ್ಡ ಮರಳ ಪಾಟಿಯನ್ನು ಸಿದ್ಧಪಡಿಸಿ. ಆ ಮರಳ ಪಾಟಿಯಲ್ಲಿ ಮಕ್ಕಳು ಅಕ್ಷರ ಪದಗಳನ್ನು ಬರೆದು ರೂಡಿಸಿಕೊಳ್ಳಲಿ.

ಹೀಗೆ ಭಾಷಾವನದಲ್ಲಿ ಮಕ್ಕಳು ಆಡಲಿ ಹಾಡಲಿ ಓದಲಿ ಬರೆಯಲಿ ಕೇಳಲಿ ಹೇಳಲಿ ಮನರಂಜನೆ ಪಡೆಯಲಿ. ಕೊನೆಗೆ ನಿರ್ಗಮನ ದ್ವಾರದ ಪಕ್ಕದಲ್ಲಿ ಒಂದು ಅನಿಸಿಕೆ ಪುಸ್ತಕ ಇಡಿ .ಅದರಲ್ಲಿ ಮಕ್ಕಳು ಭಾಷಾ ವನದಲ್ಲಿ ತಾವು ಅನುಭವಿಸಿದ ಸಂತಸ ಸಂಭ್ರಮದ ಜೊತೆಗೆ ತಮಗೆ ಬೇಕಾದಂತಹ ಅವಶ್ಯಕತೆಗಳ ಕುರಿತು ದಾಖಲಿಸಲು ಅವಕಾಶ ನೀಡಿರಿ. ಧನ್ಯವಾದಗಳು ಹೋಗಿ ಬನ್ನಿ ಎಂಬ ವಿದಾಯ ಬರಹ ನಿರ್ಗಮನ ದ್ವಾರದ ಹಿಂಬದಿಗೆ ಇರಲಿ.

ಭಾಷಾವನದಲ್ಲಿ ಅಲ್ಲಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಇರಲಿ, ಕುಳಿತುಕೊಳ್ಳುವ ಆಸನ ವ್ಯವಸ್ಥೆ ಇರಲಿ ಆಟವಾಡಲು ಪ್ರಶಸ್ತವಾದ ಜಾಗವಿರಲಿ. ಸೂಚನಾ ಫಲಕಗಳಿರಲಿ, ಕ್ಯಾಮರಾ ವ್ಯವಸ್ಥೆ ಇದ್ದರಂತೂ ಒಳ್ಳೆಯದು.

**ಚಟುವಟಿಕೆ 28 : ಭಾಷಾವನದಲ್ಲಿ  ಇರಬೇಕಾದ ಸೂಚನಾ ಫಲಕಗಳನ್ನು ತಯಾರಿಸಿರಿ.**

4

ಜವಾಬ್ದಾರಿಯು ನಮ್ಮ ನಿರ್ವಹಣಾ ಬದ್ಧತೆಯನ್ನು ಸದಾ ಜಾಗೃತವಾಗಿಡುವುದು. ಮಕ್ಕಳ ಭಾಷಾ ಕೌಶಲ ಅಭಿವೃದ್ಧಿಯ ಧ್ಯೇಯವನ್ನು ಸಾಕಾರಗೊಳಿಸುವ ಪ್ರಾಯೋಗಿಕ ಉಪಕ್ರಮವಾದ ಭಾಷಾವನ ನಿರ್ಮಾಣ ಮಾಡಿ ಅದರ ನಿರ್ವಹಣೆ ಮಾಡುತ್ತ ಸಾಗಿದರೆ

ಮುಂದಿನ ತರಗತಿ ಮಕ್ಕಳುಗಳು ಕೂಡ ಸಮರ್ಥ ಸಂವನಕಾರರಾಗಿ ಬೆಳೆಯಲು ಸಾಧ್ಯವಾಗುತ್ತದೆ. ಭಾಷಾವನದ ಪರಿಕರಗಳು,ಸಾಧನಗಳು, ಅಟಿಕೆ ವಸ್ತುಗಳು ಮುಂತಾದವು ಹಾಳಾಗದಂತೆ ಎಚ್ಚರಿಕೆ ವಹಿಸುವುದು ಅವಶ್ಯಕವಾಗಿದೆ.

**ಭಾಷಾವನ ನಿರ್ವಹಣಾ ಸಮಿತಿ**

ಭಾಷಾವನ ನಿರ್ವಹಣೆಗೆ ಸಮಿತಿಯೊಂದನ್ನು ರಚಿಸಿ, ಆ ಸಮಿತಿಯ ಮೂಲಕ ಭಾಷಾವನವನ್ನು ಅತ್ಯಂತ ಜವಾಬ್ದಾರಿಯಿಂದ ನಿರ್ವಹಣೆ ಮಾಡಿಕೊಂಡು ಹೋಗಲು ವ್ಯವಸ್ಥಿತಗೊಳಿಸುವುದು.

| | |
|---|---|
| ಎಸ್ ಡಿ ಎಂ ಸಿ ಅಧ್ಯಕ್ಷರು | ಅಧ್ಯಕ್ಷರು |
| ಗ್ರಾ ಪಂ ಹಿರಿಯ ಸದಸ್ಯರು | ಉಪಾಧ್ಯಕ್ಷರು |
| ಎಸ್ ಡಿ ಎಂ ಸಿ ಹಿರಿಯ | ಸದಸ್ಯರು ಸದಸ್ಯರು |
| ಎಸ್ ಡಿ ಎಂ ಸಿ ಹಿರಿಯ ಸದಸ್ಯರು | ಸದಸ್ಯರು |
| ಮುಖ್ಯೋಪಾಧ್ಯಾಯರು | ಕಾರ್ಯದರ್ಶಿಗಳು |
| ಸಿ ಆರ್ ಪಿ /ಬಿ ಆರ್ ಪಿ | ಮಾರ್ಗದರ್ಶಕರು |
| ಭಾಷಾ ಶಿಕ್ಷಕರು | ನಿರ್ವಾಹಕರು |
| ಭಾಷಾ ಶಿಕ್ಷಕರು | ಸದಸ್ಯರು |
| ಭಾಷಾ ಶಿಕ್ಷಕರು | ಸದಸ್ಯರು |
| ಶಾಲಾ ಪ್ರಧಾನಿ | ಸದಸ್ಯರು |
| ಶಾಲಾ ತೋಟಗಾರಿಕಾ ಮಂತ್ರಿ | ಸದಸ್ಯರು |

**ನಿರ್ವಹಣಾ ನಿಧಿ ಸ್ಥಾಪನೆ**

ದಾನಿಗಳಿಂದ ದೇಣಿಗೆಯನ್ನು ಕೂಡಿಸಿ ಹಣವನ್ನು ಒಂದು ಜಂಟಿ ಖಾತೆಯಲ್ಲಿ ಬ್ಯಾಂಕ್ ಹುಂಡಿಯನ್ನು ಇಟ್ಟು ಬಂದಂತಹ ಬಡ್ಡಿ ಹಣವನ್ನು ಭಾಷಾವನ ನಿರ್ವಹಣೆಗೆ ಬಳಕೆ ಮಾಡುವುದು.

## 4.6 ಭಾಷಾವನ ನಿರ್ಮಾಣದ ಸವಾಲುಗಳು

ಯಾವುದೇ ಒಂದು ಉತ್ತಮ ಕಾರ್ಯ ನೆರವೇರಲು ಹಲವಾರು ತೊಂದರೆಗಳು ಬಂದೋದಗುತ್ತವೆ. ಅದರಂತೆ ಪ್ರತಿಯೊಂದು ಶಾಲೆಯಲ್ಲಿಯೂ ಭಾಷಾವನದ ನಿರ್ಮಾಣದಲ್ಲಿಯೂ ಅಡ್ಡಿ ಆತಂಕಗಳು ಎದುರಾಗುತ್ತವೆ.

ಸ್ಥಳಾವಕಾಶ ತೊಂದರೆ,ಪರಿಕರಗಳ ಕೂಡಿಸುವಿಕೆ,ಹಣಕಾಸು ಸಮಸ್ಯೆ,ಪ್ರಾಣಿ ಪಕ್ಷಿ ಮತ್ತು ಕಿಡಿಗೇಡಿಗಳ ಕಾಟ,ಮಕ್ಕಳ ಬೇಜಬ್ದಾರಿತನ,ವ್ಯವಸ್ಥೆಯ ಅಸಹಕಾರ,ಬಿಸಿಲು ಗಾಳಿ ಮಳೆಯಿಂದ ರಕ್ಷಣೆ ಪಡೆಯುವದು,ವ್ಯವಸ್ಥಿತವಾದ ನಿರ್ವಹಣೆ ಹೀಗೆ ಇನ್ನೂ ಸಾಕಷ್ಟು ಸವಾಲುಗಳು ಎದುರಾಗುತ್ತವೆ.

**ಚಟುವಟಿಕೆ 29 : ಭಾಷಾವನ ನಿರ್ಮಾಣ ಮಾಡುವಾಗ ಎದುರಾಗುವ ಸವಾಲುಗಳು ಹಾಗೂ ಪರಿಹಾರಗಳನ್ನು ಪಟ್ಟಿ ಮಾಡಿರಿ.**

**ನನ್ನ ಯೋಜನೆ–**ತರಬೇತಿಯ ಪ್ರತಿಫಲವಾಗಿ ಸ್ವಯಂ ಪ್ರೇರಣೆಗೊಂಡು ಶೈಕ್ಷಣಿಕ ಮಾರ್ಗದರ್ಶಕನಾಗಿ ನನ್ನ ವ್ಯಾಪ್ತಿಯ ಶಾಲೆಗಳಲ್ಲಿ ಮಕ್ಕಳ ಭಾಷಾ ಕೌಶಲ ಅಭಿವೃದ್ಧಿಗೆ ಉಪಯುಕ್ತ ಉಪಕ್ರಮವಾದ ಭಾಷಾ ವನ ನಿರ್ಮಾಣ ಮಾಡುವ ಕುರಿತು ಯೋಜನೆ ತಯಾರಿಸುತ್ತೇನೆ.

## 5. ಅನುಬಂಧಗಳು

### ಅ. ತರಬೇತಿ ಪ್ರಕ್ರಿಯೆ

| *ಕ್ರ.ಸಂ* | *ತರಬೇತಿಯ ಪ್ರಮುಖಾಂಶಗಳು* | *ಚಟುವಟಿಕೆಗಳು* | *ಸಂಪನ್ಮೂಲಗಳು ಮತ್ತು ಚಟುವಟಿಕೆಗಳು ವಿಡಿಯೋ , ಪಿಪಿಟಿ, ಫೋಟೋ , ಲಿಂಕ್ ಗಳು, , ಆಟಗಳು* |
|---|---|---|---|
| 01 | ಭಾಷಾ ಶಿಕ್ಷಣ ಭಾಷಾ ಶಿಕ್ಷಕಣದ ಮಹತ್ವ ಶೈಕ್ಷಣಿಕ ಮಾರ್ಗದರ್ಶಕರು ಹಾಗೂ ಭಾಷಾ ಶಿಕ್ಷಕರ ಪ್ರಮುಖ ಜವಾಬ್ದಾರಿಗಳು ಶೈಕ್ಷಣಿಕ ಮಾರ್ಗದರ್ಶಕರು ಮತ್ತು ಭಾಷಾ ಕೌಶಲ ಅಭಿವೃದ್ಧಿ ಉಪಕ್ರಮಗಳು<br>ವರ್ಗ ಕೋಣೆ<br>ಭಾಷಾ ಆಟಗಳು<br>ಭಾಷಾ ಒಲಂಪಿಕ್ಸ್<br>ಭಾಷಾ ಪ್ರಯೋಗಾಲಯ ಭಾಷಾ ವನ | ಶೈಕ್ಷಣಿಕ ಮಾರ್ಗದರ್ಶಕರು ಸ್ವಯಂ ಮೌಲ್ಯಮಾಪನ ಚಟುವಟಿಕೆಯನ್ನು ಸಂಯೋಜಿಸುವುದು ಶಾಲೆಗಳಲ್ಲಿ ಪ್ರಯೋಗಿಕವಾಗಿ ತೊಡಗಿಕೊಂಡ ಬಗೆಯನ್ನು ವಿವರಿಸುವ ಚಟುವಟಿಕೆ ಮಾಡಿಸುವುದು ಭಾಷಾ ಶಿಕ್ಷಕರ ಭಾಷಾ ಕೌಶಲ್ಯಾಭಿವೃದ್ಧಿ ಯಶೋಗಾಥೆಗಳನ್ನು ಸಾದರ ಪಡಿಸಲು ಅವಕಾಶ ನೀಡುವುದು.<br>ಭಾಷಾ ಕೌಶಲಗಳ ಆಲಿಸುವ ಮಾತನಾಡುವ ಓದುವ ಬರೆಯುವ | ಶೈಕ್ಷಣಿಕ ಮಾರ್ಗದರ್ಶಕರು<br>ಶಿಕ್ಷಕರ ಮಹತ್ವವನ್ನು ಸಾರುವ ವಿಡಿಯೋ ತುಣುಕುಗಳು<br>ಪ್ರೇರಣಾತ್ಮಕ ವಿಡಿಯೋ ತುಣುಕುಗಳು<br>ಪಿಪಿಟಿ |

| | | | |
|---|---|---|---|
| | | ಚಟುವಟಿಕೆಗಳನ್ನು ಶಿಬಿರಾರ್ಥಿಗಳಿಂದ ಸಂಯೋಜಿಸುವುದು.<br><br>ಭಾಷಾವನ ಪರಿಕಲ್ಪನೆಯನ್ನು ಸಾದರ ಪಡಿಸುವುದು | |
| *02* | ಶಾಲಾ ಭಾಷವನ ಶಾಲಾ ಭಾಷಾ ವನ ನಿರ್ಮಾಣದ ಮಹತ್ವ ಶಾಲಾ ಭಾಷಾ ವನದಲ್ಲಿ ಕೌಶಲ್ಯಾಭಿವೃದ್ಧಿಯ ಪ್ರಾಯೋಗಿಕತೆ, ಆಲಿಸುವಿಕೆ ಮಾತನಾಡುವಿಕೆ ಓದುವಿಕೆ ಬರೆಯುವಿಕೆ ಗ್ರಂಥಾವಲೋಕನ ಚಿಂತನ | ಪ್ರತಿ ಕೌಶಲ್ಯ ಅಭಿವೃದ್ಧಿಗೆ ಸಂಪನ್ಮೂಲ ಸಾಹಿತ್ಯವನ್ನು ಸಿದ್ಧಪಡಿಸುವುದು ಪ್ರಾಯೋಗಿಕ ಚಟುವಟಿಕೆಗಳನ್ನು ಮಾಡುವುದು ಭಾಷಾ ವನದಲ್ಲಿ ಆಲಿಸುವಿಕೆ ಕೌಶಲ್ಯ ಬೆಳೆಸುವ ಚಟುವಟಿಕೆಗಳನ್ನು ಸಾದರ ಪಡಿಸುವುದು ಹೀಗೆ ಮಾತನಾಡುವ ಓದುವ ಬರೆಯುವ ಗ್ರಂಥಾ ಅವಲೋಕನ ಹಾಗೂ ಚಿಂತನ ಕೌಶಲ್ಯಗಳ ಚಟುವಟಿಕೆಗಳನ್ನು ಮಾಡಿಸುವುದು. | ಪಿ ಪಿ ಟಿ ವಿಡಿಯೋ ತುಣುಕುಗಳು ಸಂಪನ್ಮೂಲ ಸಾಹಿತ್ಯ. |

| | | | |
|---|---|---|---|
| *03* | ಭಾಷಾವನ ಹಾಗೂ ಮಾಹಿತಿ ತಂತ್ರಜ್ಞಾನ ಭಾಷಾ ವನದಲ್ಲಿ ಮಾಹಿತಿ ತಂತ್ರಜ್ಞಾನದ ಅವಶ್ಯಕತೆ ಹಾಗೂ ಇಂದೀಕರಣ ಪ್ರಸ್ತುತಿ | ಮಾಹಿತಿ ತಂತ್ರಜ್ಞಾನವನ್ನು ಭಾಷಾ ವನದಲ್ಲಿ ಬಳಕೆ ಮಾಡುವ ಮೂಲಕ ಭಾಷಾ ಕೌಶಲ್ಯಗಳ ಅಭಿವೃದ್ಧಿಗೆ ವಿನೂತನ ಮಾರ್ಗೋಪಾಯಗಳನ್ನು ಚಟುವಟಿಕೆಗಳನ್ನು ಸಂಯೋಜಿಸುವುದು ಶಿಬಿರಾರ್ಥಿಗಳಿಂದ ಪ್ರಾಯೋಗಿಕವಾಗಿ ಕೆಲವೊಂದು ಸಂಪನ್ಮೂಲಗಳನ್ನು ಸಿದ್ಧಪಡಿಸುವುದು | ಪಿಪಿಟಿ ವಿಡಿಯೋ ತುಣುಕುಗಳು |
| *04* | ಶಾಲಾ ಭಾಷಾವನ ನಿರ್ಮಾಣ ಮತ್ತು ನಿರ್ವಹಣೆ | ಶಾಲಾ ಭಾಷಾವನ ನಿರ್ಮಾಣದ ಒಂದು ಮಾದರಿಯನ್ನು ಶಿಬಿರಾರ್ಥಿಗಳಿಂದ ತಯಾರಿಸುವುದು. ಶಿಬಿರಾರ್ಥಿಗಳಿಂದ ಮಾದರಿ ಭಾಷಾ ಗುಣವೊಂದನ್ನು ನಿರ್ಮಾಣ ಮಾಡಲು ಸೂಕ್ತ ಸಲಹೆ ಸೂಚನೆಗಳನ್ನು ಪಟ್ಟಿಕರಿಸುವುದು<br><br>ಪ್ರಾಯೋಗಿಕವಾಗಿ ಶಾಲಾ ಭಾಷಣ ನಿರ್ಮಾಣ ಮಾಡಿ ಮಕ್ಕಳ ಭಾಷಾ ಕೌಶಲ್ಯಾಭಿವೃದ್ಧಿಗೆ ಶ್ರಮಿಸುವ ಪ್ರತಿಜ್ಞೆ ಮಾಡಿಸುವುದು | ಬೆಳಗಾವಿ ಡಯಟ್ ಭಾಷಾವನ ವಿಡಿಯೋ ಚಿತ್ರೀಕರಣದ ತುಣುಕು. |

## ಆ.ಭಾಷಾವನ ಮತ್ತು ಭಾಷಾ ಕೌಶಲ್ಯ ಅಭಿವೃದ್ಧಿ ತರಬೇತಿ ವೇಳಾಪಟ್ಟಿ

| ಕ್ರ. ಸಂ | **10-30** ರಿಂದ **12-00** | **12-00** ರಿಂದ **01-30** | **01-30** ರಿಂದ **2-00** | **2-00** ರಿಂದ **03-30** | **03-30** ರಿಂದ **5-00** |
|---|---|---|---|---|---|
| **1** | **ಪೂರ್ವ ಪರೀಕ್ಷೆ ಶೈಕ್ಷಣಿಕ ಮಾರ್ಗದರ್ಶನ ಭಾಷಾ ಶಿಕ್ಷಣ ಹಾಗೂ ಭಾಷಾ ಕಲಿಕೆ** | **ಶೈಕ್ಷಣಿಕ ಮಾರ್ಗದರ್ಶನದ ಯಶೋಗಾಥೆಗಳ ಮಂಡನೆ** | | **ಭಾಷಾ ಶಿಕ್ಷಣ ಮಹತ್ವ ಶೈಕ್ಷಣಿಕ ಮಾರ್ಗದರ್ಶನದ ಆವಶ್ಯಕತೆ** | **ಭಾಷಾ ಕೌಶಲ ಅಭಿವೃದ್ಧಿಯ ಉಪಕ್ರಮಗಳು ವರ್ಗಕೋಣೆ ಭಾಷಾ ಪ್ರಯೋಗಾಲಯ** |
| **2** | **ಭಾಷಾ ಆಟಗಳು**<br>**ಭಾಷಾ ಓಲಂಪಿಕ್ಸ್**<br>**ಭಾಷಾನವ ಒಂದು ಮಾದರಿ** | ಭಾಷಾವನದ ಮೂಲಕ ಆಲಿಸುವಿಕೆಮತ್ತು ಮಾತನಾಡುವಿಕೆ ಕೌಶಲ್ಯಾಭಿವೃದ್ಧಿ | | ಭಾಷಾವನದಮೂಲಕ<br>ಓದುವಿಕೆಬರೆಯುವಿಕೆಕೌಶಲ್ಯಾಭಿವೃದ್ಧಿ<br>ಸಂಪನ್ಮೂಲ ತಯಾರಿಕೆ | ಭಾಷಾವನದಮೂಲಕಚಿಂತನಮತ್ತುಗ್ರಂಥಾವಲೋಕನ ಕೌಶಲ್ಯಾಭಿವೃದ್ಧಿ<br>ಚಟುವಟಿಕೆಸಂಪನ್ಮೂಲತಯಾರಿಕೆ |
| **3** | ಮಾಹಿತಿತಂತ್ರಜ್ಞಾನಭಾಷಾಕೌಶಲ್ಯಾಭಿವೃದ್ಧಿ<br>ತಂತ್ರಜ್ಞಾನಆದಾರಿತಭಾಷಾವನನಿರ್ವಹಣೆ | ಮಾಹಿತಿತಂತ್ರಜ್ಞಾನಆದಾರಿತಸಂಪನ್ಮೂಲತಯಾರಿಕೆ | | ಭಾಷಾವನನಿರ್ಮಾಣಮತ್ತುನಿರ್ವಹಣೆ<br>ಭಾಷಾವನನಿರ್ವಹಣೆಯಸವಾಲುಗಳುಸಾಫಲ್ಯಪರೀಕ್ಷೆ | **ಸಾಫಲ್ಯ ಪರೀಕ್ಷೆ** |

## ಇ. ಪ್ರಶ್ನೆ ಪತ್ರಿಕೆಗಳು

### 1. ಪೂರ್ವ ಪರೀಕ್ಷೆ

1. ನೀವು ವ್ಯವಹರಿಸಲು ತಿಳಿದಿರುವ ಭಾಷೆಗಳಾವವು?
2. ನಮ್ಮ ಭಾವನೆಗಳನ್ನು ಉತ್ತಮವಾಗಿ ವ್ಯಕ್ತಮಾಡಲು ಸಹಾಯಕವಾಗುವ ಭಾಷೆ ಯಾವದು?
3. ನಿಮ್ಮ ಶಾಲೆಯಲ್ಲಿ ಮಕ್ಕಳು ಯಾವ ಯಾವ ಭಾಷೆಗಳನ್ನು ಮಾತನಾಡುತ್ತಾರೆ?
4. ಭಾಷೆಯ ಕೌಶಲಗಳು ಯಾವವು?
5. ನಿಮ್ಮ ಶಾಲೆಯಲ್ಲಿ ಭಾಷಾ ಕೌಶಲಗಳನ್ನು ಬೆಳೆಸಲು ಕೈಗೊಂಡ ಉಪಕ್ರಮಗಳು ಯಾವವು?
6. ನೀವು ಭೇಟಿಕೊಟ್ಟ ಉದ್ಯಾನವನದ ಕುರಿತು ಸಂಕ್ಷಿಪ್ತವಾಗಿ ಬರೆಯಿರಿ?

7. ನಿಮ್ಮ ಶಾಲೆಯಲ್ಲಿ ಉದ್ಯಾನವನ ಇದೆಯೇ?
8. ಉದ್ಯಾನವನದಲ್ಲಿ ಮಕ್ಕಳು ಆಡುವ ಆಟಗಳು ಯಾವವು?
9. ನಿಮಗೆ ತಿಳಿದಂತೆ ಭಾಷಾ ಕೌಶಲ್ಯಾಭಿವೃದ್ದಿಗೂ ಉದ್ಯಾನವನಕ್ಕೂ ಸಂಬಂಧವಿದೆಯೇ? ಹೇಗೆ ಬರೆಯಿರಿ
10. ಉದ್ಯಾನವನದ ಮೂಲಕ ಭಾಷಾ ಕೌಶಲ್ಯಾಭಿವೃದ್ದಿಗೆ ಪ್ರಯತ್ನ ಮಾಡಬಹುದೇ?ಹೇಗೆ ತಿಳಿಸಿ.

2. ಸಾಫಲ್ಯ ಪರೀಕ್ಷೆ.

1. ಭಾಷಾವನ ಎಂದರೇನು?
2. ನಿಮ್ಮ ಶಾಲೆಯಲ್ಲಿ ಭಾಷಾವನ ನಿರ್ಮಿಸಲು ಸಾಧ್ಯವಿದೆಯೇ?
3. ಭಾಷಾ ಆಟಗಳು ಎಂದರೇನು?
4. ಭಾಷಾ ಪ್ರಯೋಗಾಲಯದ ನಿರ್ಮಾಣಕ್ಕೆ ಪ್ರಯತ್ನ ಮಾಡಿರುವಿರಾ?
5. ಶಾಲ ಭಾಷಾವನ ನಿರ್ಮಾಣಕ್ಕೆ ನೀವು ಮಾಡಿಕೊಳ್ಳುವ ಮುನ್ತಯಾರಿಗಳ ಕುರಿತು ಬರೆಯಿರಿ.
6. ಓದುವ ಕೌಶಲ್ಯಾಭಿವೃದ್ದಿಗೆ ಭಾಷಾವನದಲ್ಲಿ ನೀವು ಕೈಗೊಳ್ಳುವ ಚಟುವಟಿಕೆಗಳನ್ನು ಬರೆಯಿರಿ.
7. ಭಾಷಾವನದಲ್ಲಿ ಭಾಷಾ ಕೌಶಲ್ಯಾಭಿವೃದ್ದಿಗೆ ಆಟಗಳ ಮೂಲಕ ಕೈಗೊಳ್ಳುವ ಚಟುವಟಿಕೆಗಳನ್ನು ಬರೆಯಿರಿ
8. ಮಾದರಿ ಭಾಷಾವನದ ಪರಿಸರದ ಕುರಿತು ಬರೆಯಿರಿ.
9. ಭಾಷಾವನ ನಿರ್ಮಾಣಕ್ಕೆ ನೀವು ನೀಡುವ ಸಲಹೆಗಳಾವವು?
10. ಈ ಸಂಜೀವಿನಿ ಭಾಷಾವನ ಮಾಡ್ಯೂಲ್ ಅಧ್ಯಯನದಿಂದ ನಿಮ್ಮಲ್ಲುಂಟಾದ ಒಳನೋಟಗಳ ಕುರಿತು ಬರೆಯಿರಿ

**ಈ. ವರ್ಣಮಾಲಾ ಭಾಷಾಗೀತೆ**

ಅಮ್ಮ ಬಾರಮ್ಮ ಭಾಷಾವನವ ನೋಡಮ್ಮ.

ಆ ಅಕ್ಷರಾದಿಗಳನ್ನು ನಾವು ಇಲ್ಲಿ ಕಲಿಯೋಣ.

ಇಲ್ಲಿ ಇರುವ ಸಂತೋಷದ ಕಲಿಕೆ ಎಲ್ಲೂ ಕಂಡಿಲ್ಲ.

ಈ ತೋಟದಲಿ ಆಟದ ಮೂಲಕ ಕಲಿಯೋಣ.

ಉಚ್ಚಾರಣೆಯ ಶೈಲಿಯ ತಿಳಿಯೋಣ.

ಊಟದ ಜೊತೆಯಲಿ ಪಾಠವ ಕಲಿಯೋಣ.

ಋಷಿಮುನಿಗಳ ಕಾಲದ ಆಶ್ರಮ ಕಲಿಕೆ ನೆನೆಯೋಣ.

ಎಲೆಗಳ ಆರಿಸಿ ಜೋಡಿಸಿ ಅಕ್ಷರ ಕಲಿಯೋಣ.

ಏನು? ಏಕೆ? ಹೇಗೆ? ಎಂಬ ಕುತೂಹಲ ಅರಿಯೋಣ.

ಐದು, ಆರು, ಏಳು ಎಂದು ಕನ್ನಡ ಅಂಕಿಯ ಬರೆಯೋಣ.

ಒಲವಿನಿಂದ ನಿಸರ್ಗದ ಚೆಲುವನು ಸವಿಯೋಣ.

ಓಲೆಗರಿಯ ಜ್ಞಾನವನು ಎಲೆಗಳಲಿ ಬರೆಯೋಣ.

ಔಧಾರ್ಯದಿ ಜೊತೆಜೊತೆಯಲ್ಲಿ ನಲಿಯೋಣ.

ಅಂ ಅಃ ಎಂದು ನಾವು ಕಲಿಕೆಯಲ್ಲಿ ತೊಡಗೋಣ.

ಭಾಷಾವನದಲಿ ನಲಿಯೋಣ, ಓದುವ ಬರೆಯುವ ಕೌಶಲ್ಯವ ತಿಳಿಯೋಣ.

**ರಚನೆ – ಲಗಮಣ್ಣಾ ನಾವಿ. ಕನ್ನಡ ಭಾಷೆ ಶಿಕ್ಷಕರು**

*ಆಕರ ಗ್ರಂಥಗಳು*


- ***ಭಾಷಾ ಗಳಿಕೆ ಮತ್ತು ಕಲಿಕೆ–ಖಿಕಆ ಮಾಡ್ಯೂಲ್–2018–19, ರಾಜ್ಯ ಶಿಕ್ಷಣ ಮತ್ತು ತರಬೇತಿ ಇಲಾಖೆ ಬೆಂಗಳೂರು***
- ***ರಾಜ್ಯಭಾಷೆ ಕಲಿಕೆ ಮತ್ತು ಮಾಧ್ಯಮ***
- ***ಉದಯವಾಣಿಪತ್ರಿಕೆಯಮಾಹಿತಿ***
- ***ಭಾಷಾ ಗಳಿಕೆ ಮತ್ತು ಕಲಿಕೆ–ಟಿಪಿಡಿ ಮಾಡ್ಯೂಲ್,2018 – 19,ರಾಜ್ಯ ಶಿಕ್ಷಣ ಮತ್ತು ತರಬೇತಿ ಇಲಾಖೆ ಬೆಂಗಳೂರು***
- ***ಭಾಷಾ ಕೌಶಲ್ಯಗಳು ,ಅಭಿವೃದ್ಧಿ, ವ್ಯಾಖ್ಯಾನ ಮತ್ತು ಪ್ರಕಾರಗಳು, 2023–24*** **www.study.com**
- ***ಮಾತನಾಡುವಿಕೆ ಮತ್ತು ಆಲಿಸುವಿಕೆ, 2022– 23,*** **WWW.tess.India.edu.in**
- ***ವಿದೇಶಿ ಭಾಷಾ ಶಿಕ್ಷಕರ ವೃತ್ತಿ, ವಿರಾಜ್ ಗುಪ್ತಾ,05–01–2024***

- *ಭಾಷಾ ದೀಪ್ತಿ, 2019–20 ಆಲೂರು ವೆಂಕಟರಾವ್ ಭಾಷಾ ಕೌಶಲ್ಯ ತರಬೇತಿ ಕೇಂದ್ರ ಕಲಬುರಗಿ*
- *ಮಾತೃಭಾಷೆ ಕನ್ನಡತ್ವ ಮತ್ತು ಬೋಧನಾ ಮಾರ್ಗ, 2018, ವಿಜಯಕುಮಾರ್ ಗೊತಗಿ*
- *ಭಾಷಾ ಬೋಧನೆಯ ಜ್ಞಾನವನ್ನು ವಿದ್ಯಾರ್ಥಿಗಳ ಪರಿಸರದೊಂದಿಗೆ ಏಕೆ ಸಂಪರ್ಕಿಸಬೇಕು, 27–6–2022, ಕಮಲ ಭಂಡಾರಿ ಲರ್ನಿಂಗ್ ಕರ್ವ್ ಪತ್ರಿಕೆ*


**ಹೆಚ್ಚಿನ ಓದಿನ ಲಿಂಕ್‌ಗಳು :**


1. **https://azimpremjiuniversity.edu.in/news/2022/teaching-language-connecting-content-to-context**
2. **https://www.studyfrenchspanish.com/foreign-language-teachers/**
3. **https://study.com/academy/lesson/language-skills-in-children-development-definition-types.html**
4. **https://in.indeed.com/career-advice/resumes-cover-letters/language-skills**
5. **https://www.researchgate.net/publication/323665990_A_Language_Teacher_Qualities_That_a_Teacher_Must_Have**
6. **https://ebooks.inflibnet.ac.in/socp13/chapter/language-and-education/**

# ಭಾಷಾವನ ಚಟುವಟಿಕೆ ಛಾಯಾಚಿತ್ರಗಳು









ಸಂವಿಧಾನದ ಆಶಯ ಮತ್ತು ಜಾಗತಿಕ ಚಿಂತನೆಗಳಿಗೆ ಅನುಗುಣವಾಗಿ ಶಾಲಾ ಮಟ್ಟದಲ್ಲಿ ಸ್ವಾಯತ್ತತೆ ಹಾಗೂ ಸ್ವಯಂ ಆಡಳಿತವನ್ನು ತರಲು ಶಿಕ್ಷಣಾಧಿಕಾರಿಗಳ ಮನೋಭಾವ, ದೃಷ್ಟಿಕೋನ ಹಾಗೂ ಆಚರಣೆಗಳಲ್ಲಿ ಬದಲಾವಣೆಗಳನ್ನು ತರಬೇಕು. ಈ ಬದಲಾವಣೆ ತರಲು ಅಗತ್ಯವಾದ ಸಾಮರ್ಥ್ಯಾಭಿವೃದ್ಧಿ ಮಾಡುವ ಸಂಸ್ಥೆ 'ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣಾ ಸಂಸ್ಥೆ'.





ಉತ್ತಮ ನಾಯಕರು ಮತ್ತಷ್ಟು ನಾಯಕರನ್ನು ರೂಪಿಸುತ್ತಾರೆ, ಹಿಂಬಾಲಕರನ್ನಲ್ಲ. – ರಾಲ್ಫ್ ನಾಡರ್.

ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣಾ ಸಂಸ್ಥೆ, ಕರ್ನಾಟಕ (SISLEP)
ಡಯಟ್ ಆವರಣ, ಕಾಲೇಜು ರಸ್ತೆ, ಧಾರವಾಡ – 580008

ದೂರವಾಣಿ ಸಂಖ್ಯೆ : 0836-2441129
ಇ-ಮೇಲ್ : sislepdirector.dwd@gmail.com